VOLUME: 16 | 14 MARCH 2026 | ಶನಿವಾರ | RS: 2 | PAGE: 06 ISSUE: 49 ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

‘ಬಿಂದಾಸ್’ ನಟಿ ಹನ್ಸಿಕಾ ಮೋಟ್ವಾನಿ ಅವರು ಉದ್ಯಮಿ ಸೊಹೇಲ್ ಖತುರಿಯಾ 7 ಜೊತೆಗಿನ ನಾಲ್ಕು ವರ್ಷಗಳ ದಾಂಪತ್ಯ ಜೀವನಕ್ಕೆ ಅಂತ್ಯ ಹಾಡಿದ್ದಾರೆ. ಮುಂಬೈನ ಬಾಂದ್ರಾ ಉಪನಗರದಲ್ಲಿರುವ ಕೌಟುಂಬಿಕ ನ್ಯಾಯಾಲಯವು ನಟಿ ಹನ್ಸಿಕಾ ಮೋಟ್ವಾನಿ ಮತ್ತು ಉದ್ಯಮಿ ಸೊಹೇಲ್ ಖತುರಿಯಾ ಅವರಿಗೆ ವಿಚ್ಛೇದನ ನೀಡಿದೆ ಎಂದು ಅವರ ವಕೀಲ ಅದ್ನಾನ್ ಶೇಖ್ ದೃಢಪಡಿಸಿದ್ದಾರೆ. ಇದನ್ನೂ ಓದಿ: ಪ್ರಿಯಕರ ಫರ್ಮಾನ್ ಖಾನ್ ಜೊತೆ ಕುಂಭಮೇಳದ ವೈರಲ್ ತಾರೆ ಮೊನಾಲಿಸಾ ಮದುವೆ



BHARATHA SARATHI
KANNADA DAILY NEWS PAPER
# ಭಾರತ ಸಾರಥಿ
CALL 9740160669
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ
ಗಂಡಸಿ ಸದಾನಂದಸ್ವಾಮಿ



# ಒಡಿಶಾ ಶಾಸಕರನ್ನು ನಾನು ಕರೆಸಿಲ್ಲ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು: “ನಾನು ಒಡಿಶಾ ಶಾಸಕರನ್ನು ಕರೆಸಿಲ್ಲ, ಅವರೇ ಬೆಂಗಳೂರಿಗೆ ಬಂದಿದ್ದಾರೆ. ಅಧಿವೇಶನ ಕಲಾಪ ಮುಗಿದ ಬಳಿಕ ನಾನು ಹೋಗಿ ಅವರನ್ನು ಭೇಟಿ ಮಾಡುತ್ತೇನೆ” ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಡಿ.ಕೆ. ಶಿವಕುಮಾರ್ ಇಂದು ಶುಕ್ರವಾರ ಪ್ರತಿಕ್ರಿಯೆ ನೀಡಿದರು. ಒಡಿಶಾ ಶಾಸಕರು ರಾಮನಗರದ ರೆಸಾರ್ಟ್ ನಲ್ಲಿದ್ದು, ನೀವೇ ಅವರನ್ನು ಕರೆಸಿದ್ದೀರಿ ಎಂದು ಕೇಳಿದಾಗ ಅವರು ಈ ರೀತಿ ಉತ್ತರಿಸಿದರು.

“ಅವರು ಯಾವ ಕಾರಣಕ್ಕೆ ಬಂದಿದ್ದಾರೆ ಎಂದು ಗೊತ್ತಿಲ್ಲ. ಆ ರಾಜ್ಯದ ನಮ್ಮ ಪಿಸಿಸಿ ಅಧ್ಯಕ್ಷರು ಕರೆ ಮಾಡಿ ನಮ್ಮ ಶಾಸಕರು ಬರುತ್ತಿದ್ದಾರೆ ಎಂದು ಕೇಳಿದರು. ಪಕ್ಷದ ವಿಚಾರ ಇರಬೇಕು, ನಾನೇ ಹೋಗಿ ಭೇಟಿ ಮಾಡುವೆ ಎಂದು ಹೇಳಿದ್ದೇನೆ. ಅವರಿಗೆ ಮೈಸೂರು ನೋಡುವ ಆಸೆ ಇದೆ. ಅವರು ನಾವು ಬರುತ್ತೇವೆ ಎಂದು ತಿಳಿಸಿದಾಗ, ನಾನು ಬನ್ನಿ ಎಂದು ಹೇಳಿದೆ. ಆರಾಮಾಗಿ ಇರುವ ಜಾಗ ಬೇಕು ಎಂದು ಕೇಳಿದರು, ಹೀಗಾಗಿ ಅವರಿಗೆ ವ್ಯವಸ್ಥೆ ಮಾಡಿದ್ದೇವೆ” ಎಂದು ಹೇಳಿದರು.

ರಾಜ್ಯ ಸಭೆ ಚುನಾವಣೆಯಲ್ಲಿ ಅಡ್ಡಮತದಾನವಾಗದಂತೆ ತಡೆಯಲು ನಿಮಗೆ ಪಕ್ಷ ಟಾಸ್ಕ್ ನೀಡಿದೆಯೇ ಎಂದು ಕೇಳಿದಾಗ, “ಪಕ್ಷ ಹೇಳಿದ್ದನ್ನು ಮಾಡಬೇಕು. ಎಲ್ಲಾ ರಾಜ್ಯಗಳಲ್ಲೂ ಈ ರೀತಿ ನಡೆಯುತ್ತಿರುತ್ತದೆ.



ಇದು ಹೊಸತೇನಲ್ಲ. ನನ್ನ ಭೇಟಿಗೆ ಸಮಯ ಕೇಳಿದರು. ನಾನು ಅಧಿವೇಶನ ನಡೆಯುತ್ತಿದೆ. ಇಲ್ಲಿಗೆ ಬರಬೇಡಿ ಕಲಾಪ ಮುಗಿಸಿಕೊಂಡು ನಾನೇ ಬರುತ್ತೇನೆ ಎಂದು ಹೇಳಿರುವೆ” ಎಂದು ಹೇಳಿದೆ.

ಆಪರೇಷನ್ ಕಮಲ ತಪ್ಪಿಸಲು ಈ ಪ್ರಯತ್ನವೇ ಎಂದು ಕೇಳಿದಾಗ, “ನನಗೆ ಈ ಬಗ್ಗೆ ಗೊತ್ತಿಲ್ಲ. ಬೆಂಗಳೂರು ಸುರಕ್ಷಿತ ಹೀಗಾಗಿ ಅವರು ಇಲ್ಲಿಗೆ ಬಂದು ವೀಕ್ಷಣೆ ಮಾಡಬೇಕು ಎಂದು ಹೇಳಿದರು, ನಾನು ಅವರನ್ನು ಭೇಟಿಯಾಗಿಲ್ಲ. ಅವರು ನಮ್ಮ ಸಹೋದ್ಯೋಗಿಗಳು, ಅವರು ಬರುತ್ತಾರೆ ಎಂದಾಗ ಹಾಗೂ ಪಿಸಿಸಿ ಅಧ್ಯಕ್ಷರು ನನಗೆ ಈ ವಿಚಾರವಾಗಿ ಕೇಳಿದಾಗ, ನಾನು ಬನ್ನಿ ಎಂದು ಹೇಳಿರುವೆ. ಅವರನ್ನು ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನಾನು ಇದನ್ನು ವಿಲಾಸ್ ರಾವ್ ದೇಶಮುಖ್ ಅವರ ಸರ್ಕಾರದಸಮಯದಿಂದಲೂ ಮಾಡಿಕೊಂಡು ಬರುತ್ತಿರುವೆ. ಅಹ್ಮದ್ ಪಟೇಲ್ ಅವರ ರಾಜ್ಯಸಭೆ ಚುನಾವಣೆ, ಮಧ್ಯಪ್ರದೇಶ ಸೇರಿದಂತೆ ಅನೇಕ ಬಾರಿ ಈ ಕೆಲಸ ಮಾಡಿದ್ದೇನೆ” ಎಂದರು.

ಪಕ್ಷಕ್ಕೆ ಈ ರೀತಿ ಟ್ರಬಲ್ ಆದಾಗೆಲ್ಲಾ ನೀವೇ ತಲೆ ಕೊಡುತ್ತೀರಿ, ನಿಮ್ಮ ಸಮಸ್ಯೆ ಬಗೆಹರಿಯುತ್ತಿಲ್ಲವಲ್ಲ ಎಂದು ಕೇಳಿದಾಗ, “ಕಾಲ ನಿರ್ಣಯ ಮಾಡುತ್ತದೆ” ಎಂದು ತಿಳಿಸಿದರು.

ಪಕ್ಷ ಈ ವಿಚಾರದಲ್ಲಿ ನಿಮಗೆ ಜವಾಬ್ದಾರಿ ನೀಡಿದೆಯೇ ಎಂದು ಕೇಳಿದಾಗ, “ಯಾವುದೇ ರೀತಿಯ ಜವಾಬ್ದಾರಿ ನೀಡಿಲ್ಲ. ನಮ್ಮ ಪಿಸಿಸಿ ಅಧ್ಯಕ್ಷರು ಶಾಸಕರು ಬರುತ್ತಿದ್ದಾರೆ ಎಂದು ಹೇಳಿದ್ದು, ನೀವು ನಮ್ಮ ಅತಿಥಿಗಳು ಬನ್ನಿ” ಎಂದು ತಿಳಿಸಿದರು.

ಸಚಿವ ಸಂಪುಟ ಪುನಾರಚನೆಗೆ ಒತ್ತಡ ಹೆಚ್ಚುತ್ತಿರುವ ಬಗ್ಗೆ ಕೇಳಿದಾಗ, “ಮಂತ್ರಿಯಾಗುವ ಆಸೆ ಇರುತ್ತದೆ. ನಾನು ಮೊದಲ ಬಾರಿಗೆ ಮಂತ್ರಿಯಾಗಿದ್ದೆ. ಈಗ ನಮಗೆ ವಯಸ್ಸಾಗಿದೆ. ಹಿರಿಯ ನಾಗರೀಕರಾಗಿದ್ದೇವೆ. ಅವರಿಗೂ ಆಸೆ ಇದೆ” ಎಂದರು.

ಬಜೆಟ್ ಕುರಿತಾಗಿ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರ ಅಸಮಾಧಾನ ಹೇಳಿಕೆ ಬಗ್ಗೆ ಕೇಳಿದಾಗ, “ಅವರು ಜಿಲ್ಲಾ ನ್ಯಾಯಾಲಯ ಬೇಕು ಎಂದು ಕೇಳಿದ್ದರು, ನಾವು ಅದನ್ನು ನೀಡಿದ್ದೇವೆ. ಬೇಕಾದಷ್ಟು ಕೆಲಸವನ್ನು ನೀಡಿದ್ದೇವೆ. ಅವುಗಳನ್ನು ಘೋಷಣೆ ಮಾಡುತ್ತೇವೆ” ಎಂದು ತಿಳಿಸಿದರು.

## ಹೋಟೆಲ್‌ನವರು ತಾಳ್ಮೆಯಿಂದಿರಿ

ಬೆಂಗಳೂರು: ಆಸ್ಪತ್ರೆಗಳಿಗೆ, ವಿದ್ಯಾರ್ಥಿ ನಿಲಯಗಳಿಗೆ ವಾಣಿಜ್ಯ ಬಳಕೆಯ ಅನಿಲದ ಸಿಲಿಂಡರ್‌ಗಳನ್ನು ಒದಗಿಸಲಾಗುವುದು. ಹೋಟೆಲ್‌ನವರು ಇನ್ನೂ ಒಂದು ವಾರ ತಾಳೆಯಿಂದ ಇರಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ವಿಧಾನಪರಿಷತ್‌ನಲ್ಲಿ ತಿಳಿಸಿದರು.

ಶೂನ್ಯ ವೇಳೆಯಲ್ಲಿ ಆಡಳಿತ ಪಕ್ಷದ ಸದಸ್ಯರಾದ ಐವಾನ್ ಡಿಸೋಜ ಹಾಗೂ ಎಂ.ನಾಗರಾಜ ಯಾದವ್ ಅವರು ಮಾಡಿದ ಪ್ರಸ್ತಾಪಕ್ಕೆ ಸಚಿವರು ಇಂದು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ತೈಲ ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿ ಸಲಹೆ ಸೂಚನೆಗಳನ್ನು ನೀಡಲಾಗಿದೆ. ತಕ್ಷಣಕ್ಕೆ ವಾಣಿಜ್ಯ ಬಳಕೆ ಅನಿಲದ ಪೂರೈಕೆ ಸಮಸ್ಯೆಯಿದ್ದು, ಒಂದು ವಾರದ ಬಳಿಕ ಬಗೆಹರಿಯಲಿದೆ ಎಂದರು.

ಹೀಗಾಗಿ ಅಗತ್ಯವಿರುವಷ್ಟು ಅಡುಗೆ ತಯಾರು ಮಾಡಬೇಕು. ಉಳಿದಂತೆ ಎಲೆಕ್ಟ್ರಿಕ್ ಒಲೆ ಬಳಕೆ ಮಾಡಿಕೊಳ್ಳಬೇಕು ಎಂದರು. ಈಗಾಗಲೇ 2 ಹಡಗುಗಳು ಬಂದಿದ್ದು, ಇನ್ನೂ 10 ಹಡಗುಗಳು ಬರುತ್ತಿವೆ. ಕಾಳಸಂತೆಯಲ್ಲಿ ಅನಿಲದ ಸಿಲಿಂಡರ್‌ಗಳು ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ಹಾಗೂ ತಕ್ಷಣ ಕ್ರಮ ಕೈಗೊಳ್ಳಲು ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ.

ಸದ್ಯಕ್ಕೆ ವಾಣಿಜ್ಯ ಬಳಕೆಯ ಅನಿಲದ ಸಿಲಿಂಡರ್ ದಾಸ್ತಾನು ಇಲ್ಲ. ತುರ್ತು ಕಾರ್ಯಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಒದಗಿಸುತ್ತೇವೆ. ಆಟೋ ರಿಕ್ಷಾಗಳಿಗೆ ಬೆಂಗಳೂರಿನಲ್ಲಿ ಗ್ಯಾಸ್ ಒದಗಿಸಲು ಹಾಗೂ ಮಂಗಳೂರಿನಲ್ಲೂ ಗ್ಯಾಸ್ ಸಮಸ್ಯೆ ಬಗೆಹರಿಸಲು ಸೂಚಿಸಲಾಗಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಐವಾನ್ ಡಿಸೋಜಾ ಗ್ಯಾಸ್ ಸಮಸ್ಯೆಯಿಂದಾಗಿ ಕಟ್ಟಿಗೆ ದರ ಹೆಚ್ಚಾಗಿದೆ. ಮಂಗಳೂರು ಭಾಗದಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ತೀವ್ರವಾಗಿದೆ ಎಂದರು. ನಾಗರಾಜು ಮಾತನಾಡಿ, ಆಟೋಗಳು, ಹೋಟೆಲ್‌ಗಳು, ಹಾಸ್ಟೆಲ್‌ಗಳಿಗೆ ಗ್ಯಾಸ್ ಸಿಲಿಂಡರ್ ಸಿಗದೆ ಊಟದ ಮೆನುವಿನಲ್ಲಿ ಬದಲಾವಣೆಯಾಗಿದೆ.

ಹಲವು ಇಂದಿರಾ ಕ್ಯಾಂಟೀನ್‌ಗಳಿಗೆ ಬೀಗ ಬಿದ್ದಿದೆ. ವಾಣಿಜ್ಯ ಸಿಲಿಂಡರ್‌ಗಳ ಸಮಸ್ಯೆಯಾಗದಂತೆ ಹಾಗೂ ಕಾಳಸಂತೆಯಲ್ಲಿ ಮಾರಾಟವಾಗದಂತೆ ತಿಳಿಸಿದರು. ತೆರಿಗೆ ವಿಧಿಸುವ ವಿಚಾರ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದೆ. ರಾಜ್ಯದಿಂದ ವಿಧಿಸಲಾಗುವ ತೆರಿಗೆ ಬಗ್ಗೆ ಮಾಹಿತಿ ಪಡೆದು ಹೇಳಲಾಗುವುದು.

## ಅಪಘಾತ: ಮೂವರ ಬಲಿ

ಸಕಲೇಶಪುರ: ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ ಮತ್ತು ಕಾರಿನ ಭೀಕರ ಅಪಘಾತ ಸಂಭವಿಸಿ ಮೂವರು ಸ್ಥಳದಲ್ಲೇ ಮೃತಪಟ್ಟ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ಶಿರಾಡಿ ಘಾಟ್‌ನ ಗುಂಡ್ಯ ಸಮೀಪ ಶುಕ್ರವಾರ ಸಂಜೆ ನಡೆದಿದೆ.

ಮಂಗಳೂರಿನಿಂದ ಸಕಲೇಶಪುರದತ್ತ ಸಂಚರಿಸುತ್ತಿದ್ದ ರಾಜಹಂಸ ಬಸ್ ಹಾಗೂ ಎದುರಿನಿಂದ ಬರುತ್ತಿದ್ದ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಡಿಕ್ಕಿಯ ತೀವ್ರತೆಯಿಂದ ಕಾರು ಸಂಪೂರ್ಣ ಜಖಂಗೊಂಡಿದ್ದು, ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರನ್ನು ಕೊಕ್ಕಡ ನಿವಾಸಿ ಚಂದ್ರ ಶೇಖರ್ ಗೌಡ ಹಾಗೂ ಉಜಿರೆ ನಿವಾಸಿ ಗಳಾದ ಶ್ರೀಧರ್ ಮರಕಡ ಮತ್ತು ಜನಾ ರ್ದನ ಕೆರಿಮಾರ್ ಎಂದು ಗುರುತಿಸಲಾಗಿದೆ.

# ಯುದ್ಧ: ಪ್ರವಾಸೋದ್ಯಮದ ಮೇಲೂ ಪರಿಣಾಮ

ಬೆಂಗಳೂರು: ಇರಾನ್-ಇಸ್ರೇಲ್ ಕದನ ಹದಿನಾಲ್ಕು ದಿನಗಳು ಕಳೆದ್ರೂ ಕೊನೆಗಾಣುತ್ತಿಲ್ಲ. ಇದರಿಂದಾಗಿ ಹೋಟೆಲ್, ಸಾರಿಗೆ ನಂತರ ಇದೀಗ ಪ್ರವಾಸೋದ್ಯಮ ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ. ಒಂದೆಡೆ ಬೆಂಗಳೂರಿಗೆ ಬರುವ ವಿದೇಶಿ ಪ್ರವಾಸಿಗರ ಸಂಖ್ಯೆ ಭಾರೀ ಕಡಿತವಾಗಿದ್ರೇ, ಮತ್ತೊಂದೆಡೆ ರಾಜಧಾನಿಯಿಂದ ಫಾರಿನ್‌ಗೆ ಹೋಗುವವರ ಸಂಖ್ಯೆ ಇಳಿಮುಖವಾಗಿದೆ.

ಮಧ್ಯಪ್ರಾಚ್ಯದ ಕದನ ಸದ್ಯಕ್ಕೆ ಕೊನೆಗಾಣೋ ಲಕ್ಷಣಗಳಿಲ್ಲ. ಇದರ ಪರಿಣಾಮ ದೇಶ ಹಾಗೂ ರಾಜ್ಯದ ಪ್ರವಾಸೋದ್ಯಮ ವಿಲವಿಲ ಒದ್ದಾಡುವಂತಾಗಿದೆ. ಒಂದೆಡೆ ಪ್ರತಿನಿತ್ಯ ಗಲ್ಫ್ ದೇಶಗಳಿಂದ ಬರೋ ಮಿಡಲಿಸ್ಟ್ ಏರ್ ಲೈನ್ಸ್‌ಗಳು ಬೆಂಗಳೂರಿಗೆ ಬರೋದು ಕ್ಯಾನ್ಸಲ್ ಆಗ್ತಿವೆ. ಅದ್ರಲ್ಲೂ ಕತಾರ್, ಎಮಿರೇಟ್ಸ್, ಒಮನ್ ಏರ್‌ಲೈನ್, ಇತಿಹಾರ್ಡ್, ಗಲ್ಫ್ ಏರ್, ಕುವೈತ್ ಏರ್‌ವೇಸ್, ಏರ್ ಅರೇಬಿಯಾ ಫ್ಲೈಟ್‌ಗಳಿಂದ ಪ್ರತಿದಿನ 5,000 ಜನ ಪ್ರವಾಸಿಗರು ಬೆಂಗಳೂರಿಗೆ ಬರುತ್ತಿದ್ದರು.



ಆದರೆ ಮಾರ್ಚ್ ತಿಂಗಳಲ್ಲಿ ವಿದೇಶಿಗರು ಫ್ಲೈಟ್ ಕ್ಯಾನ್ಸಲ್‌ನಿಂದ ಬರ್ತಿಲ್ಲ. ಯಾವುದೇ ಆಲ್ಟರ್‌ನೇಟಿವ್ ಫ್ಲೈಟ್ ಸಹ ಅರೆಂಜ್ ಆಗದೇ 50-60% ವಿದೇಶಿಗರು ರಿಫಂಡ್ ಕೇಳ್ತಿದ್ದಾರೆ. ಇದರಿಂದ ಬೆಂಗಳೂರಿನ ಶೇಕಡಾ 50% ಹೋಟೆಲ್ ರೂಮ್‌ಗಳು ಖಾಲಿಯಾಗಿವೆ.

ಇನ್ನು ಬೆಂಗಳೂರಿನಿಂದ ಪ್ರತಿ ವರ್ಷ ರಂಜಾನ್‌ಗೆ ದುಬೈ, ಸೌದಿ ಅರೇಬಿಯಾ ಸೇರಿದಂತೆ ಹಲವು ಗಲ್ಫ್ ನಗರಗಳಿಗೆ ತೆರಳುತ್ತಿದ್ದ ಪ್ರವಾಸಿಗರು ಯುದ್ಧದ ಭೀತಿ ಹಾಗೂ ಫ್ಲೈಟ್ ಅಲಭ್ಯತೆಯಿಂದ ಕ್ಯಾನ್ಸಲ್ ಮಾಡಿದ್ದಾರೆ. ಜೊತೆಗೆ ಬೇಸಿಗೆ ರಜೆಗೆ ಫಾರೀನ್ ಪ್ಲಾನ್ ಮಾಡಿದ್ದ ಬೆಂಗಳೂರಿಗರು ಸಹ ಕ್ಯಾನ್ಸಲ್ ಮಾಡ್ತಿದ್ದು, ರಾಜ್ಯ ಪ್ರವಾಸೋದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಇದ್ರ ಜೊತೆಗೆ ಏರ್‌ಫೇರ್ ದರ ಸಹ ಹೆಚ್ಚಾಗಿದ್ದು, ಫ್ಲೈಟ್ ಟಿಕೆಟ್ ದರ ಯೂರೋಪಿಯನ್ ದೇಶಗಳಿಗೆ ಹೆಚ್ಚಾಗಿದೆ. ಉದಾಹರಣೆಗೆ ಬೆಂಗಳೂರಿನಿಂದ ಲಂಡನ್‌ಗೆ ಸುಮಾರು ಒಂದು ಲಕ್ಷದ ಮೇಲಾಗಿದೆ.

ಇದು ಸಹ ಫಾರೀನ್ ಟ್ರಿಪ್ ಕ್ಯಾನ್ಸಲ್‌ಗೆ ಪ್ರಮುಖ ಕಾರಣವಾಗಿದಂತಾಗಿದೆ.

ಒಟ್ನಲ್ಲಿ ಕೊರೋನಾ ನಂತರ ಈ ಗಲ್ಫ್ ರಾಷ್ಟ್ರಗಳ ಯುದ್ಧ ಪ್ರವಾಸೋದ್ಯಮಕ್ಕೆ ಬಹುದೊಡ್ಡ ಹೊಡೆತ ನೀಡಿದ್ದು, ಟೂರಿಸಂ ಕ್ಷೇತ್ರ ಅಧೋಗತಿಗೆ ತಲುಪುತ್ತಿದೆ.




ನಾವು ಯಾರ ಪರವಾಗಿ ಇದ್ದೇವೆ ಎನ್ನುವ ಸ್ಪಷ್ಟ ಅರಿವು ಮಾಧ್ಯಮದವರಿಗೆ ಇರಬೇಕು. ಸರ್ಕಾರ ಕಟ್ಟ ಕಡೆಯ ಮನುಷ್ಯರ ಪರವಾಗಿ ಇದೆಯಾ ಎನ್ನುವ ಬಗ್ಗೆ ಗಮನ ಹರಿಸಿ, ವೃತ್ತಿಧರ್ಮವನ್ನು ಬಹಳ ಮುಖ್ಯವಾಗಿ ಕಾಪಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಬ್ಯಾಂಕ್ವೆಟ್ ಹಾಲ್ ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಯ್ಕೆಯಾದ ಪತ್ರಕರ್ತರಿಗೆ “2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು” ವಿತರಿಸಿ, ಸನ್ಮಾನಿಸಿ ಮಾತನಾಡಿದರು.

## ಏನಾಗಲಿದೆ ಕಾದುನೋಡಿ

ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿನ ಸಂಘರ್ಷ 14ಕ್ಕೆ ದಿನಕ್ಕೆ ಕಾಲಿಟ್ಟಿದ್ದು, ಮತ್ತಷ್ಟು ತಾರಕಕ್ಕೇರಿದೆ. ಇರಾನ್ ದೇಶದ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿಯ ಮೇಲೂ ವಾಯು ದಾಳಿಯಾಗಿದ್ದು, ಅವರ ಒಂದು ಕಾಲು ಕಟ್ ಆಗಿದ್ದು, ಕೋಮಾ ಸ್ಥಿತಿಗೆ ಜಾರಿದ್ದಾರೆಂದು ಹೇಳಲಾಗುತ್ತಿದೆ. ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಗೆ ಹೊಸದಾಗಿ ಬೆದರಿಕೆ ಹಾಕಿದ್ದಾರೆ.

ಈ ಕುರಿತು “ಟ್ರುತ್ ಸೋಶಿಯಲ್ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಇಂದು ಈ ವಿಲಕ್ಷಣ ಕೊಳಕುಗಳಿಗೆ ಏನಾಗುತ್ತದೆ ಎಂಬುದನ್ನು ನೋಡಿ ಎಂದಿದ್ದಾರೆ. ಇರಾನ್‌ನ ನೌಕಾಪಡೆಯು ಹೋಗಿದೆ. ಅವರ ವಾಯುಪಡೆಯು ಇನ್ನು ಮುಂದೆ ಇರಲ್ಲ. ಕ್ಷಿಪಣಿಗಳು, ಡ್ರೋನ್‌ಗಳು ಮತ್ತು ಎಲ್ಲವನ್ನೂ ನಾಶಪಡಿಸಲಾಗುತ್ತಿದೆ. ಅವರ ನಾಯಕರನ್ನು ಭೂಮಿಯಿಂದ ಮೇಲೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ.ಮಧ್ಯಪ್ರಾಚ್ಯದಲ್ಲಿನ ಸಂಘರ್ಷ 14ಕ್ಕೆ ದಿನಕ್ಕೆ ಕಾಲಿಟ್ಟಿದ್ದು, ಮತ್ತಷ್ಟು ತಾರಕಕ್ಕೇರಿದೆ. ಇರಾನ್ ದೇಶದ ನೂತನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿಯ ಮೇಲೂ ವಾಯು ದಾಳಿಯಾಗಿದ್ದು, ಅವರ ಒಂದು ಕಾಲು ಕಟ್ ಆಗಿದ್ದು, ಕೋಮಾ ಸ್ಥಿತಿಗೆ ಜಾರಿದ್ದಾರೆಂದು ಹೇಳಲಾಗುತ್ತಿದೆ. ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಗೆ ಹೊಸದಾಗಿ ಬೆದರಿಕೆ ಹಾಕಿದ್ದಾರೆ.

ಈ ಕುರಿತು “ಟ್ರುತ್ ಸೋಶಿಯಲ್ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಇಂದು ಈ ವಿಲಕ್ಷಣ ಕೊಳಕುಗಳಿಗೆ ಏನಾಗುತ್ತದೆ ಎಂಬುದನ್ನು ನೋಡಿ ಎಂದಿದ್ದಾರೆ. ಇರಾನ್‌ನ ನೌಕಾಪಡೆಯು ಹೋಗಿದೆ. ಅವರ ವಾಯುಪಡೆಯು ಇನ್ನು ಮುಂದೆ ಇರಲ್ಲ. ಕ್ಷಿಪಣಿಗಳು, ಡ್ರೋನ್‌ಗಳು ಮತ್ತು ಎಲ್ಲವನ್ನೂ ನಾಶಪಡಿಸಲಾಗುತ್ತಿದೆ. ಅವರ ನಾಯಕರನ್ನು ಭೂಮಿಯಿಂದ ಮೇಲೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ.

ಈಗ ನಾನು ಅಮೆರಿಕದ 47 ನೇ ಅಧ್ಯಕ್ಷನಾಗಿ ಅವರನ್ನು ಕೊಲ್ಲುತ್ತಿದ್ದೇನೆ. ಹಾಗೆ ಮಾಡುವುದು ಎಷ್ಟು ದೊಡ್ಡ ಗೌರವ! ಎಂದು ಅವರಷ್ಟಕ್ಕೆ ಅವರೇ ಹೊಗಳಿಕೊಂಡಿದ್ದಾರೆ.ಅವರು 47 ವರ್ಷಗಳಿಂದ ಪ್ರಪಂಚದಾದ್ಯಂತ ಅಮಾಯಕರನ್ನು ಕೊಲ್ಲುತ್ತಿದ್ದಾರೆ. ಈಗ ನಾನು ಅಮೆರಿಕದ 47 ನೇ ಅಧ್ಯಕ್ಷನಾಗಿ ಅವರನ್ನು ಕೊಲ್ಲುತ್ತಿದ್ದೇನೆ. ಹಾಗೆ ಮಾಡುವುದು ಎಷ್ಟು ದೊಡ್ಡ ಗೌರವ! ಎಂದು ಅವರಷ್ಟಕ್ಕೆ ಅವರೇ ಹೊಗಳಿಕೊಂಡಿದ್ದಾರೆ.

# ಯುದ್ಧದ ನಡುವೆಯೂ ಭಾರತ ಸೇರಿದ ಹಡಗುಗಳು

ನವದೆಹಲಿ: ಮಧ್ಯಪ್ರಾಚ್ಯದ ದೇಶಗಳು ಯುದ್ಧಗ್ರಸ್ತವಾದಾಗಲೆಲ್ಲಾ ತೈಲ ಸಂಬಂಧಿತ ಎಲ್ ಪಿಜಿ, ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಜಾಗತಿಕ ಮಟ್ಟದಲ್ಲಿ ವ್ಯತ್ಯಯವಾಗಿ, ಭಾರತಕ್ಕೆ ಪೂರೈಕೆ ಸರಪಳಿಯಲ್ಲಿ ಬಹುದೊಡ್ಡ ಸವಾಲಾಗಿ ಪರಿಣಮಿಸುತ್ತದೆ.

ಈಗ ಇಸ್ರೇಲ್-ಅಮೆರಿಕ ಜಂಟಿ ದಾಳಿಯಿಂದ ಇರಾನ್ ಯುದ್ಧಗ್ರಸ್ತವಾಗಿದ್ದು ತೈಲೋತ್ಪನ್ನಗಳ ಪೂರೈಕೆಗೆ ಆಯಕಟ್ಟಿನ ಜಾಗವಾಗಿದ್ದ ಹಾರ್ಮುಜ್ ಜಲಸಂಧಿ ಸಂಪೂರ್ಣ ಬಂದ್ ಆಗಿರುವುದು ತೈಲ ಬೆಲೆ ಏರಿಕೆ, ಪೂರೈಕೆ ಸ್ಥಗಿತಕ್ಕೆ ಕಾರಣವಾಗಿದೆ. ತತ್ಪರಿಣಾಮವಾಗಿ ಭಾರತದಲ್ಲಿ ಎಲ್ ಪಿಜಿ, ಸಿಎನ್ ಜಿ, ಎಲ್ ಎನ್ ಜಿ ಪೂರೈಕೆಯಲ್ಲಿ ವ್ಯತ್ಯಯಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದು ಜನರಲ್ಲಿ ಆತಂಕ ಮೂಡಿಸುತ್ತಿದೆ. ಆದರೂ ತೈಲ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ, ಈ ವಿಷಯದಲ್ಲಿ ನಮ್ಮ ಸ್ಥಿತಿ ಉತ್ತಮವಾಗಿದೆ ಜನರು ಆತಂಕಪಡುವ ಅವಶ್ಯಕತೆ ಇಲ್ಲ ಎಂದು ಭಾರತ ಸರ್ಕಾರ ಹೇಳಿದೆ.

ಭಾರತ ತನ್ನ ಇಂಧನ ಬೇಡಿಕೆಯನ್ನು ತಲುಪುವುದಕ್ಕೆ ಶೇ.90 ರಷ್ಟು ಆಮದಿನ ಮೇಲೆ ಅವಲಂಬಿತವಾಗಿದೆ. ಮಧ್ಯಪ್ರಾಚ್ಯ ಯುದ್ಧಗ್ರಸ್ತವಾದರೆ ನಮ್ಮ ಪರಿಸ್ಥಿತಿ ಏನಾಗಲಿದೆ ಎಂಬುದನ್ನು ಇರಾನ್ ಮೇಲಿನ ಯುದ್ಧ ಮತ್ತೊಮ್ಮೆ ತೋರಿಸಿದೆ. ಆದಾಗ್ಯೂ ಭಾರತ ಸುರಕ್ಷಿತವಾಗಿರುವುದು ಹೇಗೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಇದಕ್ಕೆ ಇರುವ ಉತ್ತರ ಎಂದರೆ ಮೊದಲನೆಯದ್ದು ತನ್ನ ತೈಲ ಆಮದಿನ ಅವಲಂಬನೆಯನ್ನು ವೈವಿಧ್ಯಮಯಗೊಳಿಸುವುದು ಅಂದರೆ ಒಂದೇ ರಾಷ್ಟ್ರದ ಮೇಲೆ ಅಲಂಬನೆಯಾಗದೇ ಬೇರೆ ಬೇರೆ ಕಡೆಗಳಿಂದ ತನ್ನ ಇಂಧನ ಅಗತ್ಯತೆಗಳನ್ನು ಪೂರೈಸಿಕೊಳ್ಳುವುದು, ಮತ್ತೊಂದು ತೈಲ ಸಂಗ್ರಹಾಗಾರಗಳನ್ನು ಹೆಚ್ಚಿಸಿಕೊಳ್ಳುವುದಾಗಿದೆ.

ಭಾರತ ಸರ್ಕಾರ ಕಳೆದ 10 ವರ್ಷಗಳಿಂದ ಈ ಎರಡೂ ಅಂಶಗಳ ಮೇಲೆ ಗಮನ ಕೇಂದ್ರೀಕರಿಸಿ, ಸವಾಲಿನ ಪರಿಸ್ಥಿತಿಯನ್ನು ನಿಭಾಯಿಸಲು ಸಮರ್ಥವಾಗಿ ತಯಾರಾಗಿದೆ. ಇದೆಲ್ಲಾ ಸಾಧ್ಯವಾಗಿದ್ದು ಹೇಗೆ ಎಂದರೆ ಅದಕ್ಕೆ ಸಿಗುವ ಉತ್ತರ ಭೂಗತ ತೈಲ ಸಂಗ್ರಹ

10 ವರ್ಷಗಳಲ್ಲಿ, ಭಾರತ ಭೂಗತ ಸಂಗ್ರಹಣಾ ಗುಹೆಗಳ ಜಾಲದ ಮೂಲಕ ಮತ್ತು ತನ್ನ ತೈಲ ಬುಟ್ಟಿಯನ್ನು ವೈವಿಧ್ಯಗೊಳಿಸುವ ಮೂಲಕ ತನ್ನ ಇಂಧನ ಭದ್ರತೆಯನ್ನು ಸದ್ದಿಲ್ಲದೆ ಬಲಪಡಿಸಿದೆ. ಪಾಕಿಸ್ತಾನದಂತಹ ದೇಶಗಳು ಲಾಕ್‌ಡೌನ್ ಮೋಡ್‌ಗೆ ಹೋಗಿರುವಾಗ, ಈ ಕಾರ್ಯತಂತ್ರದ ಕ್ರಮಗಳು ಭಾರತ ಆತಂಕಕಾರಿ ಪರಿಸ್ಥಿತಿ ಎದುರಿಸುವುದರಿಂದ ಪಾರಾಗಿದೆ.



ಭಾರತ ತೈಲ ಪೂರೈಕೆ ವಿಷಯದಲ್ಲಿ ತನ್ನ ನಿದ್ರೆಯನ್ನು ಕಳೆದುಕೊಳ್ಳುವ ಸಾಧ್ಯತೆ ಕಡಿಮೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಮೂರು ಪ್ರಮುಖ ಸ್ಥಳಗಳಾದ ವಿಶಾಖಪಟ್ಟಣಂ (ಆಂಧ್ರಪ್ರದೇಶ), ಮಂಗಳೂರು (ಕರ್ನಾಟಕ) ಮತ್ತು ಪಾದೂರು (ತಮಿಳುನಾಡು) ನಲ್ಲಿರುವ ರಹಸ್ಯ ಭೂಗತ ಕಚ್ಚಾ ತೈಲ ಸಂಗ್ರಹ ಗುಹೆಗಳು.

ಅವುಗಳಲ್ಲಿ ಅತ್ಯಂತ ಹಳೆಯದು ವೈಜಾಗ್‌ನಲ್ಲಿದೆ, ಇದನ್ನು ಸುಮಾರು 10 ವರ್ಷಗಳ ಹಿಂದೆ ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್ ಅಭಿವೃದ್ಧಿಪಡಿಸಿದೆ. ಈ ಗುಹೆಗಳು ಒಟ್ಟಾಗಿ 5.33 ಮಿಲಿಯನ್ ಮೆಟ್ರಿಕ್ ಟನ್ ಕಚ್ಚಾ ತೈಲವನ್ನು (40 ಮಿಲಿಯನ್ ಬ್ಯಾರೆಲ್‌ಗಳು) ಹಿಡಿದಿಟ್ಟುಕೊಳ್ಳಬಲ್ಲ ಸಾಮರ್ಥ್ಯ ಹೊಂದಿವೆ. ಇದು ಸುಮಾರು 10 ದಿನಗಳ ರಾಷ್ಟ್ರೀಯ ಅಗತ್ಯತೆಯನ್ನು ಪೂರೈಸುವುದಕ್ಕೆ ಸಾಕಾಗುತ್ತದೆ.

ಇಂತಹ ಭೂಗತ ಸೌಲಭ್ಯಗಳು ಬಾಹ್ಯ ದಾಳಿಗಳು ಅಥವಾ ಡ್ರೋನ್ ದಾಳಿಗಳು ಮತ್ತು ನೈಸರ್ಗಿಕ ವಿಕೋಪಗಳಿಂದ ಸುರಕ್ಷಿತವಾಗಿವೆ. ಇದಲ್ಲದೆ, ಇವುಗಳಿಗೆ ಕಡಿಮೆ ಕಾರ್ಯಾಚರಣೆಯ ವೆಚ್ಚಗಳು ಬೇಕಾಗುತ್ತವೆ ಮತ್ತು ಆಳವಾಗಿ ಭೂಗತವಾಗಿರುವುದರಿಂದ, ಗುಹೆಗಳು ಬೆಂಕಿ ಅಥವಾ ತೈಲ ಸೋರಿಕೆಯ ಅಪಾಯಗಳನ್ನು ಕಡಿಮೆ ಮಾಡುತ್ತದೆ.

ತೈಲ ಪೂರೈಕೆಯಲ್ಲಿ ವಿಳಂಬ ವ್ಯತ್ಯಯವಾಗುತ್ತಿದ್ದರೂ ಸರ್ಕಾರ ಇನ್ನೂ ಈ ಗುಹೆಗಳಲ್ಲಿನ ನಿಕ್ಷೇಪಗಳನ್ನು ಬಳಸಿಲ್ಲ. ಅಗತ್ಯವಿದ್ದಾಗ, ಅವು ಕಾರ್ಯತಂತ್ರದ ಬಫರ್ ಅನ್ನು ಒದಗಿಸುತ್ತವೆ, ಸರ್ಕಾರಕ್ಕೆ ಪರ್ಯಾಯ ಆಮದುಗಳನ್ನು ವ್ಯವಸ್ಥೆ ಮಾಡಲು ಸಮಯವನ್ನು ನೀಡುತ್ತದೆ.

ಇಲ್ಲಿಯೂ ಸಹ, ಸರ್ಕಾರವು ಅನಿಲ ಪೂರೈಕೆ ಮೇಲೆ ಹಿಡಿತ ಸಾಧಿಸಿದೆ. ಯುರೋಪ್, ಲ್ಯಾಟಿನ್ ಅಮೆರಿಕ ಮತ್ತು ಪಶ್ಚಿಮ ಆಫ್ರಿಕಾವನ್ನು ಒಳಗೊಂಡಂತೆ 40 ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದಾಗಿ ಸರ್ಕಾರ ಬುಧವಾರ ಹೇಳಿದೆ.

ಹೀಗಾಗಿ, ಭಾರತದ ಕಚ್ಚಾ ತೈಲ ಆಮದುಗಳಲ್ಲಿ ಸುಮಾರು 70% ಈಗ ಹಾರ್ಮುಜ್ ಜಲಸಂಧಿಯ ಹೊರಗಿನ ಮಾರ್ಗಗಳಿಂದ ಬರುತ್ತಿದೆ. ಹಾರ್ಮುನ್ ಜಲಸಂಧಿಯಿಂದ ಹೊರತಾಗಿ ಪೂರೈಕೆಯಾಗುತ್ತಿದ್ದ ತೈಲದ ಪ್ರಮಾಣ ಈ ಹಿಂದೆ ಸುಮಾರು 50-55% ರಷ್ಟಿತ್ತು.

ಇದಲ್ಲದೆ, ಇರಾನ್ ಭಾರತ ಧ್ವಜ ಹೊತ್ತ ಟ್ಯಾಂಕರ್‌ಗಳಿಗೆ ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗಲು ಅವಕಾಶ ನೀಡಿದೆ ಎಂಬ ವರದಿಗಳ ಮಧ್ಯೆ ಎರಡು ಹೆಚ್ಚುವರಿ ಸರಕುಗಳು ಸಾಗುತ್ತಿದ್ದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಮತ್ತು ಟೆಹ್ರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ನಡುವಿನ ಮಾತುಕತೆಯ ನಂತರ ಈ ಪ್ರಗತಿ ಸಂಭವಿಸಿದೆ ಎಂದು ಮೂಲಗಳು ತಿಳಿಸಿವೆ. ಗುರುವಾರ, ಭಾರತೀಯ ನಾಯಕತ್ವದಲ್ಲಿದ್ದ ಲೈಬೀರಿಯನ್ ಧ್ವಜ ಹೊತ್ತ ತೈಲ ಟ್ಯಾಂಕರ್ ಹಾರ್ಮುಜ್ ಮೂಲಕ ಸಾಗಿದ ನಂತರ ಮುಂಬೈನಲ್ಲಿ ಡಾಕ್ ಮಾಡಲಾಗಿದೆ.

ಭಾರತ ಸಾರಥಿ
14/03/2026
BHARATHA SARATHI KANNADA DAILY NEWS PAPER
ಬೆಂಗಳೂರು । ಬೆಂ.ಗ್ರಾಮಾಂತರ । ತುಮಕೂರು । ಮೈಸೂರು । ಮಂಡ್ಯ । ರಾಮನಗರ । ಕೋಲಾರ । ಚಿಕ್ಕಬಳ್ಳಾಪುರ । ಚಿತ್ರದುರ್ಗ । ದಾವಣಗೆರೆ । ಶಿವಮೊಗ್ಗ । ಮಂಗಳೂರು । ಉಡುಪಿ । ಹುಬ್ಬಳ್ಳಿ । ಮಡಿಕೇರಿ । ಚಿಕ್ಕಮಗಳೂರು । ಹಾಸನ । ಬಳ್ಳಾರಿ
ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಅದ್ದೂರಿ ಪ್ರದರ್ಶನಗೊಂಡ ಮುದುಕನ ಮದುವೆ







ಬೆಂ: ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಪಾಜೆ ರಂಗ ಸಂಗಮ ಬೆಂಗಳೂರು ವತಿಯಿಂದ ಮೊದಲನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ನಡೆದ ಮುದುಕನ ಮದುವೆ ಹಾಸ್ಯ ನಾಟಕ ನಾಟಕ ಪ್ರದರ್ಶನ ಅದ್ದೂರಿ ಪ್ರದರ್ಶನಗೊಂಡಿತು. ರಂಗಭೂಮಿ ಕಲಾವಿದರು ಹಾಗೂ ಕಲಾ ಪ್ರೇಮಿಗಳಿಂದ ನಡೆದ ನಾಟಕದ ರಚನೆಯನ್ನು ದಿ ಟಟ ಪಿ ಬಿ ದುತ್ತರಗಿ ರಚಿಸಿದ್ದು ಕಾರ್ಯಕ್ರಮದ ಉದ್ಘಾಟನೆಯನ್ನು ಪತ್ರಕರ್ತ ಹಾಗೂ ಚಲನಚಿತ್ರದ ನಿರ್ಮಾಪಕ, ಗಂಡಸಿ ಸದಾನಂದ ಸ್ವಾಮಿ,ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಬ.ಲ ಸುರೇಶ್ ವಹಿಸಿದ್ದು ಮುಖ್ಯ ಅತಿಥಿಗಳಾಗಿ ಹಿರಿಯ ಕಲಾವಿದ ಶಂಕರ್ ಭಟ್, ಪದ್ಮನಾಭ ಜತ್ತಿಲ್ಲ, ಹಿರಿಯ ಪತ್ರಕರ್ತ ರಮೇಶ್ ಸುರ್ವೆ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸಮಾರೋಪವನ್ನು ಶ್ರೀ ರಾಜ್ ಸಂಪಾಜೆ ಅವರ ನೇತೃತ್ವದಲ್ಲಿ ನಡೆಯಿತು . ರಂಗಭೂಮಿ ಕಲೆಯ ಅಭಿವೃದ್ಧಿ ಮತ್ತು ಕಲಾವಿದರ ಉತ್ತೇಜನದ ಉದ್ದೇಶದಿಂದ ಈ ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದ್ದು ಈ ಕಾರ್ಯಕ್ರಮಕ್ಕೆ ರಂಗಭೂಮಿ ಅಭಿಮಾನಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

## ಭಾರತದಲ್ಲಿ 69ನೇ ಮಳಿಗೆ ಪ್ರಾರಂಭ



ಬೆಂಗಳೂರು

ಎಚ್‌ಅಂಡ್‌ಎಂ ಭಾರತದಲ್ಲಿ ತನ್ನ 69ನೇ ಮಳಿಗೆ ಮತ್ತು ಬೆಂಗಳೂರಿನಲ್ಲಿ ತನ್ನ 8ನೇ ಮಳಿಗೆ ಪ್ರಾರಂಭಿಸುವ ಮೂಲಕ ತನ್ನ ವಿಸ್ತರಣೆ ಮುಂದುವರಿಸಿದೆ. ರಾಜಾಜಿನಗರದ ಒರಾಯನ್ ಮಾಲ್ ನಲ್ಲಿ ಪ್ರಾರಂಭವಾದ ಈ ಮಳಿಗೆಯು ಭಾರತದ ಅತ್ಯಂತ ಡೈನಮಿಕ್ ಫ್ಯಾಷನ್ ಪ್ರಿಯ ನಗರಗಳಲ್ಲಿ ಬ್ರಾಂಡ್ ವ್ಯಾಪ್ತಿಯನ್ನು ಮತ್ತಷ್ಟು ಸದೃಢಗೊಳಿಸಿದೆ.

7,500 ಚದರ ಅಡಿ ವಿಸ್ತೀರ್ಣ ಹೊಂದಿರುವ ಈ ಮಳಿಗೆಯು ವಿಮೆನ್ಸ್ ವೇರ್, ಮೆನ್ಸ್ ವೇರ್ ಮತ್ತು ಎಚ್‌ಅಂಡ್‌ಎಂ ಬ್ಯೂಟಿಯನ್ನು ಒಂದೇ ಸೂರಿನಡಿ ಒದಗಿಸುವ ಮೂಲಕ ತಡೆರಹಿತ ಶಾಪಿಂಗ್ ಅನುಭವ ನೀಡುತ್ತದೆ. ಈ ಪ್ರಾರಂಭೋತ್ಸವದ ಭಾಗವಾಗಿ ಈ ಮಳಿಗೆಯು ಪ್ರಯತ್ನರಹಿತ ಸೊಗಸನ್ನು ವಿರಾಮದ ಹೊಲಿಗೆ ಮತ್ತು ಮೃದು, ಸುಲಭ ರಚನೆಗಳಲ್ಲಿ ಪ್ರದರ್ಶಿಸುತ್ತದೆ.

ಈ ಮಳಿಗೆಯನ್ನು ಉದ್ಘಾಟಿಸಿದ ಎಚ್‌ಅಂಡ್‌ಎಂ ಇಂಡಿಯಾದ ನಿರ್ದೇಶಕಿ ಹೆಲೆನಾ ಕುಯ್ಲೆನ್ಷಿಯೆರ್ನಾ, "ಸದೃಢ ವೈಯಕ್ತಿಕತೆಯ ಭಾವ ಮತ್ತು ವಿಕಾಸಗೊಳ್ಳುತ್ತಿರುವ ಫ್ಯಾಷನ್ ಸಂಸ್ಕೃತಿಯನ್ನು ಹೊಂದಿರುವ ನಗರ ಬೆಂಗಳೂರಿನಲ್ಲಿ ನಮ್ಮ ಹೊಚ್ಚಹೊಸ ಮಳಿಗೆ ಪ್ರಾರಂಭಿಸಲು ಬಹಳ ಸಂತೋಷ ಹೊಂದಿದ್ದೇವೆ. ಇಲ್ಲಿ ನಮ್ಮ ಗ್ರಾಹಕರ ಪ್ರೀತಿ ಅಸಾಧಾರಣವಾದುದು ಮತ್ತು ಈ ಹೊಸ ಮಳಿಗೆಯು ನಮಗೆ ನಮ್ಮ ಸಂಪರ್ಕವನ್ನು ವಿಸ್ತರಿಸಲು ಹಾಗೂ ಹಲವರಿಗೆ ಫ್ಯಾಷನ್ ಅನ್ನು ಮುಕ್ತಗೊಳಿಸುವ ನಮ್ಮ ಧ್ಯೇಯಕ್ಕೆ ಪೂರಕವಾಗಿದೆ" ಎಂದರು.

ಈ ಪ್ರಾರಂಭೋತ್ಸವದಿಂದ ಎಚ್‌ಅಂಡ್‌ಎಂ ಭಾರತದಲ್ಲಿ ತನ್ನ ಪ್ರಗತಿಯ ವೇಗವನ್ನು ನಿರ್ಮಿಸಲು ಸಾಧ್ಯವಾಗಿದ್ದು ತನ್ನ ಮಳಿಗೆಗಳ ಜಾಲದ ಮೂಲಕ ಪ್ರಮುಖ ನಗರಗಳಿಗೆ ವಿಸ್ತರಿಸಲು ಸಾಧ್ಯವಾಗಿದೆ ಮತ್ತು ಆನ್ ಲೈನ್ www.hm.comನಲ್ಲಿ ಲಭ್ಯವಿದೆ.

## "ಮೀನಾ ಬಜಾರ್" ಮಾರಾಟ ಮತ್ತು ವಸ್ತುಪ್ರದರ್ಶನ ಮೇಳ ಆರಂಭ

ಬೆಂಗಳೂರು

ಕಲೆ, ಕರಕುಶಲ, ಕೈಮಗ್ಗ, ಜೀವನ ಶೈಲಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಹೆಸರಾದ "ಮೀನಾ ಬಜಾರ್" ಮೇಳ ಇಂದಿನಿಂದ ಕರ್ನಾಟಕ ಚಿತ್ರಕಲಾ ಪರಿಷತ್ ಆರಂಭವಾಗಿದೆ.

ಗ್ರಾಂಡ್ ಫಿಲಾ ಮಾರ್ಕೆಟ್ ಮತ್ತು ಇಂಡಿಯನ್ ಆರ್ಟಿಸನ್ಸ್ ಬಜಾರ್ ಸಹಯೋಗದಲ್ಲಿ ಆಯೋಜಿಸಿರುವ ಈ ವಸ್ತು ಪ್ರದರ್ಶನ ಮಾರ್ಚ್ 29ರವರೆಗೆ ನಡೆಯಲಿದೆ.

ಒಂದೇ ಸೂರಿನಡಿ ಗೃಹ ಅಲಂಕಾರ ವಸ್ತುಗಳು, ವಿವಿಧ ರಾಜ್ಯಗಳ ಸಾಂಪ್ರದಾಯಿಕ ಶೈಲಿಯ ಉಡುಗೆ – ತೊಡುಗೆಗಳು ಈ ಪ್ರದರ್ಶನದ ಹೈಲೈಟ್ಸ್ ಆಗಿದೆ. ಯುಗಾದಿ ಹಬ್ಬದ ಸಂಭ್ರಮದ ಸಮಯದಲ್ಲಿ ಆರಂಭವಾಗಿರುವ ಈ ಪ್ರದರ್ಶನಕ್ಕೆ ಖ್ಯಾತ ವೈದ್ಯೆ ಹಾಗೂ ವಿಡಿಯೋ ಕಂಟೆಂಟ್ ಕ್ರಿಯೇಟರ್ ಡಾ.ಶೃತಿ ಪ್ರವೀಣ್ ಶುಕ್ರವಾರ ಚಾಲನೆ ನೀಡಿದರು.

ಗೃಹ ಅಲಂಕಾರಕ್ಕೆ ಬೇಕಾದಂತಹ ವಿವಿಧ ಬಗೆಯ ವಿದ್ಯುತ್ ದೀಪ, ಕರ್ಟನ್, ಪೀಠೋಪಕರಣ, ಪುರಾತನ ವಿಗ್ರಹಗಳು, ದೇವರ ಮೂರ್ತಿಗಳು ಹೀಗೆ ಹತ್ತು ಹಲವು ವಸ್ತುಗಳು ಸಿಕ್ಕರೆ, ಇನ್ನೂ



ಮನಮುಟ್ಟುವ ರಾಜಸ್ಥಾನಿ ಶೈಲಿಯ ಉಡುಗೆಗಳು, ಕಿವಿಯೋಲೆ, ಕರಕುಶಲ ವಸ್ತುಗಳು ಜನರ ಮನ ಸೆಳೆಯಲಿವೆ.

ಈ ವೇಳೆ ಮಾತನಾಡಿದ ವಿಡಿಯೋ ಕಂಟೆಂಟ್ ಕ್ರಿಯೇಟರ್ ಡಾ.ಶೃತಿ ಪ್ರವೀಣ್, "ಯುಗಾದಿ ಹಬ್ಬ ಹತ್ತಿರವಾಗುತ್ತಿದೆ. ಎಲ್ಲರೂ. ಶಾಪಿಂಗ್ ನಲ್ಲಿ ತೊಡಗುವುದು ಸಹಜ. ಹೀಗಾಗಿ ಶಾಪಿಂಗ್ ಪ್ರಿಯರಿಗಾಗಿ ಮೀನಾ ಬಜಾರ್ ಕರಕುಶಲ ವಸ್ತುಗಳ ಪ್ರದರ್ಶನ ಆಯೋಜಿಸಿದೆ.

ಒಮ್ಮೆ ನೀವು ಭೇಟಿ ನೀಡಿ. ಅಗತ್ಯ ಉತ್ಪನ್ನಗಳನ್ನು ನೀವು ಖರೀದಿಸಿ. ದೇಶದ ವಿವಿಧ ಭಾಗಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಉತ್ಪನ್ನಗಳು ಇಲ್ಲಿ ಒಂದೇ ಸೂರಿನಡಿಯಲ್ಲಿ ಸಿಗಲಿವೆ. ಕಲಾವಿದರಿಂದ ನೇರವಾಗಿ ಗ್ರಾಹಕರನ್ನು ತಲುಪುವುದರಿಂದ ವಸ್ತುಗಳ ಬೆಲೆಯೂ ಅಗ್ಗವಾಗಿದೆ.

ಬಳೆಗಳು, ಒಡವೆಗಳು, ಫ್ಯಾನ್ಸಿ ಆಭರಣಗಳು, ಪಾದರಕ್ಷೆ, ದಿನ ಬಳಕೆ ವಸ್ತುಗಳು, ಸಿಹಿತಿನಿಸುಗಳು, ಮಕ್ಕಳ ಆಟಿಕೆಗಳು, ಸುಗಂಧ ದ್ರವ್ಯಗಳು ಸೇರಿದಂತೆ ನೂರಾರು ಉತ್ಪನ್ನಗಳು ಮೀನಾ ಬಜಾರ್ ನಲ್ಲಿ ದೊರೆಯುತ್ತಿವೆ" ಎಂದರು.

## 'ನೇಮಕಾತಿ ಪ್ರಮಾಣದಲ್ಲಿ ಬದಲಾವಣೆಯಿಲ್ಲ'

ಬೆಂಗಳೂರು

ಕಳೆದ ತ್ರೈಮಾಸಿಕದೊಂದಿಗೆ ಹೋಲಿಸಿದರೆ ಹಣಕಾಸು ವರ್ಷ 25–26 ರ ಮೂರನೇ ತ್ರೈಮಾಸಿಕದಲ್ಲಿ ಸುಮಾರು ಅರ್ಧ ಉದ್ಯೋಗದಾತರು ನೇಮಕಾತಿ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದ್ದಾರೆ, ಮತ್ತು ಸುಮಾರು ಮೂರನೇ ಭಾಗದ ಉದ್ಯೋಗದಾತರು ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ ಎಂದು ಇತ್ತೀಚಿನ ಇಂಡೀಡ್ ನೇಮಕಾತಿ ಟ್ರ್ಯಾಕರ್ ವರದಿ ತಿಳಿಸಿದೆ. ಇದೇ ಸಮಯದಲ್ಲಿ 77% ಉದ್ಯೋಗಿಗಳು ಹೊಸ ಕೆಲಸವನ್ನು ಸಕ್ರಿಯವಾಗಿ ಅಥವಾ ಸ್ವಲ್ಪ ಮಟ್ಟಿಗೆ ಹುಡುಕುತ್ತಿದ್ದಾರೆ, ಆದರೆ ಅದರಲ್ಲಿ ಕೇವಲ ಮೂರನೇ ಭಾಗದವರಿಗೆ ಮಾತ್ರ ಕೆಲಸ ಪಡೆಯಬಹುದು ಎಂಬ ವಿಶ್ವಾಸ ಇದೆ. ಸಮೀಕ್ಷೆಯ ಈ ಮಾಹಿತಿಗೆ ಪೂರಕವಾಗಿ, ಇಂಡೀಡ್ ಹೈರಿಂಗ್ ಲ್ಯಾಬ್ ಎಂಬ ಉದ್ಯೋಗ ಮಾರುಕಟ್ಟೆ ಸಂಶೋಧನಾ ವಿಭಾಗದ ವಿಶ್ಲೇಷಣೆಯ ಪ್ರಕಾರ, 2026ರ ಜನವರಿಯಲ್ಲಿ ಕೆಲಸದ ಜಾಹೀರಾತುಗಳು 3.3% ಹೆಚ್ಚಾಗಿವೆ ಮತ್ತು ಇನ್ನೂ ಮಹಾಮಾರಿ ಕೊರೋನಾಕ್ಕೂ ಮೊದಲು ಇದ್ದ ಮಟ್ಟಕ್ಕಿಂತ 84% ಹೆಚ್ಚಾಗಿದೆ. ಕಳೆದ ಮೂರು ತಿಂಗಳಲ್ಲಿ ಸುಮಾರು 90% ಉದ್ಯೋಗ ಕ್ಷೇತ್ರಗಳಲ್ಲಿ ಜಾಹೀರಾತುಗಳು ಹೆಚ್ಚಾಗಿದ್ದು, ವಿಸ್ತರಣೆ ಎಚ್ಚರಿಕೆಯಿಂದ ನಡೆಯುತ್ತಿದ್ದರೂ ಕೆಲಸಗಳಿಗೆ ಒಟ್ಟಾರೆ ಬೇಡಿಕೆ ಇದೆ ಎಂಬುದನ್ನು ಇದು ಸೂಚಿಸುತ್ತದೆ. ಕ್ಯಾಲಂ ಪಿಕರಿಂಗ್, ಇಂಡೀಡ್ ಸಂಸ್ಥೆಯ ಏಷ್ಯಾ–ಪೆಸಿಫಿಕ್ ಪ್ರದೇಶದ ಸೀನಿಯರ್ ಅರ್ಥಶಾಸ್ತ್ರಜ್ಞರು, ಹೇಳಿದ್ದಾರೆ, "ಭಾರತದಲ್ಲಿ ಕೆಲಸದ ಜಾಹೀರಾತುಗಳ ಚಟುವಟಿಕೆ ಕೊರೋನ ಮಹಾಮಾರಿಗೂ ಮೊದಲು ಇದ್ದ ಮಟ್ಟಕ್ಕಿಂತ ಬಹಳ ಹೆಚ್ಚು ಇದೆ ಮತ್ತು ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ವಿಸ್ತರಿಸುತ್ತಿದೆ.

## ಇಂಧನ ಭವನಕ್ಕೆ ಸುಧಾರಿತ ಫಸಾಡ್ ಲೈಟಿಂಗ್ ಮೂಲಕ ಬೆಳಕು

ಬೆಂಗಳೂರು

ಲೈಟಿಂಗ್, ವೈರ್ಸ್ ಮತ್ತು ಕೇಬಲ್ಸ್, ಫ್ಯಾನ್ಸ್, ಹೋಮ್ ಅಪ್ಲೈಯನ್ಸಸ್ ಮತ್ತು ವಾಟರ್ ಪಂಪ್ಸ್ ಕ್ಷೇತ್ರದಲ್ಲಿ ಭಾರತದ ವಿಶ್ವಾಸಾರ್ಹ ಕಂಪನಿಗಳಲ್ಲಿ ಒಂದಾದ ಸೂರ್ಯ ರೋಷ್ನಿ ಲಿಮಿಟೆಡ್, ಹಾಗೆಯೇ 'ಪ್ರಕಾಶ್ ಸೂರ್ಯ' ಬ್ರ್ಯಾಂಡ್ ಅಡಿಯಲ್ಲಿ ವಾಟರ್ ಟ್ಯಾಂಕ್ಸ್, ಪಿವಿಸಿ ಪೈಪ್ಸ್ ಮತ್ತು ಸ್ಟೀಲ್ ಪೈಪ್ಸ್ ಉತ್ಪಾದನೆಯಲ್ಲಿ ಪ್ರಸಿದ್ಧಿ ಪಡೆದಿರುವ ಸಂಸ್ಥೆ, ಕರ್ನಾಟಕ ಪವರ್ ಟ್ರಾನ್ಸ್ಮಿಷನ್ ಕಾರ್ಪೊರೇಷನ್ ಲಿಮಿಟೆಡ್ ಮುಖ್ಯ ಕಚೇರಿಯಾದ ಇಂಧನ ಭವನಗೆ ಫಸಾಡ್ ಲೈಟಿಂಗ್ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದರ ಮೂಲಕ ದೊಡ್ಡ ಮಟ್ಟದ ಸಂಸ್ಥಾ ಮೂಲಸೌಕರ್ಯಗಳಿಗೆ ಲೈಟಿಂಗ್ ಪರಿಹಾರಗಳನ್ನು ಒದಗಿಸುವಲ್ಲಿ ತನ್ನ ಪರಿಣತಿಯನ್ನು ಮತ್ತೊಮ್ಮೆ ತೋರಿಸಿದೆ.

ಕರ್ನಾಟಕದ ವಿದ್ಯುತ್ ಪ್ರಸರಣ ಜಾಲದ ಪ್ರಮುಖ ಆಡಳಿತಾತ್ಮಕ ಮತ್ತು ಕಾರ್ಯಾಚರಣಾ ಕೇಂದ್ರವಾಗಿರುವ ಇಂಧನ ಭವನ, ಕಾರ್ಯಕ್ಷಮತೆ, ವಿಶ್ವಾಸಾರ್ಹತೆ ಮತ್ತು ಭವಿಷ್ಯಮುಖಿ ಮೂಲಸೌಕರ್ಯವನ್ನು ಪ್ರತಿನಿಧಿಸುತ್ತದೆ. ಅದರ ಹೆಸರಿನಂತೆ 'ಇಂಧನ' ಅಂದರೆ ಶಕ್ತಿಈ ಕಟ್ಟಡ ರಾಜ್ಯದಾದ್ಯಂತ ವಿದ್ಯುತ್ ಪ್ರಸರಣಕ್ಕೆ ಬೆಂಬಲ ನೀಡುವ ಪ್ರಮುಖ ಕೇಂದ್ರವಾಗಿದೆ. ಸೂರ್ಯ



ರೋಷ್ನಿಯ ಫಸಾಡ್ ಲೈಟಿಂಗ್ ಈ ಕಟ್ಟಡದ ವಾಸ್ತುಶಿಲ್ಪದ ಸೌಂದರ್ಯವನ್ನು ಇನ್ನಷ್ಟು ಎತ್ತಿ ತೋರಿಸುವುದರ ಜೊತೆಗೆ ಅದರ ಸಂಸ್ಥಾತ್ಮಕ ಗುರುತಿಗೂ ಹೊಂದಿಕೊಳ್ಳುತ್ತದೆ.

ಈ ಯೋಜನೆಯಲ್ಲಿ ಸೂರ್ಯ ರೋಷ್ನಿ ಸಂಪೂರ್ಣ ಎಂಡ್–ಟು–ಎಂಡ್ ಫಸಾಡ್ ಲೈಟಿಂಗ್ ಪರಿಹಾರವನ್ನು ಒದಗಿಸಿದೆ. ಇದರಲ್ಲಿ ಕನ್ಸೆಪ್ಟ್ ರೂಪಿಸುವುದರಿಂದ ಹಿಡಿದು ಕಸ್ಟಮೈಸ್ ಮಾಡಿದ ವಿನ್ಯಾಸ, ಉತ್ಪನ್ನಗಳ ಸರಬರಾಜು, ಪರೀಕ್ಷೆ, ಇನ್ಸ್ಟಾಲೇಶನ್ ಮತ್ತು ಕಮಿಷನಿಂಗ್ ವರೆಗೆ ಎಲ್ಲ ಹಂತಗಳನ್ನೂ ಒಳಗೊಂಡಿದೆ. ಕಂಪನಿಯ ಇನ್ಹೌಸ್ ರಿಸರ್ಚ್ ಮತ್ತು ಡೆವಲಪ್ಮೆಂಟ್ ಬೆಂಬಲದೊಂದಿಗೆ, ಪ್ರಾಜೆಕ್ಟ್ ಅವಶ್ಯಕತೆಗಳಿಗೆ ತಕ್ಕಂತೆ ಕಸ್ಟಮೈಸ್ ಮಾಡಿದ ಲೈಟಿಂಗ್ ಪರಿಹಾರಗಳನ್ನು ಒದಗಿಸಲಾಗುತ್ತದೆ ಇದರಿಂದ ಉತ್ತಮ ಕಾರ್ಯಕ್ಷಮತೆ, ಇಂಧನ ದಕ್ಷತೆ, ದೀರ್ಘಾಯುಷ್ಯ ಮತ್ತು ಆಕರ್ಷಕ ದೃಶ್ಯ ಪರಿಣಾಮವನ್ನು ಖಚಿತಪಡಿಸಲಾಗುತ್ತದೆ. ಲೈಟಿಂಗ್ ವಿನ್ಯಾಸವನ್ನು ಕಟ್ಟಡದ ಫಸಾಡ್ ಅನ್ನು ಸ್ಪಷ್ಟವಾಗಿ ಹೊರಹಾಕುವಂತೆ ಮತ್ತು ದೀರ್ಘಕಾಲದ ಕಾರ್ಯಾಚರಣಾ ದಕ್ಷತೆಯನ್ನು ಉಳಿಸುವಂತೆ ಜಾಗರೂಕತೆಯಿಂದ ಮಾಡಲಾಗಿದೆ.

## ವಿಜಯ ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರಜ್ವಲ ಯಲೋಜೆನ್ ಅಡ್ ಲೈಟ್ ತೆಗೆಸಲು ಹಾಗೂ ವಿವಿಧ ಬೇಡಿಕೆಗಳ ಆಗ್ರಹ

ಹೊಸಪೇಟೆ

ಮಾರ್ಚ್ ಯಲೋಜೆನ್ ಲಿಡ್ ಪ್ರಖರ, ಪ್ರಜ್ವಲ ಮಾನವಾದ ಯಾಲೋಜನ್ ವಾಹನದ ಹೆಡ್ಲೈಟ್ ತೆಗೆಸುವುದು ಅಥವಾ ವಾಹನಗಳ ಲೈಟ್ ಗಳಿಗೆ ಅರ್ಧ ಭಾಗ ಕರಿಬಣ್ಣ ಬಳೆಯುವುದು ಅಥವಾ ಕರಿ ಬಣ್ಣದ ಸ್ಟಿಕರ್ ಅಂಟಿಸಿ ಅಪಘಾತಗಳನ್ನು ತಪ್ಪಿಸುವುದು ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನಗಳನ್ನು ಚಲಾಯಿಸುವವರ ಮೇಲೆ ,ತ್ರಿಬಲ್ ರೈಡಿಂಗ್ ವಾಹನ ಚಾಲನೆ ಮಾಡುವವರ ಮೇಲೆ, ಮತ್ತು ಅತಿ ವೇಗವಾಗಿ ಎರ್ರಬಿರ್ರೀ ವಾಹನ ಚಾಲನೆ ಮಾಡುವವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲೂ ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ವತಿಯಿಂದ ಆಗ್ರಹಿಸಲಾಗಿದೆ ಹೊಸಪೇಟೆಯಲ್ಲಿ ಅನೇಕ ವಾಹರ್ನಗಳು ವಾಹನ ಸವಾರರು ತಮ್ಮ ವಾಹನಗಳಿಗೆ ಪ್ರಕಾರ, ಪ್ರಜ್ವಲ ಮಾನವಾದ ಕಾನೂನು ವಿರುದ್ಧವಾದ ಆವೈಜ್ಞಾನಿಕವಾಗಿ ,ತಮ್ಮ ವಾಹನಗಳಿಗೆ ಪ್ರಕರವಾದ, ಪ್ರಜ್ವಲ ಮಾನವಾದ ಹೆಡ್ ಲೈಟ್ ಗಳನ್ನು ಬಳಸುವ ಕಾರಣದಿಂದ,, ಎದುರುಗಡೆ ಬರುವ ವಾಹನ ಚಾಲಕರಿಗೆ ರಸ್ತೆ ಕಾಣದೆ, ಅನೇಕ ಭೀಕರ ಅಪಘಾತಗಳು ಈಗಾಗಲೇ ಸಂಭವಿಸಿರುವ ಕಾರಣ ತಕ್ಷಣದಿಂದಲೇ ಅಂತಹ ವಾಹನಗಳ ಪ್ರಕಾರ ಪ್ರಜ್ವಲ ಮಾನವಾದ ಹಾಲೋಜನ ಬಲ್ಬಳನ್ನ ತೆಗೆಸುವುದು ಅಥವಾ ಆಯಾ ವಾಹನಗಳ ಹೆಡ್ ಲೈಟ್ ಗೆ ಅರ್ಧ ಭಾಗ ಕರಿ ಬಣ್ಣವನ್ನು ಬಳಿಯುವುದರಿಂದ ಅನೇಕ ಅಪಘಾತಗಳನ್ನು ತಡೆಯಬಹುದಾಗಿದೆ. ಹಾಗಾಗಿ ತಕ್ಷಣವೇ ಕ್ರಮ ಕೈಗೊಂಡು, ಈ ರೀತಿಯ ಪ್ರಕಾರ ಪ್ರಜ್ವಲ ಮಾನವಾದ ಲೈಟ್ಗಳ ವಾಹನಗಳ ಲೈಟ್ ಗಳನ್ನು ತೆಗೆಸುವ ಮೂಲಕ ಅನೇಕ ವಾಹನಗಳ ಅಪಘಾತವನ್ನು ತಡೆಯಲು ಕೋರುತ್ತವೆ. ಅದೇ ರೀತಿಯಾಗಿ ಹೊಸಪೇಟೆಯಲ್ಲಿ ಅಪ್ರಾಪ್ತರು ವಾಹನ ಚಾಲನೆಯನ್ನು ಮಾಡುವುದು ಅತಿಯಾಗಿ ಕಾಣುತ್ತಿದ್ದು, ಇದರಿಂದ ಅನೇಕ ಅಪಘಾತಗಳು ಈಗಾಗಲೇ ಸಂಭವಿಸಿದೆ. ಇನ್ನೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ತ್ರಿಬ್ಬಲ್ ರೈಡಿಂಗ್ ಮಾಡುವುದು, ,ಕೆಟ್ಟ ಶಬ್ದದೊಂದಿಗೆ ಸಂಚರಿಸುವುದು ಸೇರಿದಂತೆ ವಿವಿಧ ಪ್ರಕರಣಗಳು,, ದಿನ ಹೆಚ್ಚಾಗುತ್ತಿತ್ತು, ಇತ್ತ ಕಡೆ ಗಮನಹರಿಸಿ ಅವುಗಳನ್ನೆಲ್ಲ ಕಂಟ್ರೋಲ್ ಮಾಡುವುದು,

ವಾಹನ ಚಾಲನಾ ಪರವಾನಿಗೆ ಇಲ್ಲದಿರುವುದು, ಅತಿ ವೇಗದಲ್ಲಿ ನಗರದ ರಸ್ತೆಗಳಲ್ಲಿ ಯಾವುದೇ ಹೆದರಿಕೆ ಇಲ್ಲದೆ ಹಿಗ್ಗಾಮುಗ್ಗ ವಾಗಿ ವಾಹನಗಳನ್ನು ಸಂಚರಿಸುವುದು ಕಂಡುಬರುತ್ತಿದೆ .ಇದರಿಂದ ಅನೇಕ ಪಾದಾಚಾರಿಗಳಿಗೂ, ಕುಟುಂಬ ಸಮೇತವಾಗಿ ಹೋಗುವಂತಹ ವಾಹನ ಸವಾರರಿಗೂ ತುಂಬ ತೊಂದರೆಯಾಗಿ, ಅನೇಕ ಅಪಘಾತಗಳು ಸಂಭವಿಸುತ್ತಿವೆ. ಹಾಗಾಗಿ ಮಾನ್ಯರು ಯಾರು ತಮ್ಮ ವಾಹನಗಳಿಗೆ ಪ್ರಕರ ,ಪ್ರಜ್ವಲ ಮಾನವಾದ ಲೈಟ್ ಗಳನ್ನು ತಮ್ಮ ವಾಹನಗಳಿಗೆ ಬಳಸುತ್ತಿದ್ದಾರೋ ಅಂತವರ ವಾಹನಗಳ ಹೆಡ್ ಲೈಟ್ ಬದಲಿಸುವುದು ಅಥವಾ ವಾಹನದ ಲೈಟಿನ ಅರ್ಧಭಾಗ ಕರಿ ಬಣ್ಣ ಬೆಳೆಯುವುದು ಅಥವಾ ಅರ್ಧ ಭಾಗ ಕರಿ ಬಣ್ಣದ ಸ್ಟಿಕರ್ ಅಂಟಿಸುವ ಕಾರ್ಯ ತಕ್ಷಣವೇ ನಡೆಯಬೇಕು ಅಪ್ರಾಪ್ತರ ವಯಸ್ಸಿನ ಮಕ್ಕಳ ವಾಹನ ಚಾಲನೆ ತಕ್ಷಣವೇ ನಿಲ್ಲಿಸಬೇಕು.

## ಸಾಗರೋತ್ತರ ಶಿಕ್ಷಣ ತಾಣಗಳತ್ತ ಭಾರತೀಯ ವಿದ್ಯಾರ್ಥಿಗಳು

ಬೆಂಗಳೂರು

ಭಾರತೀಯ ವಿದ್ಯಾರ್ಥಿಗಳು ತಮ್ಮ ಜಾಗತಿಕ ಶಿಕ್ಷಣದ ಪರಿಧಿಯನ್ನು ವಿಸ್ತರಿಸುತ್ತಿದ್ದಾರೆ ಮತ್ತು ಸ್ಪೇನ್, ಜರ್ಮನಿ, ಫ್ರಾನ್ಸ್, ಸಿಂಗಾಪುರ, ಯುಎಇ, ನ್ಯೂಜಿಲೆಂಡ್ ಮತ್ತು ದಕ್ಷಿಣ ಕೊರಿಯಾದಂತಹ ಉದಯೋನ್ಮುಖ ಶಿಕ್ಷಣ ತಾಣಗಳನ್ನು ಹೆಚ್ಚಾಗಿ ಆರಿಸಿಕೊಳ್ಳುತ್ತಿದ್ದಾರೆ. ಇದು ಸಾಗರೋತ್ತರ ಶಿಕ್ಷಣ ಆದ್ಯತೆಗಳಲ್ಲಿ ಸ್ಪಷ್ಟ ಬದಲಾವಣೆಯನ್ನು ತೋರಿಸುತ್ತದೆ.

ಯುಎಸ್‌ಎ, ಕೆನಡಾ, ಯುನೈಟೆಡ್ ಕಿಂಗ್ಡಮ್ ಮತ್ತು ಆಸ್ಟ್ರೇಲಿಯಾದಂತಹ ಇಂಗ್ಲಿಷ್ ಭಾಷಾ ತಾಣಗಳು ಹೆಚ್ಚು ಅಪೇಕ್ಷಣೀಯವಾಗಿ ಉಳಿದಿದ್ದರೂ, ವಿಶೇಷವಾಗಿ ಸ್ಟೆಮ್ ಕೋರ್ಸ್‌ಗಳಿಗಾಗಿ ಯುಎಸ್‌ಎ ಮತ್ತು ಭಾರತೀಯ ವಿದ್ಯಾರ್ಥಿಗಳು ಈಗ ತಮ್ಮ ಆಯ್ಕೆಗಳನ್ನು ಸಕ್ರಿಯವಾಗಿ ವೈವಿಧ್ಯಗೊಳಿಸುತ್ತಿದ್ದಾರೆ. ಈ ಬದಲಾವಣೆಯು ಶಿಕ್ಷಣದ ಒಟ್ಟಾರೆ ವೆಚ್ಚ, ಸಂಸ್ಥೆಗಳ ಗುಣಮಟ್ಟ, ವೀಸಾ ಮಾನದಂಡಗಳು, ಇಂಟರ್ನ್ಶಿಪ್ ಮತ್ತು ಉದ್ಯೋಗಾವಕಾಶಗಳು ಮತ್ತು ವಿದ್ಯಾರ್ಥಿಗಳ ಸುರಕ್ಷತೆಯಂತಹ ಅಂಶಗಳಿಂದ ಪ್ರಭಾವಿತವಾಗಿದೆ.

ಭಾರತೀಯ ವಿದ್ಯಾರ್ಥಿಗಳು ಇಂದು ಸಾಗರೋತ್ತರ ಶಿಕ್ಷಣ ವಿಧಾನದಲ್ಲಿ ಹೆಚ್ಚು ಪ್ರಾಯೋಗಿಕ ಮತ್ತು ಆರ್ ಒಐ (ರಿಟರ್ನ್ ಆನ್ ಇನ್ವೆಸ್ಟ್ಮೆಂಟ್) ಚಾಲಿತರಾಗಿದ್ದಾರೆ. ಸ್ಪೇನ್, ಜರ್ಮನಿ ಮತ್ತು ನ್ಯೂಜಿಲೆಂಡ್ನಂತಹ ತಾಣಗಳು ಉತ್ತಮ ಗುಣಮಟ್ಟದ ಶಿಕ್ಷಣ, ಕೈಗೆಟುಕುವಿಕೆ, ಸ್ಪಷ್ಟ ವೀಸಾ ಮಾರ್ಗಗಳು ಸಿಗಲಿವೆ.

ಮತ್ತು ಶಿಕ್ಷಣ ಮತ್ತು ಉದ್ಯೋಗ ಫಲಿತಾಂಶಗಳ ನಡುವೆ ಉತ್ತಮ ಹೊಂದಾಣಿಕೆಯನ್ನು ನೀಡುತ್ತಿರುವುದರಿಂದ ಬಲವಾದ ಬೇಡಿಕೆಗೆ ಸಾಕ್ಷಿಯಾಗುತ್ತಿವೆ, ವಿಶೇಷವಾಗಿ ಸ್ನಾತಕೋತ್ತರ ಮತ್ತು ಸ್ಟೆಮ್ ಕಾರ್ಯಕ್ರಮಗಳಿಗೆ" ಎಂದು ಆಕ್ಸಿಲೋ ಫಿನ್ಸರ್ವ್ ಸಾಗರೋತ್ತರ ಸಾಲದ ಸಿಬಿಒ ಶ್ವೇತಾ ಗುರು ಮಾಹಿತಿ ನೀಡಿದರು.



ಒಡಿಸ್ಸಾದಿಂದ ಬೆಂಗಳೂರು ದಕ್ಷಿಣ ಜಿಲ್ಲೆ ಬಿಡದಿಯ ವಂಡರ್ ಲಾ ಗೆ ಆಗಮಿಸಿರುವ ಕಾಂಗ್ರೆಸ್ ನಿಂದ ಮೊದಲ ಬಾರಿ ಗೆದ್ದಿರುವ ಶಾಸಕರ ಜತೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ ಕೆ ಶಿವಕುಮಾರ್, ಎಐಸಿಸಿ ಕಾರ್ಯದರ್ಶಿ ಮಯೂರ್ ಜೈಕುಮಾರ್, ಶಾಸಕರಾದ ಎಚ್ ಸಿ ಬಾಲಕೃಷ್ಣ, ಸಿ ಪಿ ಯೋಗೇಶ್ವರ್, ಒಡಿಸ್ಸಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಭಕ್ತ ಚರಣ್ ದಾಸ್. ಒಡಿಸ್ಸಾ ಕಾಂಗ್ರೆಸ್ ಶಾಸಕರಾದ ರಾಜನ್ ಎಕ್ಕ, ಅಶೋಕ್ ದಾಸ್, ಅಪ್ಪಲ ಕುಮಾರ್ ಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ, ಪ್ರಫುಲ್ಲ ಪ್ರಧಾನ್ ಇದ್ದಾರೆ.

## 'ಗಿಗ್ ಕೆಲಸಗಾರರ ಕಾಯ್ದೆ' ಮಾರಕ...!: ಎಚ್ಚರಿಕೆ

ಬೆಂಗಳೂರು

ಕರ್ನಾಟಕ ಸರ್ಕಾರದ ನೂತನ 'ಗಿಗ್ ಕೆಲಸಗಾರರ ಕಾಯ್ದೆ' ಮತ್ತು ಕೇಂದ್ರ ಸರ್ಕಾರದ 'ಸಾಮಾಜಿಕ ಭದ್ರತಾ ಸಂಹಿತೆ'ಯ ನಡುವೆ ಸಮನ್ವಯದ ಕೊರತೆಯಿದ್ದು, ಇದು ಕಾರ್ಮಿಕರ ಕಲ್ಯಾಣಕ್ಕೆ ಸಂಚಕಾರ ತರುವ ಸಾಧ್ಯತೆಯಿದೆ ಎಂದು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ) ಎಚ್ಚರಿಸಿದೆ. ಈ ಕುರಿತು ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದಿರುವ ಸಂಸ್ಥೆಯು, ನಿಯಮಗಳಲ್ಲಿ ಸ್ಪಷ್ಟತೆ ಸಿಗುವವರೆಗೆ ಕಲ್ಯಾಣ ನಿಧಿಗೆ ವಂತಿಗೆ ಸಂಗ್ರಹಿಸುವುದನ್ನು ತಡೆಹಿಡಿಯುವಂತೆ ಮನವಿ ಮಾಡಿದೆ. ಕೇಂದ್ರ ಸರ್ಕಾರ ಅಧಿಸೂಚನೆ ನೀಡಿರುವ 'ಸಾಮಾಜಿಕ ಭದ್ರತಾ ಸಂಹಿತೆ, 2020', ಈಗಾಗಲೇ ಪ್ರತಿಯೊಬ್ಬ ಅಗ್ರಿಗೇಟರ್ (ಸಂಸ್ಥೆ) ತನ್ನ ವಾರ್ಷಿಕ ವಹಿವಾಟಿನ ಶೇ. 1 ರಿಂದ ಶೇ. 2 ರಷ್ಟು ಮೊತ್ತವನ್ನು ಗಿಗ್ ಮತ್ತು ಪ್ಲಾಟ್ ಫಾರ್ಮ್ ಕೆಲಸಗಾರರ ಸಾಮಾಜಿಕ ಭದ್ರತೆಗಾಗಿ ನೀಡಬೇಕೆಂದು ಆದೇಶಿಸಿದೆ ಎಂದು ಐಎಎಂಎಐ ಹೇಳಿದೆ. ಅದೇ ಸಮಯದಲ್ಲಿ, ಕರ್ನಾಟಕದ ಕಾಯ್ದೆಯು ಅಗ್ರಿಗೇಟರ್ ಗಳು ರಾಜ್ಯದ ಗಿಗ್ ಕೆಲಸಗಾರರಿಗೆ ಮಾಡುವ ಪಾವತಿಯ ಮೇಲೆ ಶೇ. 1 ರಿಂದ ಶೇ. 5 ರಷ್ಟು ಕಲ್ಯಾಣ ಶುಲ್ಕವನ್ನು ವಿಧಿಸುತ್ತದೆ. ರಾಜ್ಯದ ಕಾಯ್ದೆಯು ಈ ಶುಲ್ಕ ಪಾವತಿಯನ್ನು ಕೇಂದ್ರದ ನಿಯಮದ ಅಡಿಯಲ್ಲಿ ಸಲ್ಲಿಸಬೇಕಾದ ವಂತಿಗೆಗೆ ಸರಿಹೊಂದಿಸಬಹುದು ಎಂದು ಹೇಳಿದೆಯಾದರೂ, ಈ ಹೊಂದಾಣಿಕೆಯ ಕಾರ್ಯವಿಧಾನ ಹೇಗೆ ಕೆಲಸ ಮಾಡುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಕುರಿತಾದ ಯಾವುದೇ ಮಾರ್ಗಸೂಚಿ ಅಥವಾ ಅಧಿಸೂಚನೆಗಳು ಇದುವರೆಗೆ ಹೊರಬಂದಿಲ್ಲ. ಇಂತಹ ಸ್ಪಷ್ಟತೆಯಿಲ್ಲದ ಸಂದರ್ಭದಲ್ಲಿ, ಸಂಸ್ಥೆಗಳು ಒಂದೇ ಉದ್ದೇಶಕ್ಕಾಗಿ ಎರಡು ಬಾರಿ ಹಣ ಪಾವತಿಸಬೇಕಾದ ಅನಿವಾರ್ಯತೆ ಎದುರಾಗಬಹುದು. ಈ ಹಿನ್ನೆಲೆಯಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಈ ಹೊಂದಾಣಿಕೆಯ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಒಪ್ಪಂದ ಏರ್ಪಡುವವರೆಗೆ ರಾಜ್ಯ ಕಾಯ್ದೆಯಡಿ ಹಣಕಾಸಿನ ವಂತಿಗೆಯನ್ನು ತಡೆಹಿಡಿಯಬೇಕೆಂದು ಐಎಎಂಎಐ ವಿನಂತಿಸಿದೆ.

## ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮ ಖಂಡಿಸಿ ಬೃಹತ್ ಪ್ರತಿಭಟನೆ

ಯಲಹಂಕ

ಒಳ ಮೀಸಲಾತಿ ನೀಡದೆ ಸರ್ಕಾರಿ ಉದ್ಯೋಗಗಳ ನೇಮಕಾತಿಗೆ ಮುಂದಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಖಂಡಿಸಿ 'ಆದಿ ಜಾಂಬವ ಮಾದಿಗ ಮಹಾಸಭಾ(ಎಡಗೈ ಸಮುದಾಯ) ದ ನೂರಾರು ಕಾರ್ಯಕರ್ತರು ಯಲಹಂಕ ಮಿನಿ ವಿಧಾನಸೌಧದ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಆದಿ ಜಾಂಬವ ಮಹಾಸಭಾದ ಮುಖಂಡ ಲಿಂಗನಹಳ್ಳಿ ವೆಂಕಟೇಶ್ ಮಾತನಾಡಿ 'ಫೆಬ್ರವರಿ 26ರ ಸಂಪುಟದ ಉದ್ಯೋಗ ಭರ್ತಿ ತೀರ್ಮಾನವು ಒಳ ಮೀಸಲಾತಿ ತಪ್ಪಿಸುವ ರಾಜ್ಯ ಕಾಂಗ್ರೆಸ್ ಸರ್ಕಾರದ ಬಹುದೊಡ್ಡ ಹುನ್ನಾರವಾಗಿದೆ. ಸದರಿ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆಯದಿದ್ದರೆ ರಾಜ್ಯದಾದ್ಯಂತ ಹೋರಾಟದ ಕಿಚ್ಚು ಹತ್ತಿಕೊಳ್ಳಲಿದೆ. ಮಾತೆತ್ತಿದರೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸಿಎಂ ಸಿದ್ದರಾಮಯ್ಯನವರು ಒಳ ಮೀಸಲಾತಿ ನೀಡದೆ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗುವ ಮೂಲಕ ಬಹುದೊಡ್ಡ ಪ್ರಮಾದವೆಸಗಿ ದ್ದಾರೆ, ಇದರ ಪರಿಣಾಮವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಖಂಡಿತವಾಗಿಯೂ ಎದುರಿಸಲಿದೆ ಎಂದರು.

ಪ್ರತಿಭಟನೆ ಉದ್ದೇಶಿಸಿ ಮುತ್ತುಗದಹಳ್ಳಿ ಮುನಿರಾಜು ಮಾತನಾಡಿ 'ಸರ್ಕಾರ 50 ಸಾವಿರ ಖಾಲಿ ಹುದ್ದೆ ಭರ್ತಿ ಮಾಡುತ್ತದೆಯೋ ಅಥವಾ 1 ಲಕ್ಷ ಹುದ್ದೆ ಭರ್ತಿ ಮಾಡುತ್ತದೆಯೋ ಅದು ಅವರಿಗೆ ಬಿಟ್ಟ ವಿಚಾರ, ಆದರೆ ಎಲ್ಲಾ ಖಾಲಿ ಹುದ್ದೆಗಳನ್ನು ಒಳ ಮೀಸಲಾತಿ ನೀಡಿಯೇ ಭರ್ತಿ ಮಾಡಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಈ ಹಿಂದಿನ ಬಿಜೆಪಿ ಸರ್ಕಾರ ಶೇಕಡ 56% ಒಳ ಮೀಸಲಾತಿ ನೀಡಿ ಎಲ್ಲಾ ಸಮುದಾಯಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿತ್ತು. ಯಲಹಂಕ ಶಾಸಕರಾದ ಎಸ್ ಆರ್ ವಿಶ್ವನಾಥ್ ಅವರು ಒಳ ಮೀಸಲಾತಿ ಮಸೂದೆ ಜಾರಿಯಾದಂದಿನಿಂದಲೂ ಅದರ ಪರವಾಗಿದ್ದು, ಒಳ ಮೀಸಲಾತಿ ಪರವಾಗಿ ಸದನದಲ್ಲಿ ಹಲವು ಬಾರಿ ಧ್ವನಿ ಎತ್ತಿದ್ದರು. ಆದರೆ ಪ್ರಸಕ್ತ ರಾಜ್ಯ ಕಾಂಗ್ರೆಸ್ ಸರ್ಕಾರ ಶೋಷಿತ, ಪೀಡಿತ ಸಮುದಾಯಗಳಿಗೆ ಒಳ ಮೀಸಲಾತಿ ನೀಡದೆ ಉದ್ಯೋಗ ಭರ್ತಿಗೆ ಮುಂದಾಗಿರುವುದು ಅನ್ಯಾಯದ ಪರಮಾವಧಿ, ದಲಿತ ಸಮುದಾಯಗಳಿಗೆ ಎಸಗಿದ ಬಹುದೊಡ್ಡ ದ್ರೋಹ, ದಲಿತರನ್ನು ಕೇವಲ ವೋಟ್ ಬ್ಯಾಂಕ್ ಗಾಗಿ ಮಾತ್ರವೇ ಬಳಸಿಕೊಳ್ಳುವ ಕಾಂಗ್ರೆಸ್ ಸರ್ಕಾರದ ಹುನ್ನಾರವನ್ನು ದಲಿತರು ಅರ್ಥ ಮಾಡಿಕೊಳ್ಳಬೇಕಿದೆ ಎಂದು ಅಸಮಾಧಾನ ಹೊರಹಾಕಿದರು.ಧ್ವನಿ ಎತ್ತಿದ್ದರು. ಆದರೆ ಪ್ರಸಕ್ತ ರಾಜ್ಯ ಕಾಂಗ್ರೆಸ್ ಸರ್ಕಾರ ಶೋಷಿತ, ಪೀಡಿತ ಸಮುದಾಯಗಳಿಗೆ ಒಳ ಮೀಸಲಾತಿ ನೀಡದೆ ಉದ್ಯೋಗ ಭರ್ತಿಗೆ ಮುಂದಾಗಿರುವುದು ಅನ್ಯಾಯದ ಪರಮಾವಧಿ, ದಲಿತ ಸಮುದಾಯಗಳಿಗೆ ಎಸಗಿದ ಬಹುದೊಡ್ಡ ದ್ರೋಹ, ದಲಿತರನ್ನು ಕೇವಲ ವೋಟ್ ಬ್ಯಾಂಕ್ ಗಾಗಿ ಮಾತ್ರವೇ ಬಳಸಿಕೊಳ್ಳುವ ಕಾಂಗ್ರೆಸ್ ಸರ್ಕಾರದ ಹುನ್ನಾರವನ್ನು ದಲಿತರು ಅರ್ಥ ಮಾಡಿಕೊಳ್ಳಬೇಕಿದೆ ಎಂದು ಅಸಮಾಧಾನ ಹೊರಹಾಕಿದರು. ಪ್ರತಿಭಟನಾಕಾರರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಆದಿ ಜಾಂಬವ ಮಾದಿಗ ಮಹಾಸಭಾದ ಪದಾಧಿಕಾರಿಗಳಾದ ಕೋಗಿಲು ವೆಂಕಟೇಶ್, ಮಾರಸಂದ್ರ ಮುನಿದಾಸಪ್ಪ, ಸೋಲದೇವನ ಹಳ್ಳಿ ವೆಂಕಟೇಶ್, ಆವಲಹಳ್ಳಿ ಸುರೇಶ್, ಚೊಕ್ಕನಹಳ್ಳಿ ಚಂದ್ರಣ್ಣ, ಸಿಂಗನಾಯಕನಹಳ್ಳಿ ಮನಿಕೃಷ್ಣ, ಮಲ್ಲೇಶ್, ವೀರಸಾಗರ ನಾಗೇಶ್, ಅಟ್ಟೂರು ವಿಶ್ವ, ಬೆಟ್ಟಹಳ್ಳಿ ಸುನಿಲ್ ಕುಮಾರ್, ಚಲ್ಲಹಳ್ಳಿ ಈರಣ್ಣ, ಹನುಮಂತರಾಜು, ನಾಗದಾಸನಹಳ್ಳಿ ಚಂದ್ರು, ವೆಂಕಟಾಲ ಮುನಿರಾಜು, ಮಾರಸಂದ್ರ ಪ್ರಕಾಶ್, ವೆಂಕಟಾಚಲಪತಿ ಸೇರಿದಂತೆ ಎಡಗೈ ಸಮುದಾಯದ ಹಲವು ಮುಖಂಡರಿದ್ದರು.

# ಆರ್ಥಿಕ, ಬೌದ್ಧಿಕ ದಿವಾಳಿತನದ ಬಜೆಟ್: ವಿಜಯೇಂದ್ರ

ಬೆಂಗಳೂರು

ಮುಖ್ಯಮಂತ್ರಿಗಳು ಮಂಡಿಸಿದ 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಗುರುವಾರ ಸಂಬಂಧ ಮಾತನಾಡಿದ ಅವರು, ಈ ಬಜೆಟ್ ಗಮನಿಸಿದರೆ ಈ ಸರಕಾರದ ಆರ್ಥಿಕ– ಬೌದ್ಧಿಕ ದಿವಾಳಿತನವು ಕೂಡ ಪ್ರದರ್ಶನಗೊಂಡಿದೆ. ಹಣಕಾಸಿನ ಸಚಿವರಾದ ಮುಖ್ಯಮಂತ್ರಿಗಳು ತನ್ನ ರಾಜಕೀಯ ಸಂಧ್ಯಾಕಾಲದಲ್ಲಿರುವ ಈ ಸಂದರ್ಭದಲ್ಲಿ 17ನೇ ಬಜೆಟ್ ಮಂಡಿಸಿದ್ದಾರೆ. ಅವರಿಗೆ ಒಂದು ಸುವರ್ಣಾವಕಾಶ ಇತ್ತು. ತಮ್ಮ ರಾಜಕೀಯ ಜೀವನದ ಸುದೀರ್ಘ ಅನುಭವದ ಆಧಾರದ ಮೇಲೆ ರಾಜ್ಯದ ಸಂಕಷ್ಟಗಳಿಗೆ ನಾಡಿನ ಜನರ ಅಪೇಕ್ಷೆಗೆ ತಕ್ಕಂತೆ ಉತ್ತರ ಕಂಡುಕೊಳ್ಳುವ ಅವಕಾಶ ಇತ್ತು. ಆದರೆ, ಈ ಬಜೆಟ್ ನೋಡಿದಾಗ ಅಸಹಾಯಕರಾಗಿ ಕೈಚೆಲ್ಲಿದ್ದಾರೆಂಬ ಭಾವನೆ ರಾಜ್ಯದ ಜನರಲ್ಲಿ ಮೂಡಿದೆ ಎಂದು ವಿಶ್ಲೇಷಿಸಿದರು.

ಒಟ್ಟಾರೆಯಾಗಿ ಬಜೆಟ್‌ನಲ್ಲಿ ಸಿಎಂ ತನ್ನ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳುವ ಸಲುವಾಗಿ ಕೇಂದ್ರ ಸರಕಾರದ ಮೇಲೆ ಆರೋಪ ಮಾಡಿ ಕೈ ತೊಳೆದುಕೊಳ್ಳುವ ಕುತಂತ್ರಕ್ಕೆ ಈ ಬಜೆಟ್ಟನ್ನು ಸೀಮಿತ ಮಾಡಿದ್ದಾರೆ ಎಂದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಆದಾಯ ಸಂಗ್ರಹದಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ಈ ನಾಡಿನ ಜನರನ್ನು ಸಾಲದ ಸುಳಿಗೆ ಸಿಲುಕಿ ಹಾಕಿಸಿರುವುದು ಸುಳ್ಳಲ್ಲ ಎಂದರು.

**ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರ:** ಸಾಲದ ಭಾರ ಒಂದು ಕಡೆಯಾದರೆ, ಅಸಲು,ಬಡ್ಡಿ ಕಟ್ಟುವುದೇ ರಾಜ್ಯಕ್ಕೆ ದೊಡ್ಡ ಹೊರೆ ಆಗಿದೆ. ವಿತ್ತೀಯ ಕೊರತೆ ಹೆಚ್ಚಾಗಿ



ರಾಜ್ಯದ ಜನರ ಮೇಲೆ ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ರಾಜ್ಯ ಸರಕಾರ ಪ್ರಯೋಗ ಮಾಡುತ್ತಿರುವುದು ಈ ನಾಡಿನ ದುರಂತ ಎಂದು ಬಿ.ವೈ.ವಿಜಯೇಂದ್ರ ಹೇಳಿದರು.

ಸಿಎಂ ಬಜೆಟ್ ಅನ್ನು ಸುದೀರ್ಘವಾಗಿ ಓದುತ್ತಿರುವಾಗ ಆಡಳಿತ ಪಕ್ಷದ ಸದಸ್ಯರನ್ನು ಗಮನಿಸುತ್ತಿದ್ದೆ. ಆಡಳಿತ ಪಕ್ಷದ ಸದಸ್ಯರಿಗೂ ಈ ಬಜೆಟ್ ಬಗ್ಗೆ ಆಸಕ್ತಿ ಇರಲಿಲ್ಲ; ಅವರು ಅಸಹಾಯಕರಾಗಿ ಸದನದಿಂದ ಹೊರಹೋದ ಘಟನೆಯನ್ನೂ ನಾನು ಗಮನಿಸಿದ್ದೇನೆ ಎಂದು ತಿಳಿಸಿದರು.

**ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ:** ಬಜೆಟ್ ಮಂಡಿಸಿದ ಹಣಕಾಸು ಸಚಿವರು, ಪ್ರಗತಿಶೀಲ ರಾಜ್ಯದ ಜನರ ತೆರಿಗೆ ಹಣಕ್ಕೆ ಪ್ರಮುಖ ಟ್ರಸ್ಟಿಯಾದ ನಾನು ಸರ್ವರ ಏಳಿಗೆಯನ್ನು ಬಯಸಿ 17ನೇ ಆಯವ್ಯಯವನ್ನು ಮಂಡಿಸುತ್ತಿದ್ದೇನೆ. ನಾಡಿನ 7 ಕೋಟಿ ಕನ್ನಡಿಗರ ನಿರೀಕ್ಷೆಗಳನ್ನು ನಾವು ಅರಿತಿದ್ದೇವೆ. ಅವರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಮ್ಮ ಸರಕಾರ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಾ ಇದೆ. ಈ ಆಯವ್ಯಯವು ನಾಡಿನ ರೈತರು, ದಮನಿತರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಯುವಜನರ, ವ್ಯಾಪಾರ ಮತ್ತು ಕೈಗಾರಿಕೋದ್ಯಮದಲ್ಲಿ ತೊಡಗಿಕೊಂಡವರ ಕನಸನ್ನು ಮತ್ತು ಆತ್ಮವಿಶ್ವಾಸವನ್ನು ಪ್ರತಿನಿಧಿಸುವ ಜೀವಂತ ದಾಖಲೆ ಆಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ. ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಯಲ್ಲಿ ರಾಜ್ಯದ ರಸ್ತೆ, ಸೇತುವೆ, ಕಟ್ಟಡ ನಿರ್ಮಾಣಕ್ಕೂ ನಮ್ಮ ಸರಕಾರ ಆದ್ಯತೆ ನೀಡಿದೆ ಎಂದಿದ್ದಾರೆ. ಹಾಗಿದ್ದರೆ, ಕಳೆದ 3 ವರ್ಷದಲ್ಲಿ ಈ ಸರಕಾರ ಎಷ್ಟು ರಸ್ತೆಗಳನ್ನು ಮಾಡಿದೆ? ಎಷ್ಟು ಸೇತುವೆಗಳನ್ನು ಕಟ್ಟಿದೆ? ಎಷ್ಟು ಸರಕಾರಿ ಹುದ್ದೆಗಳನ್ನು ನೇಮಕ ಮಾಡಿದ್ದಾರೆ ಎಂದು ಪ್ರಶ್ನಿಸಿದರು. ಇವುಗಳನ್ನು ಎಲ್ಲೂ ಉಲ್ಲೇಖ ಮಾಡಿಲ್ಲ ಎಂದು ತಿಳಿಸಿದರು.

**ಒಂದು ರೀತಿ ಕಟ್ಟುಕಥೆ, ಸುಳ್ಳಿನ ಅಂಶಗಳಿಂದ ಇದು ಕೂಡಿದೆ:**

ವಸತಿರಹಿತರಿಗೆ ಮನೆಗಳು, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದೇವೆ ಎಂದು ಇನ್ನೊಂದು ಸುಳ್ಳು ಹೇಳುತ್ತಾರೆ. ಬಜೆಟ್ಟನ್ನು ಸಂಪೂರ್ಣವಾಗಿ ನೋಡುತ್ತ ಹೋದರೆ ಒಂದು ರೀತಿ ಕಟ್ಟುಕಥೆ, ಸುಳ್ಳಿನ ಅಂಶಗಳಿಂದ ಇದು ಕೂಡಿದೆ ಎಂದು ಗಮನ ಸೆಳೆದರು.

ಕಳೆದ ಎರಡೂ ವರ್ಷಗಳಿಂದ ಹಲವಾರು ಬಾರಿ ಕೇಂದ್ರ ಸರಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ; ಕೇಂದ್ರ ಸರಕಾರ ರಾಜ್ಯಕ್ಕೆ ಮಲತಾಯಿ ಧೋರಣೆ ತೋರಿಸುತ್ತಿದೆ; ನಮ್ಮ ತೆರಿಗೆ ನಮ್ಮ ಹಕ್ಕು– ಈ ವಿಚಾರ ಸಾಕಷ್ಟು ಬಾರಿ ಸದನದಲ್ಲೂ ಪ್ರಸ್ತಾಪ ಆಗಿದೆ. ಸದನದ ಹೊರಗಡೆಯೂ ಪ್ರಸ್ತಾಪ ಆಗಿದೆ. 100 ಬಾರಿ ಹೇಳಿದ್ದಾರೆ. ಜಾಹೀರಾತುಗಳ ಮೂಲಕವೂ ರಾಜ್ಯದ ಜನರನ್ನು ಅಡ್ಡದಾರಿಯಲ್ಲಿ ತೆಗೆದುಕೊಂಡು ಹೋಗುವ ಕೆಲಸವನ್ನು ಈ ರಾಜ್ಯ ಸರಕಾರ ಮಾಡಿದ್ದನ್ನು ನೆನಪಿಸಲು ಬಯಸುವುದಾಗಿ ಹೇಳಿದರು.

ರಾಜ್ಯ ಕೇಂದ್ರ ಸರಕಾರಕ್ಕೆ 100 ರೂ. ಕೊಟ್ಟರೆ ಕೇವಲ 15 ರೂಪಾಯಿ ಮಾತ್ರ ನಮ್ಮ ರಾಜ್ಯಕ್ಕೆ ಕೊಡುತ್ತಿದ್ದಾರೆ; ಅನ್ಯಾಯ ಮಾಡುತ್ತಿದ್ದಾರೆ ಎಂದು ವಿಶ್ಲೇಷಣೆ ನಡೆಯುತ್ತಿದೆ. ನಾನು ಈ ಸದನದ ಮೂಲಕ ಕೆಲವು ಅಂಕಿ ಅಂಶಗಳ ಮೂಲಕ ಇವತ್ತು ಬೆಳಕನ್ನು ಚೆಲ್ಲುವ ಪ್ರಯತ್ನ ಮಾಡುತ್ತೇನೆ. ಈ ಸರಕಾರವು 4.3 ಲಕ್ಷ ಕೋಟಿಯನ್ನು ಕೇಂದ್ರ ಸರಕಾರಕ್ಕೆ ಕಳಿಸಿಕೊಡುವುದಾಗಿ ಹೇಳುತ್ತಿದ್ದಾರೆ. ಆದಾಯ ತೆರಿಗೆ, ಜಿಎಸ್‌ಟಿ ಮತ್ತಿತರ ಮೂಲದಿಂದ ಇದು ಸಂಗ್ರಹ ಆಗುತ್ತಿದೆ. ಆದರೆ, ಇದರಲ್ಲಿ ನೇರ ತೆರಿಗೆ, ಪರೋಕ್ಷ ತೆರಿಗೆ ಎಲ್ಲವನ್ನೂ ಪರಿಗಣಿಸಲಾಗುತ್ತದೆ. ಮಹಾರಾಷ್ಟ್ರದ ನಂತರದಲ್ಲಿ ಅತಿ ಹೆಚ್ಚು ತೆರಿಗೆ ಕೊಡುವ ರಾಜ್ಯ ನಮ್ಮದೆಂದು ಒಪ್ಪಿಕೊಳ್ಳುತ್ತೇನೆ. ಆದರೆ, ಇವತ್ತು ಪ್ರತಿಷ್ಠಿತ ಸಂಸ್ಥೆಗಳಾದ ಇನ್‌ಫೋಸಿಸ್, ವಿಪ್ರೋ ಮೊದಲಾದ ಸಂಸ್ಥೆಗಳಿರುವ ಬೆಂಗಳೂರು ಮಹಾನಗರ ಹೆಡ್ ಕ್ವಾರ್ಟರ್ಸ್ ಮಾತ್ರ. ಆದರೆ, ಈ ಕಂಪೆನಿಗಳು ಇಡೀ ದೇಶದಲ್ಲಿ ವ್ಯವಹಾರ ಮಾಡುತ್ತವೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಮಾಡುತ್ತಾರೆ. ನಮ್ಮ ದೇಶದಲ್ಲಿ ವ್ಯವಹರಿಸುವಾಗ ದೇಶದ ಬೇರೆ ಬೇರೆ ರಾಜ್ಯಗಳಲ್ಲೂ ಗ್ರಾಹಕರು ಹೆಚ್ಚಾಗಿದ್ದಾರೆ. ಕಂಪೆನಿಗಳ ಹೆಡ್ ಕ್ವಾರ್ಟರ್ಸ್ ಇಲ್ಲಿದ್ದರೂ ದೇಶಕ್ಕೇ ಸೇವೆಗಳನ್ನು ಕೊಡುತ್ತಾರೆ. ನಾನಾ ರಾಜ್ಯದಲ್ಲಿ ಅವರಿಗೆ ಗ್ರಾಹಕರಿದ್ದಾರೆ. ಈ ಅಂಶವನ್ನು ಕೂಡ ಗಮನಿಸಬೇಕಿದೆ. ದೇಶದ ಎಲ್ಲ ರಾಜ್ಯಗಳು ಸೇವೆ ಪಡೆಯುವ ಸಂದರ್ಭದಲ್ಲಿ ಇಲ್ಲಿಂದಲೇ ಎಲ್ಲವೂ ಉತ್ಪತ್ತಿ ಆಗುವುದಿಲ್ಲ. ಹೆಡ್ ಕ್ವಾರ್ಟರ್ಸ್‌ನಲ್ಲಿ ಇರುವ ಕಾರಣಕ್ಕಾಗಿ ನಮ್ಮ ರಾಜ್ಯದಿಂದ ಆ ತೆರಿಗೆ ಮೂಲಕ ಹೋಗುವುದನ್ನು ನಾವು ಗಮನಿಸಬೇಕು ಎಂದು ನುಡಿದರು. ಜಿಎಸ್‌ಟಿ ಸಂಗ್ರಹದಲ್ಲಿ ಈ ಸರಕಾರದ ಸಾಧನೆ ಏನು? ನಮ್ಮ ರಾಜ್ಯದ ಆರ್ಥಿಕತೆಯ ಜಿಎಸ್‌ಟಿಯ ಶೇ 60 ಭಾಗ ಸೇವಾ ಕ್ಷೇತ್ರ, ಕಾರ್ಪೊರೇಟ್ ಕಂಪೆನಿಗಳಿಂದ ಬರುತ್ತಿದೆ. ಇವರ ಸಾಧನೆ ಏನಿದೆ ಇದರಲ್ಲಿ? ಎಂದು ಕೇಳಿದರು.

# ಮಾಂಸದ ಅಂಗಡಿ ಅಶುಚಿತ್ವ: ಪಾಲಿಕೆ ಅಧಿಕಾರಿಗಳ ದಾಳಿ- ದಂಡ

ಬೆಂಗಳೂರು

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಎಚ್.ಬಿ.ಆರ್ ಲೇಔಟ್ ಪ್ರದೇಶದ ಮಾಂಸದ ಮಾರಾಟ ಮಳಿಗೆಗಳ ಮೇಲೆ ಪಶುಪಾಲನಾ ವಿಭಾಗದ ಅಧಿಕಾರಿಗಳು ಗುರುವಾರ ವಿಶೇಷ ತಪಾಸಣೆ ನಡೆಸಿದರು.

ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತರಾದ ಪೊಮ್ಮಲ ಸುನೀಲ್ ಕುಮಾರ್ ಅವರ ನಿರ್ದೇಶನದಂತೆ ಈ ದಾಳಿ ನಡೆಸಲಾಯಿತು. ತಪಾಸಣೆಯ ವೇಳೆ ಹಲವಾರು ಮಳಿಗೆಗಳಲ್ಲಿ ಅಶುದ್ಧ ಪರಿಸರ, ಸ್ವಚ್ಛತೆಯ ಕೊರತೆ




ಮತ್ತು ವೈಜ್ಞಾನಿಕವಲ್ಲದ ರೀತಿಯಲ್ಲಿ ಮಾಂಸ ಸಂಗ್ರಹಿಸಿರುವುದು ಕಂಡುಬಂದಿದೆ

**ದಂಡ ಮತ್ತು ಕಟ್ಟುನಿಟ್ಟಿನ ಸೂಚನೆ:**

ಆರೋಗ್ಯ ನಿಯಮಗಳನ್ನು ಗಾಳಿಗೆ ತೂರಿ ವ್ಯಾಪಾರ ಮಾಡುತ್ತಿದ್ದ ಮಳಿಗೆಗಳಿಗೆ 5,000 ದಂಡ ವಿಧಿಸಲಾಯಿತು. ಅಲ್ಲದೆ, ಪ್ರತಿಯೊಬ್ಬ ವ್ಯಾಪಾರಿಯೂ ಕಡ್ಡಾಯವಾಗಿ ಮಾನ್ಯತೆ ಪಡೆದ ಟ್ರೇಡ್ ಲೈಸೆನ್ಸ್ ಹೊಂದಿರಬೇಕು ಮತ್ತು ಮಳಿಗೆಗಳನ್ನು ಅತ್ಯಂತ ಸ್ವಚ್ಛವಾಗಿ ನಿರ್ವಹಿಸಬೇಕು ಎಂದು ಅಧಿಕಾರಿಗಳು ತಾಕೀತು ಮಾಡಿದರು.

**ಮುಂದುವರಿಯಲಿದೆ ಕಾರ್ಯಾಚರಣೆ:**

"ನಗರದ ಚಿಕನ್, ಮಟನ್ ಹಾಗೂ ಮೀನು ಮಾರಾಟ ಮಳಿಗೆಗಳ ಮೇಲೆ ಮುಂದಿನ ದಿನಗಳಲ್ಲಿಯೂ ನಿರಂತರವಾಗಿ ಕಣ್ಗಾವಲು ಇರಿಸಲಾಗುವುದು. ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು," ಎಂದು ಪಾಲಿಕೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಸಾರ್ವಜನಿಕರು ಸಹ ಸ್ವಚ್ಛತೆಯಿರುವ ಮಳಿಗೆಗಳಿಂದಲೇ ಆಹಾರ ಪದಾರ್ಥಗಳನ್ನು ಖರೀದಿಸುವ ಮೂಲಕ ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಆಯುಕ್ತರು ಮನವಿ ಮಾಡಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಪಾಲಿಕೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ. ಎಸ್.ಪಿ. ಲೋಕೇಶ್, ಸಿಬ್ಬಂದಿಗಳಾದ ಚಂದ್ರಶೇಖರ್, ನಾರಾಯಣ ರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ತಿಪಟೂರು ತಾಲೂಕಿನ ಗುಡಿಗೊಂಡನಹಳ್ಳಿ ಗೊಲ್ಲರಟ್ಟಿ ಅಂಗನವಾಡಿ ಕೇಂದ್ರದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ 'ಅಂಗನವಾಡಿ ಬಲವರ್ಧನೆ' ಹಾಗೂ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೃತ್ತ ಮೇಲ್ವಿಚಾರಕಿ ಸುಮಂಗಲ ಬದಾಮಿ, ಅಂಗನವಾಡಿ ಸಹಾಯಕಿ ಶಾಂತಮ್ಮ, ಬಾಲ ವಿಕಾಸ ಸಮಿತಿಯ ಅಧ್ಯಕ್ಷರು, ಪೋಷಕರು ಹಾಗೂ ಅಂಗನವಾಡಿ ಮಕ್ಕಳು ಉಪಸ್ಥಿತರಿದ್ದರು.




ಹೊಸಕೋಟೆ ತಾಲೂಕು ಯೋಜನಾ ಪ್ರಾಧಿಕಾರದ ನಿರ್ದೇಶಕರಾಗಿ ಆಯ್ಕೆಯಾದ ಎಚ್.ಎಂ. ಸುಬ್ಬರಾಜು ಅವರು ಬೆಂಗಳೂರಿನ ಕರ್ನಾಟಕ ಆಹಾರ ಮತ್ತು ನಾಗರಿಕರ ಸರಬರಾಜು ನಿಗಮ ನಿಯಮಿತ ಕಚೇರಿ ಮುಂಭಾಗದಲ್ಲಿ ಸಚಿವರಾದ ಕೆ.ಹೆಚ್.ಮುನಿಯಪ್ಪ ಅವರಿಗೆ ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಶಿವಪ್ಪ, ನಾಗರಾಜ ಕೊಡಿಗೆಹಳ್ಳಿ, ಮಹೇಶ್ ಮತ್ತು ಸೋಮಶೇಖರ್ ಇನ್ನಿತರರು ಇದ್ದರು.



ಮಧುಗಿರಿ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಶ್ರೀ ದಂಡಿನ ಮಾರಮ್ಮ ದೇವಿಯ ಬೆಳ್ಳಿ ಪಲ್ಲಕ್ಕಿ ಜಾತ್ರಾ ಮಹೋತ್ಸವದ ಅಂಗವಾಗಿ, ಮಾಜಿ ಸಚಿವ ಹಾಗೂ ಸ್ಥಳೀಯ ಶಾಸಕ ಕೆ.ಎನ್. ರಾಜಣ್ಣ ಅವರು ಕುಟುಂಬ ಸಮೇತರಾಗಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

# ಒಳಮೀಸಲಾತಿ ಜಾರಿಗೆ ವಿಳಂಬವಾದರೆ ವಿಧಾನಸೌಧಕ್ಕೆ ಮುತ್ತಿಗೆ: ಮಾದರ ಚೆನ್ನಯ್ಯ ಸ್ವಾಮೀಜಿ

ಬೆಂಗಳೂರು

ಕಳೆದ ಮೂರೂವರೆ ದಶಕಗಳಿಂದ ನಡೆಯುತ್ತಿರುವ ಒಳಮೀಸಲಾತಿ ಹೋರಾಟ ಈಗ ನಿರ್ಣಾಯಕ ಘಟ್ಟಕ್ಕೆ ಬಂದು ತಲುಪಿದೆ. ಸರ್ಕಾರ ಕೂಡಲೇ ಎಚ್ಚೆತ್ತು ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ, ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ವಿಧಾನಸೌಧಕ್ಕೆ ಸ್ಥಳಾಂತರಗೊಳ್ಳಲಿದೆ ಎಂದು ಚಿತ್ರದುರ್ಗದ ಮಾದರ ಚೆನ್ನಯ್ಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ನೇಮಕಾತಿಯಲ್ಲಿ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ 'ಒಳಮೀಸಲಾತಿ ಹೋರಾಟ ಸಮಿತಿ' ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

**ಹೋರಾಟದ ಹಾದಿ ಮತ್ತು ತ್ಯಾಗ:**

"ಇದು ಕೇವಲ ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟವಲ್ಲ, ಇದು ನಮ್ಮ ಸಮುದಾಯದ ಪಾಲಿನ ಎರಡನೇ ಸ್ವಾತಂತ್ರ್ಯ ಹೋರಾಟವಾಗಿದೆ. ಕಳೆದ 35 ವರ್ಷಗಳಿಂದ ಸಾವಿರಾರು ಹೋರಾಟಗಾರರು ತಮ್ಮ ಮನೆ–ಮಠ ತೊರೆದು, ಪ್ರಾಣವನ್ನೂ ಪಣಕ್ಕಿಟ್ಟು ಈ ಹೋರಾಟವನ್ನು ಅಂತಿಮ ಹಂತಕ್ಕೆ ತಂದಿದ್ದಾರೆ. ಆದರೆ, ಇಂದಿಗೂ ಮಾದಿಗ ಸಮುದಾಯಕ್ಕೆ ದೊರೆಯಬೇಕಾದ ಹಕ್ಕುಗಳು ಸಿಗದಿರುವುದು ದುರದೃಷ್ಟಕರ" ಎಂದು ಅವರು ವಿಷಾದಿಸಿದರು.

**ಸರ್ಕಾರದ ವಿಳಂಬ ನೀತಿಗೆ ಆಕ್ಷೇಪ:**

ಇತರ ರಾಜ್ಯಗಳ ಉದಾಹರಣೆ ನೀಡಿದ ಸ್ವಾಮೀಜಿ, "ಪಕ್ಕದ ಕೇರಳ ಹಾಗೂ ಪಂಜಾಬ್ ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿಯಾಗಿದೆ. ಅಲ್ಲಿ ಯಾವುದೇ ಕಾನೂನು ತೊಡಕುಗಳು ಎದುರಾಗದ ಮೇಲೆ ಕರ್ನಾಟಕದಲ್ಲಿ ಮಾತ್ರ ಜಾರಿಗೆ ತರಲು ತಾಂತ್ರಿಕ ಅಡ್ಡಿಗಳು ಹೇಗೆ ಎದುರಾಗುತ್ತವೆ?" ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗುತ್ತಿದ್ದರೂ, ಚುನಾವಣೆಗೂ ಮುನ್ನ ನೀಡಿದ್ದ ಭರವಸೆಯನ್ನು ಈಡೇರಿಸಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಂದೇಟು ಹಾಕುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ವಿಧಾನಸೌಧ ಚಲೋ ಎಚ್ಚರಿಕೆ:**

ಒಳಮೀಸಲಾತಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ವಿಳಂಬ ನೀತಿ ಮುಂದುವರಿಸಿದರೆ, ಹೋರಾಟಗಾರರು ಫ್ರೀಡಂ ಪಾರ್ಕ್‌ನ ಗಡಿ ದಾಟಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಿದ್ದಾರೆ. ಆಗ ಉಂಟಾಗುವ ಯಾವುದೇ ಅಹಿತಕರ ಘಟನೆಗಳಿಗೆ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

# 'ಪ್ರಾಣಿಗಳ ಅಂತ್ಯಸಂಸ್ಕಾರಕ್ಕೆ ಚಿತಾಗಾರ ನಿರ್ಮಿಸಿ'



ಬೆಂಗಳೂರು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಾಕುಪ್ರಾಣಿಗಳು ಹಾಗೂ ರಸ್ತೆ ಅಪಘಾತಗಳಲ್ಲಿ ಮೃತಪಡುವ ಪ್ರಾಣಿಗಳಿಗೆ ಗೌರವಯುತವಾಗಿ ಅಂತ್ಯಸಂಸ್ಕಾರ ಮಾಡಲು ಅನುಕೂಲವಾಗುವಂತೆ ವಿದ್ಯುತ್ ಚಿತಾಗಾರ ವ್ಯವಸ್ಥೆ ಮಾಡಬೇಕು ಎಂದು ಮೈಸೂರು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ವಿಧಾನಸಭೆಯಲ್ಲಿ ಆಗ್ರಹಿಸಿದರು.

ಗುರುವಾರ ವಿಧಾನಸಭೆಯಲ್ಲಿ ಗಮನ ಸೆಳೆಯುವ ಸೂಚನೆಯಡಿ ಈ ವಿಷಯ ಪ್ರಸ್ತಾಪಿಸಿದ ಅವರು, ಪ್ರಾಣಿಗಳ ಶವ ಸಂಸ್ಕಾರದ ವಿಳಂಬ ಮತ್ತು ಅವ್ಯವಸ್ಥೆಯಿಂದ ಸಾರ್ವಜನಿಕ ಆರೋಗ್ಯದ ಮೇಲೆ ಉಂಟಾಗುತ್ತಿರುವ ಪರಿಣಾಮಗಳ ಬಗ್ಗೆ ಸರ್ಕಾರದ ಗಮನ ಸೆಳೆದರು.

**ಗೌರವಯುತ ವಿದಾಯದ ಅಗತ್ಯ:**

"ಮೈಸೂರಿನಲ್ಲಿ ಟಾಂಗಾ ನಡೆಸುವವರು ಹಾಗೂ ಹಸು ಸಾಕುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಾಯಿ, ಬೆಕ್ಕುಗಳಂತಹ ಚಿಕ್ಕ ಪ್ರಾಣಿಗಳನ್ನು ಜನರು ತಮ್ಮ ಜಾಗದಲ್ಲಿ ಮಣ್ಣು ಮಾಡುತ್ತಾರೆ. ಆದರೆ ಸ್ಥಳಾವಕಾಶ ಇಲ್ಲದವರಿಗೆ ಮತ್ತು ಕುದುರೆ, ಹಸುಗಳಂತಹ ದೊಡ್ಡ ಪ್ರಾಣಿಗಳು ಮೃತಪಟ್ಟಾಗ ಅಂತ್ಯಸಂಸ್ಕಾರ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ದಶಕಗಳ ಕಾಲ ಪ್ರೀತಿಯಿಂದ ಸಾಕಿದ ಪ್ರಾಣಿಗಳಿಗೆ ಗೌರವಯುತ ವಿದಾಯ ನೀಡಲು ಸಾಧ್ಯವಾಗುತ್ತಿಲ್ಲ" ಎಂದು ಶಾಸಕರು ವಿಷಾದಿಸಿದರು. ಇದು ಸ್ವಚ್ಛ ನಗರಿ ಎಂಬ ಖ್ಯಾತಿಯ ಮೈಸೂರಿಗೆ ಕಳಂಕ ತರುವುದಲ್ಲದೆ, ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತಿದೆ. ಆದ್ದರಿಂದ ಮೃತ ಪ್ರಾಣಿಗಳ ವಿಲೇವಾರಿಗೆ ಪ್ರತ್ಯೇಕ ವಾಹನ ವ್ಯವಸ್ಥೆ ಹಾಗೂ ವಿದ್ಯುತ್ ಚಿತಾಗಾರ ಅತ್ಯಗತ್ಯ ಎಂದು ಅವರು ಒತ್ತಾಯಿಸಿದರು. ನಗರಾಭಿವೃದ್ಧಿ ಸಚಿವರ ಪರವಾಗಿ ಉತ್ತರಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, "ಮೈಸೂರಿನ ರಾಯನಕೆರೆ ಬಳಿ ಪ್ರಾಣಿಗಳನ್ನು ಮಣ್ಣು ಮಾಡಲು ಈಗಾಗಲೇ 5 ಎಕರೆ ಭೂಮಿಯನ್ನು ಮೀಸಲಿಡಲಾಗಿದೆ. ಸತ್ತ ಪ್ರಾಣಿಗಳನ್ನು ಸಾಗಿಸಲು ನಗರಪಾಲಿಕೆಯಲ್ಲಿ ಟ್ರಾಕ್ಟರ್ ಹಾಗೂ ಆಟೋಗಳ ವ್ಯವಸ್ಥೆ ಇದೆ. ಶಾಸಕರು ಕೋರಿರುವ ವಿದ್ಯುತ್ ಚಿತಾಗಾರದ ಬೇಡಿಕೆಯನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಅಗತ್ಯ ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದರು.

# ಕಂದಾಯ ಇಲಾಖೆ ವಿಚಾರ: ಶಾಸಕರಿಬ್ಬರ ಜಟಾಪಟಿ!

ಬೆಂಗಳೂರು

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ ವಿಚಾರವಾಗಿ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮತ್ತು ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ಪರಸ್ಪರ ಕಿತ್ತಾಡಿಕೊಂಡ ಘಟನೆ ನಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಶಾಂಗ್ರಿ–ಲಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಸಭೆ ನಡೆದಿತ್ತು. ಕಟಾರಿಯಾ ವಿರುದ್ಧ ಕಿಡಿಕಾರಿದ ನಾರಾಯಣ ಸ್ವಾಮಿ, ಕಂದಾಯ ಇಲಾಖೆಯ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪತ್ರ ನೀಡಿದರೂ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ಅವರನ್ನು ವರ್ಗಾವಣೆ ಮಾಡುವಂತೆ ಈ ಹಿಂದೆಯೇ ನಾನೂ ಸೇರಿದಂತೆ ಹಲವು ಶಾಸಕರು ಪತ್ರ ಬರೆದಿದ್ದೇವೆ. ಆದರೂ ವರ್ಗಾವಣೆ ಮಾಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ನಾರಾಯಣ ಸ್ವಾಮಿ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ರಾಜೇಗೌಡ, 'ಸಚಿವ ಕೃಷ್ಣ ಬೈರೇಗೌಡರಂತೆ ಕಟಾರಿಯಾ ಅವರೂ ಉತ್ತಮ ಕೆಲಸ ಮಾಡುತ್ತಿದ್ದಾರೆ. ಕಟಾರಿಯಾ ಬಗ್ಗೆ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ' ಎಂದಿದ್ದಾರೆ. ಈ ವೇಳೆ ರಾಜೇಗೌಡ ವಿರುದ್ಧ ನಾರಾಯಣ ಸ್ವಾಮಿ ಕೆರಳಿದ್ದಾರೆ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದು, ಕೋಪಗೊಂಡ ನಾರಾಯಣಸ್ವಾಮಿ ಸಭೆಯಿಂದ ಹೊರ ನಡೆದ ಪ್ರಸಂಗ ಜರುಗಿದೆ.

ಅನುದಾನಕ್ಕಾಗಿ ಅನುದಾನ ಬೇಡಿಕೆ ವಿಚಾರದಲ್ಲಿ ಸರ್ಕಾರ ಘೋಷಿಸಿದ್ದರೂ, ಬಿಡುಗಡೆಯಲ್ಲಿ ವಿಳಂಬವಾಗುತ್ತಿದೆ. ಸ್ಥಳೀಯ ಸಂಸ್ಥೆಯ ಚುನಾವಣೆಗಳು ಹತ್ತಿರ ಬರುತ್ತಿದ್ದು, ಅಭಿವೃದ್ಧಿ ಕಾರ್ಯ ಮಾಡದಿದ್ದರೆ ಪಕ್ಷಕ್ಕೆ ಕಷ್ಟವಾಗಲಿದೆ. ಹೀಗಾಗಿ ಮುಖ್ಯಮಂತ್ರಿ ಕಚೇರಿಯಲ್ಲಿ ಲೈಸನಿಂಗ್ ಅಧಿಕಾರಿಯನ್ನು ನೇಮಿಸುವಂತೆ ಶಾಸಕರು ಮನವಿ ಮಾಡಿದರು ಎನ್ನಲಾಗಿದೆ. ತಮಗೆ ಅನುದಾನ ನೀಡುವುದಾಗಿ ಭರವಸೆ ನೀಡಿದ್ದರೂ, ಈವರೆಗೂ ಅನುದಾನ ನೀಡಿಲ್ಲವೆಂದು ಪರಿಷತ್ ಸದಸ್ಯರು ಅಳಲು ತೋಡಿಕೊಂಡರು ಎಂದು ತಿಳಿದುಬಂದಿದೆ.

'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ನಿಗಾ ವಹಿಸಬೇಕು. ಅನ್ಯ ರಾಜ್ಯಗಳಲ್ಲಿ ಬಿಜೆಪಿಯು ಎಸ್‌ಐಆರ್‌ನ್ನು ರಾಜಕೀಯ ಸಾಧನವಾಗಿ ಮಾಡಿಕೊಂಡಿದೆ. ಈ ಬಗ್ಗೆ ನಿಗಾವಹಿಸಿ ಮತದಾರರ ಪಟ್ಟಿಯಿಂದ ಅನಗತ್ಯವಾಗಿ ಹೆಸರು ಕೈಬಿಡದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗೆ ಶಾಸಕರು ಮನವಿ ಮಾಡಿದರು ಎಂದೂ ಗೊತ್ತಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಕೇಂದ್ರ ಸರ್ಕಾರ ತೆರಿಗೆ ಪಾಲಿನಲ್ಲಿ ತಾರತಮ್ಯ ಮಾಡಿದೆ. ಇದರಿಂದ ಜಿಎಸ್‌ಟಿ ಪರಿ–ಷ್ಕರಣೆಯಿಂದ ರಾಜ್ಯದ ಆದಾಯಕ್ಕೆ ಪೆಟ್ಟು ಬಿದ್ದಿದೆ. ನಿರೀಕ್ಷಿತ ನೆರವು ದೊರೆಯದಿದ್ದರೂ ರಾಜ್ಯದ ಹಣಕಾಸು ವ್ಯವಸ್ಥೆ ಉತ್ತಮವಾಗಿದೆ. ಬಜೆಟ್ ಉತ್ತಮವಾಗಿ ಮೂಡಿಬಂದಿದೆ. ಎಲ್ಲ ಇಲಾಖೆಗಳಿಗೂ ಹಿಂದಿನ ಬಾರಿಗಿಂತ ಹೆಚ್ಚಿನ ಅನುದಾನ ನೀಡಲಾಗಿದೆ. ಉಭಯ ಸದನಗಳಲ್ಲಿ ಸಚಿವರು ಕಡ್ಡಾಯವಾಗಿ ಹಾಜರಿರಬೇಕು. ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರೂ ಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸಚಿವರು, ಶಾಸಕರು ಸದನದಲ್ಲಿ ಇಲ್ಲ ಎನ್ನುವಂತಾಗಬಾರದು' ಎಂದು ಸಭೆಯಲ್ಲಿ ಸೂಚಿಸಿದ್ದಾರೆ ಎನ್ನುವುದು ಗೊತ್ತಾಗಿದೆ.

# 'ಸಚಿವ ಕೃಷ್ಣ ಭೈರೇಗೌಡರ ವಿರುದ್ಧ ಅಸಮಾಧಾನವಿಲ್ಲ'

ಬಂಗಾರಪೇಟೆ



ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರ ವಿರುದ್ಧ ನನ್ನ ಹೋರಾಟವೇ ಹೊರತು, ಕಂದಾಯ ಸಚಿವ ಕೃಷ್ಣ ಭೈರೇಗೌಡರ ವಿರುದ್ಧ ನನಗೇನು ಅಸಮಾಧಾನವಿಲ್ಲ ಎಂದು ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಬುಧವಾರ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ವ್ಯಕ್ತವಾದ ಅಸಮಾಧಾನದ ಕುರಿತು ಗುರುವಾರ ಸ್ಪಷ್ಟೀಕರಣ ನೀಡಿದ ಅವರು, ಅಧಿಕಾರಿಗಳ ನಡವಳಿಕೆ ಹಾಗೂ ಶಾಸಕರನ್ನು ನಿರ್ಲಕ್ಷಿಸುತ್ತಿರುವ ಸಚಿವರ ಧೋರಣೆಯ ಕುರಿತು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಮುಂದೆ ಮುಕ್ತವಾಗಿ ಮಾತನಾಡಿದ್ದೇನೆ ಎಂದರು.

**ಅಧಿಕಾರಿಯ ವಿರುದ್ಧ ಅಸಮಾಧಾನ:**

ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರ ವರ್ಗಾವಣೆಗೆ ಆಗ್ರಹಿಸಿ ಈಗಾಗಲೇ 55 ಶಾಸಕರ ಸಹಿಯನ್ನು ಒಳಗೊಂಡ ಮನವಿಯನ್ನು ನೀಡಿದ್ದರೂ, ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಟಾರಿಯಾ ಅವರ ನಡವಳಿಕೆ ಶಾಸಕರಿಗೆ ಪೂರಕವಾಗಿಲ್ಲ ಎಂದು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. "ನಾವು ಶಾಸಕರ ಸಮಸ್ಯೆಗಳನ್ನು ನಾಯಕರ ಮುಂದೆ ಹೇಳಿಕೊಂಡಿದ್ದೇವೆ, ಅದರಲ್ಲಿ ತಪ್ಪೇನಿದೆ?" ಎಂದು ಅವರು ಪ್ರಶ್ನಿಸಿದರು.

**ರಾಜೇಗೌಡರ ವಿರುದ್ಧ ಕಿಡಿ:**

ಸಭೆಯ ವೇಳೆ ಶೃಂಗೇರಿ ಶಾಸಕ ರಾಜೇಗೌಡ ಅವರು ಮಧ್ಯಪ್ರವೇಶಿಸಿ, ಸಚಿವ ಕೃಷ್ಣ ಭೈರೇಗೌಡರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿ, ನಾನು ಸುಳ್ಳು ಹೇಳುತ್ತಿದ್ದೇನೆ ಎಂಬಂತೆ ಬಿಂಬಿಸಲು ಪ್ರಯತ್ನಿಸಿದರು ಎಂದು ನಾರಾಯಣಸ್ವಾಮಿ ಆರೋಪಿಸಿದರು. "ಬಡವರ ಸಮಸ್ಯೆಗಳ ಬಗ್ಗೆ ದಲಿತ ಶಾಸಕನೊಬ್ಬ ಧ್ವನಿ ಎತ್ತಿದರೆ ಅದನ್ನು ದಮನ ಮಾಡುತ್ತೀರಾ? ಎಂದು ಪ್ರಶ್ನಿಸಿ ನಾನು ಸಭೆಯಿಂದ ಹೊರಬಂದಿದ್ದೇನೆ," ಎಂದು ಅಂದಿನ ವಿದ್ಯಮಾನಗಳನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಕೆಲವು ಸಚಿವರ ವರ್ತನೆಯ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿದ ಅವರು, "ಶಾಸಕರ ಬೆಂಬಲದಿಂದಲೇ ಸಚಿವರಾಗಿದ್ದೇವೆ ಎಂಬ ಕನಿಷ್ಠ ಅರಿವು ಕೆಲವರಿಗಿರಲಿ. ಶಾಸಕರನ್ನು ನಿರ್ಲಕ್ಷಿಸುವ ಧೋರಣೆ ಸರಿಯಲ್ಲ ಎಂದು ವರಿಷ್ಠರಿಗೆ ತಿಳಿಸಿದ್ದೇನೆ," ಎಂದು ಖಾರವಾಗಿ ನುಡಿದರು.

# ಗಜಪಥ ಉಳಿಸಲು ಹೊಸ ಕ್ರಮ

ಬೆಂಗಳೂರು



ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಸರ್ಕಾರ ಪ್ರಥಮ ಆದ್ಯತೆ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ 201 ಕೋಟಿ ರೂ. ವೆಚ್ಚದಲ್ಲಿ 116 ಕಿ.ಮೀ ಉದ್ದದ ರೈಲ್ವೆ ಹಳಿ ತಡೆಗೋಡೆ ನಿರ್ಮಿಸಲಾಗುತ್ತಿದೆ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ವಿಧಾನಸಭೆಗೆ ತಿಳಿಸಿದರು.

ಗುರುವಾರ ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ವನ್ಯಜೀವಿ ಹಾವಳಿ ತಡೆಗೆ ಕೈಗೊಂಡಿರುವ ವಿವಿಧ ವೈಜ್ಞಾನಿಕ ಕ್ರಮಗಳನ್ನು ವಿವರಿಸಿದರು.

"ರಾಜ್ಯದಲ್ಲಿ ಆನೆಗಳ ಸಂಖ್ಯೆ ಹೆಚ್ಚಳವಾಗಿದೆ. ಇದರ ಬೆನ್ನಲ್ಲೇ ಎಕ್ಸ್‌ಪ್ರೆಸ್ ಹೆದ್ದಾರಿ ಸೇರಿದಂತೆ ಬೃಹತ್ ಮೂಲಭೂತ ಸೌಕರ್ಯ ಕಾಮಗಾರಿಗಳಿಂದಾಗಿ ಆನೆಗಳು ಸಂಚರಿಸುವ 'ಗಜಪಥ'ಗಳು ಛಿದ್ರವಾಗಿವೆ. ಇದರಿಂದ ಆನೆಗಳು ಅನಿವಾರ್ಯವಾಗಿ ನಾಡಿಗೆ ನುಗ್ಗುತ್ತಿದ್ದು, ಸಂಘರ್ಷಕ್ಕೆ ಕಾರಣವಾಗುತ್ತಿದೆ," ಎಂದು ಸಚಿವರು ವಿಶ್ಲೇಷಿಸಿದರು. ಮಳವಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಐದೂವರೆ ಕಿ.ಮೀ ರೈಲು ಹಳಿ ತಡೆಗೋಡೆಗೆ 9.38 ಕೋಟಿ ರೂ. ಮಂಜೂರು ಮಾಡಲಾಗಿದ್ದು, ಕಾಮಗಾರಿ ಶೀಘ್ರ ಆರಂಭವಾಗಲಿದೆ. ಮಳವಳ್ಳಿಯಲ್ಲಿ ಚಿರತೆ ಹಾವಳಿ ಹೆಚ್ಚಿರುವ ಹಿನ್ನೆಲೆಯಲ್ಲಿ ವಿಶೇಷ ಚಿರತೆ ಕಾರ್ಯಪಡೆ ಹಾಗೂ ಅಗತ್ಯ ವಾಹನ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು. ಆನೆಗಳ ಸಂಚಾರದ ಮೇಲೆ ನಿಗಾ ಇಡಲು ಡ್ರೋನ್ ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ. ರೈಲು ಹಳಿ ತಡೆಗೋಡೆಯ ಜೊತೆಗೆ ಟೆಂಟಕಲ್ ಫೆನ್ಸಿಂಗ್ ಮತ್ತು ಕಂದಕಗಳ ನಿರ್ಮಾಣಕ್ಕೂ ಒತ್ತು ನೀಡಲಾಗಿದೆ. ವನ್ಯಜೀವಿಗಳನ್ನು ಮರಳಿ ಕಾಡಿಗೆ ಅಟ್ಟಲು ಆನೆ ಕಾರ್ಯಪಡೆಗಳನ್ನು ರಚಿಸಲಾಗಿದೆ. ಅಲ್ಲದೆ, ಖಾಲಿ ಇರುವ ಉಪ ವಲಯ ಅರಣ್ಯಾಧಿಕಾರಿಗಳ ನೇಮಕಾತಿಗೂ

14/03/2026

# ಭಾರತ ಸಾರಥಿ

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

## ‘ವಾಕಿಂಗ್ ಝೋನ್’ ಈಗ ಕುಡುಕರ ಅಡ್ಡೆ! ಅನುದಾನ ಮಣ್ಣುಪಾಲು

● ವಿ.ಶಿವಾರೆಡ್ಡಿ
ಬಂಗಾರಪೇಟೆ

ಸಾರ್ವಜನಿಕರ ಆರೋಗ್ಯ ಮತ್ತು ಮನರಂಜನೆಗಾಗಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಕೆರೆ ಪಕ್ಕದ ‘ವಾಕಿಂಗ್ ಝೋನ್’ ಇಂದು ನಿರ್ವಹಣೆಯಿಲ್ಲದೆ ಅನಾಥವಾಗಿದೆ. ಹತ್ತು ವರ್ಷಗಳ ಹಿಂದೆ ಅಂದಿನ ಪುರಸಭೆ (ಈಗಿನ ನಗರಸಭೆ) ವತಿಯಿಂದ ನಿರ್ಮಿಸಲಾಗಿದ್ದ ಈ ಪಥವು, ಈಗ ವಾಕಿಂಗ್ ಮಾಡುವವರಿಗಿಂತ ಕುಡುಕರಿಗೆ ಮತ್ತು ಅಕ್ರಮ ಚಟುವಟಿಕೆಗಳಿಗೆ ಸುರಕ್ಷಿತ ತಾಣವಾಗಿ ಮಾರ್ಪಟ್ಟಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಉದ್ದೇಶ ಮರೆತ ಯೋಜನೆ: ಸ್ಥಳೀಯರು ಬೆಳಿಗ್ಗೆ ಮತ್ತು ಸಂಜೆ ವೇಳೆ ಶುದ್ಧ ಗಾಳಿ ಸೇವಿಸುತ್ತಾ ವ್ಯಾಯಾಮ ಮಾಡಲು ಅನುಕೂಲವಾಗಲಿ ಎಂಬ ಸದುದ್ದೇಶದಿಂದ ಕೆರೆ ಪಕ್ಕದಲ್ಲಿ ಸ್ಲ್ಯಾಬ್‌ಗಳನ್ನು ಅಳವಡಿಸಿ, ತಂತಿ ಬೇಲಿ ಹಾಗೂ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕಳೆದ ಕೆಲವು ವರ್ಷಗಳಿಂದ ನಗರಸಭೆಯ ನಿರ್ಲಕ್ಷ್ಯದಿಂದಾಗಿ ಇಡೀ ಪ್ರದೇಶವು ಹಾಳುಕೊಂಪೆಯಂತಾಗಿದೆ.





“ಶಾಸಕ ಎಸ್.ಎನ್.ನಾರಾಯಣಸ್ವಾಮಿ ಅವರು ಕೆರೆ ಮತ್ತು ವಾಕಿಂಗ್ ಝೋನ್ ಅಭಿವೃದ್ಧಿಗೆ ವಿಶೇಷ ಅನುದಾನದಡಿ 4 ಕೋಟಿ ರೂ. ಮಂಜೂರು ಮಾಡಿಸಿದ್ದಾರೆ. ಟೆಂಡರ್ ಪ್ರಕ್ರಿಯೆ ಮುಗಿಸಿ ಶೀಘ್ರದಲ್ಲೇ ಅಭಿವೃದ್ಧಿ ಕಾಮಗಾರಿ ಮತ್ತು ನಿರ್ವಹಣೆ ಆರಂಭಿಸಲಾಗುವುದು.”

- ಸತ್ಯನಾರಾಯಣ, ಮುಖ್ಯಾಧಿಕಾರಿಗಳು, ನಗರಸಭೆ, ಬಂಗಾರಪೇಟೆ.

ಸಮಸ್ಯೆಗಳ ಸುರಿಮಳೆ:



“ಬಂಗಾರಪೇಟೆ ಕೆರೆ ಪಕ್ಕದ ವಾಕಿಂಗ್ ಝೋನ್ ಸರ್ಕಾರದ ಹಣ ಹೇಗೆ ಪೋಲಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇತ್ತ ಗಮನ ಹರಿಸಿ, ಇದನ್ನು ಸರಿಪಡಿಸಿ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಬೇಕು.”

- ರಮೇಶ್ ಬಾಬು, ಹಿರಿಯ ನಾಗರಿಕ, ಬಂಗಾರಪೇಟೆ.

ಪೊದೆಗಳ ಆವಾಸಸ್ಥಾನ: ವಾಕಿಂಗ್ ಪಥದ ಇಕ್ಕೆಲಗಳಲ್ಲಿ ಮುಳ್ಳಿನ ಗಿಡಗಳು ಬೆಳೆದು ನಿಂತಿದ್ದು, ಪಾದಚಾರಿ ಮಾರ್ಗವನ್ನೇ ಆವರಿಸಿಕೊಂಡಿವೆ.

ವಿಷಜಂತುಗಳ ಭೀತಿ: ದಟ್ಟವಾಗಿ ಬೆಳೆದಿರುವ ಗಿಡಗಂಟೆಗಳ ಮಧ್ಯೆ ಹಾವುಗಳು, ಹೆಗ್ಗಣಗಳು ಮತ್ತು ಕೀಟಗಳ ಕಾಟ ಹೆಚ್ಚಾಗಿದ್ದು, ಸಂಜೆ ವೇಳೆಯಲ್ಲಿ ಇಲ್ಲಿ ಸುಳಿಯಲು ಜನರು ಹೆದರುತ್ತಿದ್ದಾರೆ.

ಕತ್ತಲಲ್ಲಿ ವಾಕಿಂಗ್ ಝೋನ್: ಈ ಹಿಂದೆ ಅಳವಡಿಸಲಾಗಿದ್ದ ವಿದ್ಯುತ್ ಕಂಬಗಳು ಈಗ ಕೇವಲ ಅಲಂಕಾರಿಕ ವಸ್ತುಗಳಾಗಿವೆ. ದೀಪಗಳು ಉರಿಯದ ಕಾರಣ ರಾತ್ರಿಯಾಗುತ್ತಿದ್ದಂತೆ ಇಡೀ ಪ್ರದೇಶ ಕತ್ತಲಲ್ಲಿ ಮುಳುಗುತ್ತದೆ.

ಅನೈತಿಕ ಚಟುವಟಿಕೆ: ಸರಿಯಾದ ಕಾವಲು ಮತ್ತು ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ, ಈ ಜಾಗವು ಮದ್ಯವ್ಯಸನಿಗಳ ಕೇಂದ್ರವಾಗಿದೆ. ಮದ್ಯದ ಬಾಟಲಿಗಳು ಮತ್ತು ಕಸದ ರಾಶಿಗಳು ಎಲ್ಲೆಂದರಲ್ಲಿ ಬಿದ್ದಿವೆ.

ಸಾರ್ವಜನಿಕರ ಆಗ್ರಹ: ಲಕ್ಷಾಂತರ ರೂಪಾಯಿ ಸಾರ್ವಜನಿಕರ ಹಣವನ್ನು ಬಳಸಿ ನಿರ್ಮಿಸಿದ ಈ ಆಸ್ತಿಯನ್ನು ಉಳಿಸಿಕೊಳ್ಳುವಲ್ಲಿ ನಗರಸಭೆ ವಿಫಲವಾಗಿದೆ. “ಹಿರಿಯ ನಾಗರಿಕರು ಮತ್ತು ಮಕ್ಕಳಿಗೆ ಇಲ್ಲಿಗೆ ಬರಲು ಭಯವಾಗುತ್ತಿದೆ. ಕೂಡಲೇ ಸ್ವಚ್ಛತೆ ಮಾಡಿ ದೀಪಗಳ ವ್ಯವಸ್ಥೆ ಕಲ್ಪಿಸಬೇಕು” ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.



## ವಿಪತ್ತು ನಿರ್ವಹಣೆ ಅರಿವು ಅಗತ್ಯ: ಎಡಿಸಿ



ದೇವನಹಳ್ಳಿ

ಆಕಸ್ಮಿಕವಾಗಿ ಸಂಭವಿಸುವ ವಿಪತ್ತುಗಳನ್ನು ಸಮರ್ಥವಾಗಿ ಎದುರಿಸಲು ಸಮನ್ವಯ ಇಲಾಖೆಗಳು ಸದಾ ಜಾಗೃತವಾಗಿರಬೇಕು ಎಂದು ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ, ಜಿಂದಾಲ್ ಅಲ್ಯುಮಿನಿಯಂ ಮತ್ತು ಗ್ಯೇಲ್ ಗ್ಯಾಸ್ ಲಿಮಿಟೆಡ್ ಸಹಯೋಗದೊಂದಿಗೆ ದಾಬಸ್‌ಪೇಟೆಯ ಸೋಂಪುರ ಕೈಗಾರಿಕಾ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿದ್ದ ‘ರಾಸಾಯನಿಕ ಸೋರಿಕೆ ಅಣುಕು ಪ್ರದರ್ಶನ’ವನ್ನು ವೀಕ್ಷಿಸಿ ಅವರು ಮಾತನಾಡುತ್ತಿದ್ದರು.

ನೈಜ ಘಟನೆಯಂತೆ ಭಾಸವಾದ ಮಾಕ್ ಡ್ರಿಲ್: ಜಿಂದಾಲ್ ಅಲ್ಯೂಮಿನಿಯಂ ಕಾರ್ಖಾನೆ ಆವರಣದಲ್ಲಿ ನಡೆದ ಈ ಪ್ರದರ್ಶನವು ನೈಜ ದುರಂತವನ್ನೇ ನೆನಪಿಸುವಂತಿತ್ತು. ಉತ್ಖನನ ಕೆಲಸದ ವೇಳೆ ಪೈಪ್‌ಲೈನ್ ಆಕಸ್ಮಿಕವಾಗಿ ಹಾನಿಗೊಳಗಾಗಿ ಅನಿಲ ಸೋರಿಕೆಯಾದ ಸನ್ನಿವೇಶವನ್ನು ಸೃಷ್ಟಿಸಲಾಯಿತು. ಬೆಂಕಿ ಹೊತ್ತಿಕೊಂಡ ದೃಶ್ಯ, ನಿಲ್ದಾಣದಲ್ಲಿ ಟ್ಯಾಂಕರ್ ಸೋರಿಕೆಯಿಂದ ಉಂಟಾದ ಆವಿ ಮೋಡ ಸ್ಫೋಟ ಇವೆಲ್ಲವೂ ತಾಂತ್ರಿಕವಾಗಿ ಅತ್ಯಂತ ನಿಖರವಾಗಿ ಮೂಡಿಬಂದವು.

ಕ್ಷಣಾರ್ಧದಲ್ಲಿ ಕಾರ್ಯಾಚರಣೆ: ಘಟನೆ ನಡೆದ ತಕ್ಷಣ ಎನ್.ಡಿ.ಆರ್.ಎಫ್, ಅಗ್ನಿಶಾಮಕ ದಳ ಮತ್ತು ಪೊಲೀಸ್ ಇಲಾಖೆ ಚುರುಕಾಗಿ ಕಾರ್ಯೋನ್ಮುಖವಾದವು. ಸುಮಾರು 400 ರಿಂದ 500 ಕಾರ್ಮಿಕರನ್ನು ಸುರಕ್ಷಿತವಾಗಿ ರಕ್ಷಿಸಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಈ ಅಣುಕು ಪ್ರದರ್ಶನದಲ್ಲಿ:

05 ಜನರಿಗೆ ಗಂಭೀರ ಸುಟ್ಟ ಗಾಯಗಳಾಗಿರುವಂತೆ ಬಿಂಬಿಸಲಾಯಿತು.

10 ಜನರು ಸಾವನ್ನಪ್ಪಿದ್ದಾರೆ ಎಂಬ ಕೃತಕ ಸನ್ನಿವೇಶ ಸೃಷ್ಟಿಸಿ ತುರ್ತು ನಿರ್ವಹಣೆಯನ್ನು ಪರೀಕ್ಷಿಸಲಾಯಿತು.

ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡಿ ಕೂಡಲೇ ಆಸ್ಪತ್ರೆಗೆ ರವಾನಿಸುವ ಪ್ರಕ್ರಿಯೆ ನಡೆಯಿತು.

ಭೂಪಾಲ್ ದುರಂತದ ಪಾಠ: “ಭೂಪಾಲ್ ಅನಿಲ ದುರಂತದ ನಂತರ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಇಂತಹ ಅಣುಕು ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕೈಗಾರಿಕಾ ಪ್ರದೇಶಗಳಲ್ಲಿನ ಸಾರ್ವಜನಿಕರಿಗೆ ಮತ್ತು ಸಿಬ್ಬಂದಿಗೆ ಇಂತಹ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು ಎಂಬ ಜ್ಞಾನವಿರಬೇಕು. ಯಾವುದೇ ತುರ್ತು ಪರಿಸ್ಥಿತಿಯಲ್ಲೂ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು” ಎಂದು ಅಪರ ಜಿಲ್ಲಾಧಿಕಾರಿಗಳು ಇದೇ ವೇಳೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಖಾನೆಗಳ ಜಂಟಿ ನಿರ್ದೇಶಕ ಪಾರ್ಥಸಾರಥಿ, ಉಪನಿರ್ದೇಶಕರಾದ ನರಸಿಂಹ ಮೂರ್ತಿ, ತಿಮ್ಮರಾಜು, ಜಿಂದಾಲ್ ಅಲ್ಯೂಮಿನಿಯಂ ಮುಖ್ಯಸ್ಥರಾದ ವಿಕ್ರಮ್ ಶರ್ಮಾ, ಎಂ. ಸತೇಶ್ ಕುಮಾರ್, ವಿಪತ್ತು

## ಯೋಧರ ಸ್ಮಾರಕ ಮರೆಮಾಚುವ ಷಡ್ಯಂತ್ರ

ಕೋಲಾರ

ನಗರದ ಜಯನಗರ ಮುಖ್ಯರಸ್ತೆಯಲ್ಲಿರುವ ಪ್ರತಿಷ್ಠಿತ ಅಂಬೇಡ್ಕರ್ ಉದ್ಯಾನವನದ ಮುಂಭಾಗ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವ ಮೂಲಕ ಉದ್ಯಾನವನದ ಅಂದವನ್ನು ಹಾಳುಗೆಡವಲು ನಗರಸಭೆ ಮುಂದಾಗಿದೆ ಎಂದು ಮಾಜಿ ಸಂಸದ ಎಸ್. ಮುನಿಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ನಿರ್ಧಾರವು ಕೇವಲ ಗುತ್ತಿಗೆದಾರರನ್ನು ಓಲೈಸುವ ಮತ್ತು ಕಮಿಷನ್ ಪಡೆಯುವ ತಂತ್ರ ಎಂದು ಅವರು ದೂರಿದ್ದಾರೆ.

ಯೋಧರ ಸ್ಮಾರಕಕ್ಕೆ ಅವಮಾನದ ಭೀತಿ: ಪತ್ರಿಕಾ ಹೇಳಿಕೆ ನೀಡಿರುವ ಮುನಿಸ್ವಾಮಿ ಅವರು, “ಈ ಉದ್ಯಾನವನದ ಒಳಭಾಗದಲ್ಲಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರ ಯೋಧರ ಸ್ಮರಣಾರ್ಥ ಸುಂದರ ಸ್ಮಾರಕ ನಿರ್ಮಿಸಲಾಗಿದೆ. ಈಗ ಅದರ ಮುಂಭಾಗದಲ್ಲೇ ಅಂಗಡಿಗಳನ್ನು ಕಟ್ಟಿದರೆ, ಸ್ಮಾರಕವು ಸಾರ್ವಜನಿಕರ ಕಣ್ಣಿಗೆ ಕಾಣದಂತಾಗುತ್ತದೆ. ಇದು ದೇಶ ಕಾಯುವ ಯೋಧರಿಗೆ ಮಾಡುವ ಅವಮಾನ,” ಎಂದು ಖಂಡಿಸಿದ್ದಾರೆ.

ಅವೈಜ್ಞಾನಿಕ ನಿರ್ಧಾರಗಳ ಸರಣಿ: ಈ ಪ್ರದೇಶದಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಈಗಾಗಲೇ ಅಂದಾಜು ಪಟ್ಟಿ ಸಿದ್ಧವಾಗಿದೆ. ಮೇಲ್ಸೇತುವೆ ಬಂದರೆ ಪಾರ್ಕಿಂಗ್ ಸಮಸ್ಯೆಯೂ ಉಲ್ಬಣಿಸಲಿದೆ.

ಇಷ್ಟೆಲ್ಲಾ ಸವಾಲುಗಳಿದ್ದರೂ, ಚರಂಡಿಯ ಮೇಲೆ ಮಳಿಗೆಗಳನ್ನು ನಿರ್ಮಿಸಲು ಟೆಂಡರ್ ಕರೆದಿರುವುದು ನಗರಸಭೆಯ ಮೊಂಡುತನ ಮತ್ತು ಅವೈಜ್ಞಾನಿಕ ನಡೆ ಎಂದು ಅವರು ಟೀಕಿಸಿದ್ದಾರೆ.

ಕಮಿಷನ್ ಆಸೆಗೆ ಸುಸಜ್ಜಿತ ಕಟ್ಟಡಗಳ ಬಲಿ? ಕೇವಲ ಹೊಸ ಕಾಮಗಾರಿಗಳ ಹೆಸರಲ್ಲಿ ಹಣ ಮಾಡಲು ಸುಸ್ಥಿತಿಯಲ್ಲಿದ್ದ ಕಟ್ಟಡಗಳನ್ನು ನೆಲಸಮ ಮಾಡಲಾಗುತ್ತಿದೆ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ.

ಬಾಲಕರ ಕಾಲೇಜು: ಸುಸ್ಥಿತಿಯಲ್ಲಿದ್ದ ಕಟ್ಟಡವನ್ನು ನವೀಕರಿಸುವ ಬದಲು ನೆಲಸಮ ಮಾಡಿ ಹೊಸ ಕಟ್ಟಡದ ನಾಟಕವಾಡಲಾಗುತ್ತಿದೆ.

ಮಹಿಳಾ ಕಾಲೇಜು ಸಭಾಂಗಣ: ಸಿಎಸ್‌ಆರ್ ನಿಧಿಯಡಿ 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಸಭಾಂಗಣವನ್ನೂ ಧ್ವಂಸಗೊಳಿಸಿರುವುದು ಖಂಡನೀಯ. “ಜನರ ತೆರಿಗೆ ಹಣವನ್ನು ಗುತ್ತಿಗೆದಾರರ ಮತ್ತು ಜನಪ್ರತಿನಿಧಿಗಳ ಜೇಬು ತುಂಬಿಸಲು ಬಳಸಲಾಗುತ್ತಿದೆ. ತಕ್ಷಣವೇ ಅಂಬೇಡ್ಕರ್ ಉದ್ಯಾನವನದ ಮುಂದೆ ಮಳಿಗೆ ನಿರ್ಮಿಸುವ ನಿರ್ಧಾರ ಕೈಬಿಡಬೇಕು,” ಎಂದು ಮುನಿಸ್ವಾಮಿ ಆಗ್ರಹಿಸಿದ್ದಾರೆ.

## ಅವೈಜ್ಞಾನಿಕ,ಕಳಪೆ ತಂಗುದಾನಗಳು ನಿರ್ಮಿಸಿದ ವಿರುದ್ಧ ಕ್ರಮ ಜರುಗಿಸಬೇಕು : ಸಾರ್ವಜನಿಕರ ಆಕ್ರೋಶ

ಪಾವಗಡ

ಮಳವಳ್ಳಿಯ ಕರ್ನಾಟಕ ರಾಜ್ಯ ಹೆದ್ದಾರಿ ಪ್ರಾಧಿಕಾರವು ರಸ್ತೆಯು ನಿರ್ಮಿಸುವಾಗ ಅಕ್ರಮ ಅವ್ಯವಹಾರ ಹಣದಾಸೆಗೋಸ್ಕರ ಹೆದ್ದಾರಿ ನಿಯಮಗಳು ಗಾಳಿಗೆ ತೂರಿ ಪ್ರಾಧಿಕಾರದ ಅಧಿಕಾರಿಗಳ ಸ್ವಲಾಭಕ್ಕಾಗಿ ತಂಗುದಾನಗಳು ನಿರ್ಮಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಪಾವಗಡ – ಮಳವಳ್ಳಿ ಹೆದ್ದಾರಿ ರಸ್ತೆಯಲ್ಲಿ ಸುಮಾರು ಮೂವತ್ತು ತಂಗುದಾನಗಳು ನಿರ್ಮಿಸಿದ್ದು, ಅವುಗಳನ್ನು ಪ್ರಾಧಿಕಾರಿ ಅಧಿನಿಯಮಗಳು ಪ್ರಕಾರ ನಿರ್ಮಿಸಿರುವುದಿಲ್ಲ ,ಗ್ರಾಮದ ಪ್ರತಿ ಗೇಟುಗಳಲ್ಲಿ ಕಳಪೆ ತಂಗುದಾನಗಳು ಎದ್ದು ಕಾಣುತ್ತವೆ, ಆಯಾ ಊರಿನ ಗೇಟ್ ಗಳಲ್ಲಿ ಜನರಿಗೆ ಅನುಕೂಲವಾಗುವಂತ ತಂಗುದಾನಗಳು ನಿರ್ಮಿಸಬೇಕಿತ್ತು ಆದರೆ ಆಯಾ ಗ್ರಾಮಗಳ ಜನರಿಗೆ ಸೌಲಭ್ಯಕ್ಕೆ ಸಿಗದ ರೀತಿಯಲ್ಲಿ ನಿರ್ಮಿಸಿ ಜನರ ಹಕ್ಕುಗಳನ್ನು ಕಸಿದು ಅಪರಾಧ ವೆಸಗಿರುತ್ತಾರೆ ಎಂದು ಮೇಲ್ನೋಟಕ್ಕೆ ಕಾಣಲಾಗುತ್ತದೆ.

ಕಳೆದ 10–12ವರ್ಷಗಳ ಹಿಂದೆ ಕರ್ನಾಟಕ ಸರ್ಕಾರವು ಪಾವಗಡ ಮಳವಳ್ಳಿ ರಾಜ್ಯ ಹೆದ್ದಾರಿ ರಸ್ತೆಯನ್ನು ಸುಮಾರು ರೂ ಸಾವಿರಾರು ಕೋಟಿ ಟೆಂಡರ್ ಕರೆದು ರಾಜ್ಯದ ಹಲವು ಪ್ರಾಂತ್ಯಗಳ ಜನರ ದೂರದ ಪ್ರಯಾಣವು ಸುಗಮವಾಗಿ ಸಾಗಲು , ಸಾಮಾಗ್ರಿಗಳ ರಫ್ತು,ಆಮದು,ಸುಲಭ ರೀತಿಯಾಗಲು, ಇಂತಹ ಬೃಹತ್ ರಸ್ತೆ ಕಾಮಗಾರಿಗಳು ಅಳುವ ಸರ್ಕಾರಗಳು ಹಮ್ಮಿಕೊಳ್ಳುವುದು ಉತ್ತಮ ಯೋಜನೆಗಳಾಗಿದ್ದು, ಆದರೆ ಪಾವಗಡ ಪಟ್ಟಣದಲ್ಲಿ ಮಾತ್ರ ಗುಜರಿ ಅಂಗಡಿ ತರಹದ ರೀತಿಯಲ್ಲಿ ಬಳಕೆ ಮಾಡಿಕೊಳ್ಳುತ್ತಿದ್ದರು ಕೆಶಿಪ್ ಜಿಲ್ಲಾ ಅಧಿಕಾರಿಗಳು ಮೌನ ವಹಿಸಿರುವುದು ನಿರ್ಲಕ್ಷ ಆಡಳಿತದ ಕನ್ನಡಿಯಾಗಿದೆ.

ತುಮುಕೂರು ಜಿಲ್ಲೆಯ ಕೆಶಿಪ್ ಅಧಿಕಾರಿಗಳು ರಸ್ತೆ ನಿರ್ಮಿಸುವವ ವೇಳೆ ಗುತ್ತಿಗೆದಾರನಿಂದ ಕೈಚಳಕ ನಡಿಸಿ ರಸ್ತೆ ಮತ್ತು ತಂಗುದಾನಗಳು ನಿಯಮಬಾಹಿರ,ಕಳಪೆ ಮಾಡಿ ಕೋಟ್ಯಂತರ ರೂ ಅವ್ಯವಹಾರ ನೆಡಿಸಿದ್ದಾರೆ ಎಂದು ನಿರ್ಮಿಸಿದ ಕಟ್ಟಡಗಳೇ ಉತ್ತರಿಸುತ್ತವೆ.

ಆಂಧ್ರ ಗಡಿ ನಾಗಲಾಪುರ ಗೇಟಿನ ಕೆಶಿಪ್ 2 ನೇ ಯೋಜನೆಯ ಪ್ರಯಾಣಿಕರ ತಂಗುದಾನವು ಖಾಸಗೀ ರೈತನ ಜಮೀನಿನಲ್ಲಿ ನಿರ್ಮಾಣ ಮಾಡಿದ್ದು ರೈತನು ಪರಿಹಾರ ಕೊಡದೆ , ನಿರ್ಮಿಸುವ ವೇಳೆ ಅಧಿಕಾರಿಗಳು ನಷ್ಟ ಪರಿಹಾರ ಕಲ್ಪಿಸುತ್ತೇವೆ ಎಂದು ಹೇಳಿದ್ದು, ನಿರ್ಮಿಸಿ 12 ವರ್ಷಗಳಾದರೂ ಕೆಶಿಪ್ 2ನೇ ಯೋಜನೆ ಅಧಿಕಾರಿಗಳು ಪರಿಹಾರ ಕೂಡಲಿಲ್ಲ,ಯಾರ ಬಳಿ ಹೋಗಿ ಕೇಳ್ಬೇಕೊ ಅರ್ಥವಾಗುತ್ತಿಲ್ಲ, ತಂಗುದಾನ ಯಾವೊಬ್ಬ ಪ್ರಯಾಣಿಕನಿಗೂ ಅನುಕೂಲವಾಗದ ರೀತಿಯಲ್ಲಿ ನಿರ್ಮಾಣ ಮಾಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ನಾಗಲಾಪುರ ಗೇಟಿಗೂ ಚಿಕ್ಕಹಳ್ಳಿ ದಿನ್ನೆಯ ತಂಗುದಾನಗಳಿಗೂ ಬಹಳ ಹತ್ತಿರವಿದ್ದು ಇವೆರಡು ಅವೈಜ್ಞಾನಿಕವಾಗಿ ನಿರ್ಮಿಸಿರುತ್ತಾರೆ,ಇಲ್ಲಿ ಎರಡು ತಂಗುದಾನಗಳು ನಿರ್ಮಿಸುವ ಅಗತ್ಯವೇ ಇಲ್ಲ,ಇಂತ ಯೋಜನೆಗಳು ರೂಪಿಸುವ ಇಂಜನಿಯರ್ ಗಳನ್ನು ಪ್ರಥಮವಾಗಿ ಅಮಾನತ್ತುಗೊಳಿಸಿ ಕ್ರಮ ಜರುಗಿಸಬೇಕಾಗಿದೆ.

ವಸತಿ ಶಾಲಾ ಶಿಕ್ಷಣ ಕ್ಷೇತ್ರವಾದ ದೊಡ್ಡಹಳ್ಳಿಯಲ್ಲಿ ಕೆಶಿಪ್ ರವರ ತಂಗುದಾನವನ್ನು ಸರ್ಕಾರಿ ಪೌಡಶಾಲೆಯವರು ಅಕ್ರಮವಾಗಿ ಒತ್ತುವರಿ ಮಾಡಿ ತಂಗುದಾನವನ್ನು ಶಾಲಾ ಅವರಣದೊಳಗೆ ಕಲೆಹಾಕಿ ಏಕಾ ಏಕಿ ಆವರಣ ಗೋಡೆಯನ್ನು ನಿರ್ಮಿಸಿದರು ಜಿಲ್ಲೆಯ ಕೆಶಿಪ್ ಅಧಿಕಾರಿಗಳು ಮಾತ್ರ ಮೌನಕ್ಕೆ ಜಾರಿರುವುದು ದುರ್ದೈವ ಸಂಗತಿ ಒಂದು ಕಡೆಯಾದರೆ,ಚಿಕ್ಕಹಳ್ಳಿ ಗ್ರಾಮದ ಗೇಟಿನ ಕಳಪೆ ಕಾಮಗಾರಿಯಿಂದ ತಂಗುದಾನ ಅಡಿಪಾಯ ಕುಸುದು ಮತ್ತು ಮತ್ತೊಂದು ಹಳ್ಳದಲ್ಲಿ ನಿರ್ಮಿಸಿ ಸರ್ಕಾರ ಹಣಕ್ಕೆ ಬೆಲೆಯೇ ಇಲ್ಲದಂತೆ ತಿಳಿಯಲಾಗುತ್ತದೆ.

ಪ್ರಮುಖ ಬಳ್ಳಾರಿ ಹೆದ್ದಾರಿ ರಸ್ತೆಯ ಗಂಗಸಾಗರ ಗೇಟ್ ನಲ್ಲಿ ,ಕೆಶಿಪ್ ರಸ್ತೆಗಿಂತ ಸರಿ ಸುಮಾರು 4–5ಅಡಿ ಎತ್ತರದಲ್ಲಿ ತಂಗುದಾನ ನಿರ್ಮಿಸಿರುವುದು ಅವೈಜ್ಞಾನಿಕ ಕಾಮಗಾರಿಯಾಗಿರುತ್ತದೆ ಎಂದು ಸಾರ್ವಜನಿಕರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ.ಹಾಗೆಯೇ ಸೂಲನಾಯಕನಹಳ್ಳಿ ಗೇಟ್ ಬಳಿ ಜಮೀನಿನ ಹಳ್ಳದಲ್ಲಿ ತಂಗುದಾನ ಜನರ ಪ್ರಯೋಜನೆಗೆ ಬಾರದಂತೆ ನಿರ್ಮಿಸಿದ್ದು,ಸರ್ಕಾರದ ಮತ್ತು ಜನರ ತೆರಿಗೆ ಹಣ ಸಾಕಷ್ಟು ದುರುಪಯೋಗವಾಗಿರುವುದು, ಯೋಜನೆಯ ಬಳ್ಳಾರಿ ರಸ್ತೆಯಲ್ಲಿ ಸುಮಾರು 30 ತಂಗುದಾನಗಳು ಅವೈಜ್ಞಾನಿಕ ಕಳಪೆ ಕಾಮಗಾರಿಯಿಂದ ನಿರ್ಮಿಸಿದ ಎಲ್ಲಾ ಕೆಶಿಪ್ ಅಧಿಕಾರಿಗಳ ಮೇಲು ಕ್ರಮ ಜರುಗಿಸಿ ತಪ್ಪಿತಸ್ಥರಿಂದ ಹಣ ಹಿಂಪಡೆಯಬೇಕು ಎಂದು ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿದೆ.

## 14ಕ್ಕೆ ಶಿವ ಸಹಕಾರ ಸಂಘದ ಕಟ್ಟಡ ಲೋಕಾರ್ಪಣೆ

ತಿಪಟೂರು

ನಗರದ ಕೆ.ಆರ್. ಬಡಾವಣೆ, ಗೋವಿನಪುರ ಸರ್ಕಲ್ ಹಾಗೂ ಹಾಲ್ಕುರಿಕೆ ರಸ್ತೆಯಲ್ಲಿ ನಿರ್ಮಾಣ ಗೊಂಡಿರುವ ಪ್ರತಿಷ್ಠಿತ ‘ಶಿವ ವಿವಿಧೋದ್ದೇಶ ಸಹಕಾರ ಸಂಘ’ದ ನೂತನ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭವು ಇದೇ 14ರ ಶನಿವಾರ ಮಧ್ಯಾಹ್ನ 3.30ಕ್ಕೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಆರ್.ಬಿ. ಆನಂದಮೂರ್ತಿ ತಿಳಿಸಿದ್ದಾರೆ.

ಈ ಸಮಾರಂಭದ ಹಿರಿಯ ಆಕರ್ಷಣೆಯಾಗಿ ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶರಾದ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ನೂತನ ಕಟ್ಟಡದ ಮುಂಭಾಗದಲ್ಲೇ ಭವ್ಯ ವೇದಿಕೆ ಸಜ್ಜಾಗುತ್ತಿದ್ದು, ಶ್ರೀಗಳ ಆಗಮನಕ್ಕೆ ಭಕ್ತಾದಿಗಳು ಹಾಗೂ ಸಂಘದ ಸದಸ್ಯರು ಕಾತರರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಆರ್.ಬಿ. ಆನಂದಮೂರ್ತಿ ಅವರು ಅಧ್ಯಕ್ಷತೆ ವಹಿಸಲಿದ್ದು, ಸಾಧು ವೀರಶೈವ ಸಮಾಜದ ಅಧ್ಯಕ್ಷರಾದ ಪಿ.ಬಿ. ನಂಜಪ್ಪ ಸೇರಿದಂತೆ ಸಹಕಾರಿ ಹಾಗೂ ಧಾರ್ಮಿಕ ಕ್ಷೇತ್ರದ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಂಘದ ತಿಳಿಸಲಾಗಿದೆ.

## ಅಂತರಿಕ್ಷಕ್ಕೆ ಏರಿದರೂ ನಿಲ್ಲದ ದೌರ್ಜನ್ಯ: ಮಹಿಳಾ ದಿನಾಚರಣೆಯಲ್ಲಿ ಕಳಕಳಿ

ವಿಜಯಪುರ

ಮಹಿಳೆಯರು ಜೀವನದ ಎಲ್ಲಾ ರಂಗಗಳಲ್ಲೂ ಸಾಧಕರಾಗಲು ಲಭ್ಯವಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಪ್ರಗತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಎನ್. ನಾಗರಾಜ್ ತಿಳಿಸಿದರು.



ಪಟ್ಟಣದ ಪ್ರಗತಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ‘ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ’ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಸಮಾಜದ ಏಳಿಗೆಗೆ ಮಹಿಳೆಯರ ಕೊಡುಗೆ ಅನನ್ಯ: ಮಹಿಳೆಯರು ಸಮಾಜದ ಏಳಿಗೆಗಾಗಿ ನೀಡಿರುವ ಕೊಡುಗೆಯನ್ನು ಯಾರೂ ಮರೆಯಬಾರದು. ಸಮಾಜ ಕಟ್ಟುವ ನಿಟ್ಟಿನಲ್ಲಿ ಮಹಿಳಾ ಸಾಧಕರು ತೋರಿದ ಅಪ್ರತಿಮ ಸೇವೆಯನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಮತ್ತು ಅವರ ಸಾಧನೆಗಳನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು ಎಂದು ಪ್ರಾಂಶುಪಾಲರು ಕಿವಿಮಾತು ಹೇಳಿದರು.

ಭೂಮಿಯಿಂದ ಅಂತರಿಕ್ಷದವರೆಗೆ ಸಾಧನೆ: ಉಪನ್ಯಾಸಕ ಶಾಂತಪ್ರಕಾಶ್ ಅವರು ಮಾತನಾಡಿ, “ಮಹಿಳೆಯರು ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಇಂದು ಮಹಿಳೆ ಭೂಮಿಯಿಂದ ಅಂತರಿಕ್ಷದವರೆಗೂ ತನ್ನ ಸಾಧನೆಯ ಛಾಪು ಮೂಡಿಸಿದ್ದಾಳೆ. ಆದರೂ ಇಂದಿಗೂ ಅವರ ಮೇಲೆ ದೌರ್ಜನ್ಯಗಳು ನಡೆಯುತ್ತಿರುವುದು ವಿಷಾದನೀಯ. ಸಮಾಜವು ಮಹಿಳೆಯರ ತ್ಯಾಗ ಮತ್ತು ಪರಿಶ್ರಮವನ್ನು ಗೌರವಿಸಬೇಕು,” ಎಂದರು.

ಕ್ರೀಡಾ ಸಂಭ್ರಮ ಮತ್ತು ಸನ್ಮಾನ: ದಿನಾಚರಣೆಯ ಅಂಗವಾಗಿ ಮಹಿಳಾ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗಾಗಿ ವಿಶೇಷ ಕ್ರೀಡಾಕೂಟಗಳನ್ನು ಆಯೋಜಿಸಲಾಗಿತ್ತು. ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಮಹಿಳಾ ಸಾಧಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಆರ್. ಶೆಟ್ಟಿನಾಯಕ್, ಪ್ರವೀಣ್ ಕುಮಾರ್, ಶಿವಕುಮಾರ್, ಮುರಳೀಧರ್ ಹಾಗೂ ಉಪನ್ಯಾಸಕಿಯರಾದ ಚೈತ್ರಾ, ಮಂಜುಳಾ, ಸುಧಾ, ಸುನಂದ ಮತ್ತಿತರರು ಉಪಸ್ಥಿತರಿದ್ದರು.

## ಸ್ಕೌಟ್ಸ್, ಗೈಡ್ಸ್ ಶಿಬಿರಕ್ಕೆ ಪಿಜಿಆರ್ ಸಿಂಧಿಯಾ ಭೇಟಿ

ದೊಡ್ಡಬಳ್ಳಾಪುರ

ಸಮಾಜದಲ್ಲಿ ಸಂಭವಿಸುವ ವಿಪತ್ತುಗಳನ್ನು ಎದುರಿಸುವಲ್ಲಿ ಮಹಿಳೆಯರ ಪಾತ್ರ ಮತ್ತು ಧೈರ್ಯ ಅತ್ಯಂತ ಶ್ಲಾಘನೀಯ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್. ಸಿಂಧಿಯಾ ಬಣ್ಣಿಸಿದರು.

ನಗರದ ಡಾ. ಆನಿ ಬೆಸಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ ಮಾರ್ಚ್ 4 ರಿಂದ 10ರವರೆಗೆ ಹಮ್ಮಿಕೊಳ್ಳಲಾಗಿದ್ದ ‘ಯುವ ಆಪದ್ಮಿತ್ರ’ ವಿಪತ್ತು ನಿರ್ವಹಣಾ ತರಬೇತಿ ಶಿಬಿರಕ್ಕೆ ಭೇಟಿ ನೀಡಿದ ಅವರು, ಇದೇ 8 ರಂದು ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಿಳಾ ಸ್ವಯಂಸೇವಕರಿಗೆ ಶುಭ ಹಾರೈಸಿದರು.

ರಾಷ್ಟ್ರೀಯ ಜಾಂಬೂರಿಯಲ್ಲಿ ಕರ್ನಾಟಕದ ಕೀರ್ತಿ: ಇತ್ತೀಚೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದ ರಾಷ್ಟ್ರೀಯ ಜಾಂಬೂರಿ ಕಾರ್ಯಕ್ರಮದ ಯಶಸ್ಸನ್ನು ಸ್ಮರಿಸಿದ ಸಿಂಧಿಯಾ ಅವರು, “ನಮ್ಮ ರಾಜ್ಯದಿಂದ 800 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಮತ್ತು 50ಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ನಡೆದ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ನಮ್ಮ ಮಕ್ಕಳು ಅತ್ಯುತ್ತಮ ಸಾಧನೆ ತೋರಿ ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ,” ಎಂದು ಹೆಮ್ಮೆಯಿಂದ ತಿಳಿಸಿದರು.

ಯುವ ಆಪದ್ಮಿತ್ರರಿಗೆ ತರಬೇತಿ: ಬೆಂಗಳೂರಿನ ಆನಿ ಬೆಸಂಟ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಈ ಶಿಬಿರದಲ್ಲಿ ವಿಪತ್ತು ನಿರ್ವಹಣೆಯ ಬಗ್ಗೆ ಯುವಕ– ಯುವತಿಯರಿಗೆ ತಾಂತ್ರಿಕ ತರಬೇತಿ ನೀಡಲಾಗುತ್ತಿದೆ. ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಮಹಿಳಾ ಶಿಬಿರಾರ್ಥಿಗಳ ಉತ್ಸಾಹವನ್ನು ಕಂಡು ರಾಜ್ಯ ಮುಖ್ಯ ಆಯುಕ್ತರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಎಲ್‌ಒಸಿ ಲತಾ ಬಿ.ವಿ., ರಾಜ್ಯ ಕಾರ್ಯಕ್ರಮ ಸಹಾಯಕಿ ಚಲ್ಲಯ್ಯ, ಶಿಬಿರ ಕೇಂದ್ರ ಸಂಯೋಜಕ ನಾಗರಾಜ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ರಾಯಚೂರು ಜಿಲ್ಲಾ ನಿರ್ದೇಶಕ (ಮೈ ಭಾರತ) ಸಂತೋಷ್ ಸೇರಿದಂತೆ ಹಲವಾರು ಗಣ್ಯರು ಹಾಗೂ ನೂರಾರು ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



## ಮಾಸ್ತಿ ನಾಡಿನ ಪ್ರತಿಭೆಗೆ ಯುಪಿಎಸ್‌ಸಿ ಗರಿ



ಮಾಲೂರು

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಜನ್ಮಭೂಮಿಯಾದ ಮಾಲೂರು ತಾಲ್ಲೂಕಿನ ಪ್ರತಿಭೆಯೊಂದು ರಾಷ್ಟ್ರಮಟ್ಟದಲ್ಲಿ ಮಿನುಗಿದೆ. ತಾಲ್ಲೂಕಿನ ಕೊಂಡಶೆಟ್ಟಹಳ್ಳಿ ಗ್ರಾಮದ ಯುವಕ ತೌಸಿಫ್ ಉಲ್ಲಾಖಾನ್ ಕೇಂದ್ರ ಲೋಕಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿ 741ನೇ ರ್‍ಯಾಂಕ್ ಪಡೆಯುವ ಮೂಲಕ ತಾಲ್ಲೂಕು ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕೊಂಡಶೆಟ್ಟಹಳ್ಳಿಯ ಸನಾವುಲ್ಲಾಖಾನ್ ಮತ್ತು ಮೊಸಿನಾಬೇಗಂ ದಂಪತಿಯ ಜೇಷ್ಠ ಪುತ್ರರಾದ ತೌಸಿಫ್, ಬಾಲ್ಯದಿಂದಲೇ ಓದಿನಲ್ಲಿ ಅತೀವ ಆಸಕ್ತಿ ಹೊಂದಿದ್ದರು. ಮಾಲೂರಿನ ವಿವೇಕಾನಂದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಕೋಲಾರದ ಮಹಿಳಾ ಸಮಾಜ ಕಾಲೇಜಿನಲ್ಲಿ ಪಿಯುಸಿ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪೂರೈಸಿದ್ದರು. ಶೈಕ್ಷಣಿಕ ಹಂತದ ಪ್ರತಿ ಹಂತದಲ್ಲೂ ಅವರು ಸಾಧನೆಯ ಛಾಪು ಮೂಡಿಸಿದ್ದರು. ಕೊಂಡಶೆಟ್ಟಹಳ್ಳಿಯ ಸನಾವುಲ್ಲಾಖಾನ್ ಮತ್ತು ಮೊಸಿನಾಬೇಗಂ ದಂಪತಿಯ ಜೇಷ್ಠ ಪುತ್ರರಾದ ತೌಸಿಫ್, ಬಾಲ್ಯದಿಂದಲೇ ಓದಿನಲ್ಲಿ ಅತೀವ ಆಸಕ್ತಿ ಹೊಂದಿದ್ದರು. ಮಾಲೂರಿನ ವಿವೇಕಾನಂದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಕೋಲಾರದ ಮಹಿಳಾ ಸಮಾಜ ಕಾಲೇಜಿನಲ್ಲಿ ಪಿಯುಸಿ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪೂರೈಸಿದ್ದರು. ಶೈಕ್ಷಣಿಕ ಹಂತದ ಪ್ರತಿ ಹಂತದಲ್ಲೂ ಅವರು ಸಾಧನೆಯ ಛಾಪು ಮೂಡಿಸಿದ್ದರು.

ಕುಟುಂಬದ ಬೆಂಬಲ – ಸಾಧನೆಯ ಮೂಲ: ಆರ್ಥಿಕ ಸವಾಲುಗಳ ನಡುವೆಯೂ ಮಗನ ಶಿಕ್ಷಣಕ್ಕೆ ಕಿಂಚಿತ್ತೂ ತೊಂದರೆಯಾಗದಂತೆ ಪೋಷಕರು ನೀಡಿದ ಬೆಂಬಲ ಇಂದು ಈ ದೊಡ್ಡ ಯಶಸ್ಸಿಗೆ ಕಾರಣವಾಗಿದೆ. ತೌಸಿಫ್ ಅವರ ಕುಟುಂಬದ ಇತರ ಮಕ್ಕಳೂ ಶಿಕ್ಷಣದಲ್ಲಿ ಹಿನ್ನಡೆ ಸಾಧಿಸಿಲ್ಲ; ಎರಡನೇ ಪುತ್ರ ಇಂಜಿನಿಯರ್ ಆಗಿದ್ದರೆ, ಮೂರನೇ ಪುತ್ರ ಎಂಬಿಬಿಎಸ್ ಪದವಿ ಮುಗಿಸಿ ವೈದ್ಯಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಸದ್ಯ ಈ ಕುಟುಂಬ ಬಂಗಾರಪೇಟೆಯಲ್ಲಿ ನೆಲೆಸಿದ್ದು, ಮಕ್ಕಳ ಸಾಧನೆಯಿಂದ ಇಡೀ ಕುಟುಂಬದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ತೌಸಿಫ್ ಅವರ ಈ ಸಾಧನೆಗೆ ಗ್ರಾಮಸ್ಥರು, ಶಿಕ್ಷಕರು ಹಾಗೂ ಗಣ್ಯರು ಅಭಿನಂದನೆಗಳ ಮಹಾಪೂರವನ್ನೇ ಹರಿಸುತ್ತಿದ್ದಾರೆ.

## ಬಾಲ್ಯ ವಿವಾಹ ಪದ್ಧತಿ ನಿಷೇಧವಾಗಬೇಕು: ಹುಲ್ಲೇಶ್ ಸಿಂದೋಗಿ

ಕೊಪ್ಪಳ

ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್ ಸಂಸ್ಥೆಯವರು ಹಲವಾರು ಕಾರ್ಯಕ್ರಮಳನ್ನು ಆಯೋಜಿಸುವ ಮೂಲಕ ಮಕ್ಕಳಲ್ಲಿ ಓದುವ ಹವ್ಯಾಸ ಮೂಡಿಸುತ್ತಿದ್ದಾರೆ. ಜೊತೆಗೆ ಬಾಲ್ಯ ವಿವಾಹ ಪದ್ಧತಿ ನಿಷೇಧವಾಗಬೇಕೆಂದು ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಶಾಲೆ ಬಿಟ್ಟ ಮಕ್ಕಳನ್ನು ಶಾಲೆ ಸೇರಿಸುವ ಯೋಜನೆ ಹಮ್ಮಿಕೊಂಡಿದ್ದು ನಿಜಕ್ಕೂ ಸ್ತುತ್ಯವೆಂದು ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಹುಲ್ಲೇಶ್ ಸಿಂದೋಗಿ ಹೇಳಿದರು.

ಜಿಲ್ಲೆಯ ಶಹಪುರ ಗ್ರಾಮದ ಕನಕ ಭವನದಲ್ಲಿ ‘ರಂಗ ಕಲಾ ಚೇತನ’ ತಂಡದಿಂದ ಹಮ್ಮಿಕೊಂಡಿದ್ದ ಸಮುದಾಯ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ರಂಗ ಕಲಾ ಚೇತನ ತಂಡದವರು ಈ ಉತ್ತಮ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದ್ದು ಶ್ಲಾಘನೀಯ ಎಂದರು.

ಹುಲಿಗೆಮ್ಮ ಕಟ್ಟಿಮನಿ ಅವರು ಮಾತನಾಡಿ, ತಾಲೂಕಿನ ಆಯ್ದ ಶಾಲೆಗಳಲ್ಲಿ ಗ್ರಂಥಾಲಯ ಕೊಠಡಿ ನಿರ್ಮಿಸಿ, ಮಕ್ಕಳಿಗೆ ಕಲಿಕಾ ಸಾಮಗ್ರಿಗಳ ಜೊತೆಗೆ ಪ್ರೇರಕರನ್ನು ನೀಡಿ ಕಲಿಕಾಸಕ್ತಿ ಮೂಡಿಸಲು ಕಲಿಕಾ ಸಂಸ್ಥೆ ಶ್ರಮಿಸುತ್ತಿದೆ. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಅರಿವು ಮೂಡಿಸುತ್ತಾ ಉತ್ತಮ ಸಮಾಜ ನಿರ್ಮಿಸಲು ಮುಂದಾಗಿದ್ದಾರೆ ಎಂದರು.



ಕಲಿಕೆ ಟಾಟಾ ಟ್ರಸ್ಟ್ ನ ಸಂಯೋಜಕ ಆಂಜನೇಯ ಮಾತನಾಡಿ, ಕಲಿಕಾ ಸಂಸ್ಥೆಯು ಸಮುದಾಯ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಮತ್ತು ನಾಗರಿಕರಲ್ಲಿ ಜಾಗೃತಿ ಮೂಡಿಸುತ್ತಿದೆ ಎಂದು ತಮ್ಮ ಯೋಜನೆಗಳನ್ನು ಹಂಚಿಕೊಂಡರು.

ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಿಕೆ ಟಾಟಾ ಟ್ರಸ್ಟ್ ಸಹಭಾಗಿತ್ವದಲ್ಲಿ “ರಂಗ ಕಲಾ ಚೇತನ ತಂಡದಿಂದ” ಸಮುದಾಯ ಜಾಗೃತಿ ಕಾರ್ಯಕ್ರಮ ಜರುಗಿತು.

ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಸುಧಾರಣಾ ಸಮಿತಿ ಉಪಾಧ್ಯಕ್ಷೆ ರೇವತಿ ಗೋನಾಳ್, ಸರ್ವ–ಸದಸ್ಯರು, ಶಾಲೆಯ ಸಿಬ್ಬಂದಿಯವರು, ಗ್ರಾಮ ಪಂಚಾಯತ್ ಸರ್ವಸದಸ್ಯರು, ಆಶಾ ಕಾರ್ಯಕರ್ತೆಯರು, ಮಹಿಳಾ ಸ್ವ–ಸಹಾಯ ಸಂಘದವರು, ವಿವಿಧ ಸಂಘಟನೆಯ ಪದಾಧಿಕಾರಿಗಳು, ಪ್ರೇರಕರು, ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಪೋಷಕರು, ಗುರುಹಿರಿಯರು ಭಾಗವಹಿಸಿದ್ದರು.

ಶಾಲಾ ಮುಖ್ಯೋಪಾಧ್ಯಾಯ ದೇವರಾಜ್ ಅವರು ಹಲಗೆ ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮದ ಗಣ್ಯ ಮಾನ್ಯರು ಇದ್ದರು.

# ಪಾರ್ಕ್ ಅಂದ್ರೆ ಬರೀ ಆಟವಲ್ಲ, ಇನ್ಮುಂದೆ ವಿಜ್ಞಾನದ ಪಾಠ!

ಬೆಂಗಳೂರು

ಉದ್ಯಾನನಗರಿಯ ಉದ್ಯಾನವನಗಳು ಅಂದರೆ ಕೇವಲ ವಾಯುವಿಹಾರ ಮತ್ತು ಮಕ್ಕಳಾಟಕ್ಕೆ ಸೀಮಿತ ಎಂಬ ಭಾವನೆ ಇನ್ಮುಂದೆ ಬದಲಾಗಲಿದೆ. ಜೆ.ಪಿ. ನಗರದ 2ನೇ ಹಂತದ ಧನ್ವಂತರಿ ಉದ್ಯಾನವನವು ಈಗ ಜ್ಞಾನದ ಭಂಡಾರವಾಗಿ ರೂಪಾಂತರಗೊಳ್ಳುತ್ತಿದ್ದು, 'ಪರಮ್ ಸೈನ್ಸ್ ಸಿಟಿ' ಉದ್ಘಾಟನೆಗೆ ಸಜ್ಜಾಗಿದೆ.

**ವಿಜ್ಞಾನ ಮತ್ತು ಪ್ರಕೃತಿಯ ಅಪೂರ್ವ ಸಂಗಮ:** ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಪರಮ್ ಫೌಂಡೇಶನ್ ನಡುವಿನ ಒಪ್ಪಂದದ ಫಲವಾಗಿ ಈ ಮಹತ್ವಾಕಾಂಕ್ಷಿ ಯೋಜನೆ ಜಾರಿಗೆ ಬರುತ್ತಿದೆ. ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗಿದ್ದ ವಿಜ್ಞಾನದ ಸಂಕೀರ್ಣ ಪ್ರಯೋಗಗಳನ್ನು ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಹತ್ತಿರವಾಗಿಸುವುದು ಈ ಯೋಜನೆಯ ಮೂಲ ಉದ್ದೇಶ. ಹಸಿರಿನ ನಡುವೆ ವಿಜ್ಞಾನದ ರಹಸ್ಯಗಳನ್ನು ಬಿಚ್ಚಿಡುವ ಈ ತಾಣವು ಕಲಿಕೆಯ ಶೈಲಿಗೆ ಹೊಸ ಆಯಾಮ ನೀಡಲಿದೆ.

**ಉದ್ಯಾನವನದ ಪ್ರಮುಖ ಆಕರ್ಷಣೆಗಳು:**



**ಕ್ವಾಂಟಮ್ ಆಸ್ಟ್ರೋನಾಟ್:** ಕ್ವಾಂಟಮ್ ವಿಜ್ಞಾನದ ಕ್ಲಿಷ್ಟತೆಯನ್ನು ಸರಳವಾಗಿ ವಿವರಿಸುವ ವಿಶಿಷ್ಟ ಶಿಲ್ಪ ನೋಡುಗರನ್ನು ಸೆಳೆಯಲಿದೆ.

**ಕಲಾತ್ಮಕ ಪ್ರದರ್ಶಿಕೆಗಳು:** ಗಣಿತ, ಭೌತಶಾಸ್ತ್ರ ಹಾಗೂ ಪರಿಸರ ಪ್ರಜ್ಞೆಯನ್ನು ಬಿಂಬಿಸುವ ನಾಲ್ಕು ಅದ್ಭುತ ಕಲಾಕೃತಿಗಳು ಮತ್ತು ಒಂದು ಬೃಹತ್ ಗೋಡೆ ವಿಜ್ಞಾನದ ಸೌಂದರ್ಯವನ್ನು ಸಾರಲಿವೆ.

**ಐ ಲವ್ ಸೈನ್ಸ್:** ವಿಜ್ಞಾನ ಪ್ರೇಮಿಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಈ ಬೋರ್ಡ್, ಸೈನ್ಸ್ ಸಿಟಿಯ ಪ್ರಮುಖ 'ಸೆಲ್ಫಿ ಪಾಯಿಂಟ್' ಆಗಿ ಗಮನ ಸೆಳೆಯಲಿದೆ.

**ಉದ್ಘಾಟನೆಗೆ ಕ್ಷಣಗಣನೆ:**

ಧನ್ವಂತರಿ ಉದ್ಯಾನವನದಲ್ಲಿ ಸದ್ಯ ಕಾಮಗಾರಿಗಳು ಅಂತಿಮ ಹಂತ ತಲುಪಿದ್ದು, ಇನ್ನು ಕೆಲವೇ ದಿನಗಳಲ್ಲಿ ಈ ವಿಜ್ಞಾನ ಉದ್ಯಾನವನ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿದೆ. ನಗರದ ಗಿಜಿಗುಟ್ಟುವ ವಾತಾವರಣದ ನಡುವೆ ಶಾಂತಿಯುತವಾಗಿ ವಿಜ್ಞಾನವನ್ನು ಅನ್ವೇಷಿಸಲು ಇದು ಅತ್ಯುತ್ತಮ ತಾಣವಾಗಲಿದೆ.

## ಏನಿದು 'ಪರಮ್ ಸೈನ್ಸ್ ಸಿಟಿ'?

ಇದು ಸಾರ್ವಜನಿಕ ಉದ್ಯಾನವನವನ್ನು ಸುಸ್ಥಿರ ಕಲಿಕಾ ಕೇಂದ್ರವನ್ನಾಗಿ ಮಾಡುವ ವಿಶಿಷ್ಟ ಪ್ರಯತ್ನ. ಸರಕಾರದ ಆಸ್ತಿಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಿ, ಅದರ ನಿರ್ವಹಣೆಯನ್ನು ಪರಮ್ ಫೌಂಡೇಶನ್ ವಹಿಸಿಕೊಳ್ಳುವ ಮೂಲಕ ನಾಗರಿಕರಿಗೆ ಉಚಿತವಾಗಿ ಅಥವಾ ಸುಲಭವಾಗಿ ವಿಜ್ಞಾನದ ಅರಿವು ಮೂಡಿಸುವ ಯೋಜನೆಯಾಗಿದೆ.





# 31ರಂದು ಕನ್ನಡ ಜಾಗೃತಿ ಸಮಾಲೋಚನಾ ಸಭೆ

ದೊಡ್ಡಬಳ್ಳಾಪುರ

ಸರ್ಕಾರದ ಭಾಷಾ ನೀತಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಹಾಗೂ ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೆ ತರಲು ಅಧಿಕಾರಿಗಳು ಮತ್ತು ಸಾರ್ವಜನಿಕರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಹಶೀಲ್ದಾರ್ ಡಾ. ಮಲ್ಲಪ್ಪ ಕೆ. ಯರಗೋಳ ತಿಳಿಸಿದರು.

ತಾಲೂಕು ಕಚೇರಿಯಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಜಾಗೃತಿ ಸಮಿತಿ' ಸದಸ್ಯರು ಹಾಗೂ ಕನ್ನಡ ಪರ ಸಂಘಟನೆಗಳ ಪೂರ್ವಭಾವಿ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.



**ಮಾರ್ಚ್ 31ರಂದು ಬೃಹತ್ ಸಭೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶಯದಂತೆ ದೊಡ್ಡಬಳ್ಳಾಪುರ ತಾಲೂಕಿನ ಎಲ್ಲಾ ಸರ್ಕಾರಿ ಇಲಾಖೆಗಳು, ಕೈಗಾರಿಕೋದ್ಯಮಿಗಳು ಮತ್ತು ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿ ಮಾರ್ಚ್ 31ರ ಮಂಗಳವಾರ ನಗರದ ಕನ್ನಡ ಜಾಗೃತ ಪರಿಷತ್ತಿನಲ್ಲಿ ಬೃಹತ್ "ಕನ್ನಡ ಜಾಗೃತಿ ಸಭೆ" ಹಮ್ಮಿಕೊಳ್ಳಲಾಗಿದೆ. ಈ ಸಭೆಯಲ್ಲಿ ತಾಲೂಕಿನ ಎಲ್ಲಾ ಅಧಿಕಾರಿಗಳು ಹಾಗೂ ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಬೇಕು ಎಂದು ತಹಶೀಲ್ದಾರ್ ಕರೆ ನೀಡಿದರು.

**ಕಾರ್ಯಕ್ರಮ ಯಶಸ್ಸಿಗೆ ಉಪಸಮಿತಿ ರಚನೆ:** ಸಭೆಯಲ್ಲಿ ಭಾಗವಹಿಸಿದ್ದ ಕನ್ನಡ ಪಕ್ಷದ ಸಂಜೀವ ನಾಯಕ ಅವರ ಸಲಹೆಯಂತೆ, ಕಾರ್ಯಕ್ರಮದ ವ್ಯವಸ್ಥಿತ ನಿರ್ವಹಣೆಗಾಗಿ ತಹಶೀಲ್ದಾರ್ ನೇತೃತ್ವದಲ್ಲಿ ವಿಶೇಷ ಉಪಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಬಿಇಒ, ಇಒ, ನಗರಸಭೆ ಆಯುಕ್ತರು, ಪೊಲೀಸ್ ಅಧಿಕಾರಿಗಳು ಹಾಗೂ ವಿವಿಧ ಕನ್ನಡ ಸಂಘಟನೆಗಳ ಪ್ರಮುಖರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಸಭೆಯಲ್ಲಿ ನಗರಸಭಾ ಸದಸ್ಯ ತ.ನ. ಪ್ರಭುದೇವ್, ಕಸಾಪ ತಾಲೂಕು ಅಧ್ಯಕ್ಷ ಗೋವಿಂದರಾಜು, ಕನ್ನಡ ಜಾಗೃತ ಪರಿಷತ್ತಿನ ಕಾರ್ಯದರ್ಶಿ ಆಂಜನೇಯ, ರೈತ ಸಂಘದ ಹನುಮೇಗೌಡ, ಕಸಾಪ ಜಿಲ್ಲಾ ಕಾರ್ಯದರ್ಶಿ ರಾಜಘಟ್ಟ ರವಿ ಸೇರಿದಂತೆ ಡಾ.ರಾಜ್ ಮತ್ತು ಶಿವರಾಜ್ ಕುಮಾರ್ ಅಭಿಮಾನಿ ಸಂಘಗಳ ಪದಾಧಿಕಾರಿಗಳು, ವಿವಿಧ ಕನ್ನಡ ಪರ ವೇದಿಕೆಗಳ ಅಧ್ಯಕ್ಷರು ಹಾಗೂ ಕಲಾವಿದರು ಉಪಸ್ಥಿತರಿದ್ದರು.

## ಕಟ್ಟುಪಾಡು ಮೀರಿ ಸಾಧನೆಯ ಶಿಖರಕ್ಕೇರಿದ ಮಹಿಳೆಯರಿಗೆ ಸಲಾಂ



ಶ್ರೀನಿವಾಸಪುರ

ಒಂದು ಕಾಲದಲ್ಲಿ ಕೇವಲ ಕುಟುಂಬದ ಕಟ್ಟುಪಾಡುಗಳಿಗೆ ಸೀಮಿತವಾಗಿದ್ದ ಮಹಿಳೆಯರು, ಇಂದು ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಾ ಪುರುಷರಿಗೆ ಸಮಾನವಾಗಿ ಬೆಳೆಯುತ್ತಿರುವುದು ಶ್ಲಾಘನೀಯ ವಿಚಾರ ಎಂದು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಇಲಾಖೆ ವ್ಯವಸ್ಥಾಪಕ ಗೋವಿಂದಮೂರ್ತಿ ತಿಳಿಸಿದರು.

ಪಟ್ಟಣದ ಪುರಸಭೆ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದ್ದ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

**ಹೋರಾಟದಿಂದ ಬಂದ ಹಕ್ಕುಗಳು:** ಪ್ರಪಂಚದಾದ್ಯಂತ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಸುದೀರ್ಘ ಹೋರಾಟ ನಡೆಸಿದ ಇತಿಹಾಸವಿದೆ. ಈ ಹೋರಾಟದ ಫಲವಾಗಿಯೇ ಇಂದು ಅನೇಕ ದೇಶಗಳು ಮಹಿಳೆಯರಿಗೆ ವಿಶೇಷ ಸ್ಥಾನಮಾನ ಮತ್ತು ಗೌರವವನ್ನು ನೀಡುತ್ತಿವೆ. ಅದರಲ್ಲೂ ನಮ್ಮ ಭಾರತ ದೇಶವು ಮಹಿಳೆಯರನ್ನು ಅತ್ಯಂತ ಗೌರವಪೂರ್ವಕವಾಗಿ ಕಾಣುವ ಸಂಸ್ಕೃತಿಯನ್ನು ಹೊಂದಿದೆ. ಮಹಿಳೆಯರ ಅಭಿವೃದ್ಧಿಯಿಂದಲೇ ಸಮಾಜದ ಪ್ರಗತಿ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕಂದಾಯ ನಿರೀಕ್ಷಕ ಶಂಕರ್, ಪುರಸಭೆ ಪರಿಸರ ಅಭಿಯಂತರ ಲಕ್ಷ್ಮೀಶ್, ಆರೋಗ್ಯ ನಿರೀಕ್ಷಕ ಟಿ.ವಿ. ಸುರೇಶ್, ಕೌಶಲ್ಯ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ರತ್ನಮ್ಮ ಹಾಗೂ ತಾಲೂಕು ಸ್ತ್ರೀ ಶಕ್ತಿ ಸಂಘದ ಅಧ್ಯಕ್ಷೆ ಯಶೋಧಮ್ಮ ಉಪಸ್ಥಿತರಿದ್ದರು. ಪುರಸಭೆ ಪ್ರಥಮ ದರ್ಜೆ ಸಹಾಯಕ ನಾಗೇಶ್, ಕಾರ್ಯಕ್ರಮ ಆಯೋಜಕ ಮಂಜುನಾಥ್ ಹಾಗೂ ಪುರಸಭೆಯ ಸಮಸ್ತ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹಕ್ಕುಗಳ ಅರಿವಿನಿಂದ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ: ರವಿಪ್ರಕಾಶ್ ತಿಪ್ಪಣ್ಣ

ಕನಕಪುರ

ಇಂದಿನ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಹೆಚ್ಚಿನ ಅರಿವು ಕಾರ್ಯಕ್ರಮಗಳು ನಡೆಯುವ ಅಗತ್ಯವಿದೆ ಎಂದು ಮೂರನೇ ಅಪರ ಸಿವಿಲ್ ನ್ಯಾಯಾಧೀಶರಾದ ರವಿಪ್ರಕಾಶ್ ತಿಪ್ಪಣ್ಣ ಆವಿನ್ ಅಭಿಪ್ರಾಯಪಟ್ಟರು.

ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ನಬಾರ್ಡ್ ಹಾಗೂ ಕರ್ತವ್ಯ ಫೌಂಡೇಶನ್ ಸಹಯೋಗದಲ್ಲಿ ಹಾರೋಹಳ್ಳಿಯ ಕೆನರಾ ಬ್ಯಾಂಕ್ ತರಬೇತಿ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿದ್ದ 'ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ' ಹಾಗೂ 'ಕಾನೂನು ಅರಿವು' ಕಾರ್ಯಕ್ರಮವನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



**ಸಾಧನೆಗೆ ಬೇಕು ಮಹಿಳಾ ಉತ್ತೇಜನ:** ಮಹಿಳೆಯರಿಗೆ ಸರಿಯಾದ ಉತ್ತೇಜನ ನೀಡಿದರೆ ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಅವರು ಅದ್ಭುತ ಸಾಧನೆ ಮಾಡಬಲ್ಲರು ಎಂಬುದಕ್ಕೆ ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಇಂದಿನವರೆಗೆ ಮಹಿಳೆಯರ ಕೊಡುಗೆ ಅಪಾರ. ದೇಶದ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಸಾಧನೆ ಇಂದಿಗೂ ನಮಗೆಲ್ಲಾ ಮಾದರಿಯಾಗಿದೆ ಎಂದು ಸ್ಮರಿಸಿದರು.

ಸರ್ಕಾರ ಮಹಿಳೆಯರಿಗಾಗಿ ಹಲವಾರು ವಿಶೇಷ ಯೋಜನೆಗಳು ಮತ್ತು ಕಾನೂನುಗಳನ್ನು ಜಾರಿಗೆ ತಂದಿದೆ. ಮಹಿಳೆಯರು ಈ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಕೆನರಾ ಬ್ಯಾಂಕ್ ತರಬೇತಿ ಸಂಸ್ಥೆಯು ಇಂತಹ ಉಪಯುಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ನ್ಯಾಯಾಧೀಶರು ಬಣ್ಣಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ವಕೀಲ ಗೋಪಾಲಗೌಡ ಅವರು ಮಹಿಳೆಯರ ಹಕ್ಕುಗಳು ಹಾಗೂ ಸಂವಿಧಾನದ ರಕ್ಷಣೆ ಕುರಿತು ಸುದೀರ್ಘ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ನಬಾರ್ಡ್ ಜಿಲ್ಲಾ ವ್ಯವಸ್ಥಾಪಕಿ ಬಿ.ವಿ. ಹರ್ಷಿತಾ, ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಚಂದ್ರ ಚರಣ್, ಕರ್ತವ್ಯ ಫೌಂಡೇಶನ್‌ನ ರಾಜಶೇಖರ್ ಎಸ್.ಎನ್., ವಕೀಲರ ಸಂಘದ ಅಧ್ಯಕ್ಷ ಎ.ಸಿ. ಚನ್ನೇಗೌಡ, ಪ್ರಧಾನ ಕಾರ್ಯದರ್ಶಿ ಸಿ.ಎಸ್. ನಾರಾಯಣಸ್ವಾಮಿ ಸೇರಿದಂತೆ ಹಲವು ಗಣ್ಯರು, ವಕೀಲರು ಹಾಗೂ ತರಬೇತಿ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ರಾಮಸಂದ್ರ ಶಾಲೆಗೆ ಎಸ್‌ಡಿಎಂಸಿ ಪ್ರಶಸ್ತಿ ಗರಿ!

ಬಂಗಾರಪೇಟೆ

ತಾಲ್ಲೂಕಿನ ರಾಮಸಂದ್ರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಜಿಲ್ಲಾ ಮಟ್ಟದಲ್ಲಿ 'ಅತ್ಯುತ್ತಮ ಎಸ್‌ಡಿಎಂಸಿ ಶಾಲೆ' ಪ್ರಶಸ್ತಿಗೆ ಭಾಜನವಾಗುವ ಮೂಲಕ ಇಡೀ ತಾಲ್ಲೂಕಿಗೆ ಕೀರ್ತಿ ತಂದಿದೆ. ಶಾಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಿ ಸರ್ಕಾರವು 50 ಸಾವಿರ ರೂಪಾಯಿಗಳ ನಗದು ಬಹುಮಾನವನ್ನು ನೀಡಿ ಗೌರವಿಸಿದೆ.

ಈ ಶಾಲೆಯು ಕೇವಲ ಶಿಕ್ಷಣ ಸಂಸ್ಥೆಯಾಗಿ ಉಳಿಯದೆ, ಒಂದು ಸುಂದರ ಪರಿಸರ ಮಿತ್ರ ತಾಣವಾಗಿ ಮಾರ್ಪಟ್ಟಿದೆ. ಗ್ರಾಮ ಪಂಚಾಯತಿ ಸಹಕಾರದಿಂದ ಶಾಲಾ ಕಾಂಪೌಂಡ್ ನಿರ್ಮಾಣ, ಕೊಠಡಿ ದುರಸ್ತಿ, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ ಹಾಗೂ ಅತ್ಯಾಧುನಿಕ ಗ್ರಂಥಾಲಯದ ಸೌಲಭ್ಯಗಳನ್ನು ಹೊಂದಿದೆ. ಬೋಧನಾ ಉಪಕರಣಗಳು, ಕ್ರೀಡಾ ಸಾಮಗ್ರಿಗಳು, ಕಂಪ್ಯೂಟರ್ ಹಾಗೂ ಸೀಲಿಂಗ್ ಫ್ಯಾನ್ ಒಳಗೊಂಡಂತೆ ಪ್ರತಿಯೊಂದು ಮೂಲಭೂತ ಸೌಕರ್ಯಗಳು ಇಲ್ಲಿ ಲಭ್ಯವಿದ್ದು, ಖಾಸಗಿ ಶಾಲೆಗಳಿಗೆ ಸವಾಲು ಹಾಕುವಂತೆ ಶಾಲೆ ಸಜ್ಜಾಗಿದೆ.

**ದಾನಿಗಳ ದಯಾಹಸ್ತ:** ಶಾಲೆಯ ಈ ಹಂತದ ಬೆಳವಣಿಗೆಯಲ್ಲಿ ದಾನಿಗಳ ಪಾತ್ರ ಅತ್ಯಂತ ದೊಡ್ಡದಿದೆ. ದಾನಿ ಚಂದ್ರಪ್ಪ ಅವರು ಧ್ವನಿವರ್ಧಕ ವ್ಯವಸ್ಥೆ ನೀಡಿದ್ದಾರೆ. ಎಳೆಸಂದ್ರ ಶ್ರೀನಿವಾಸ್ ಅವರು ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುತ್ತಿದ್ದರೆ, ಎಳೆಸಂದ್ರ ರಾಮು ಅವರು ಬ್ಯಾಂಡ್ ಸೆಟ್ ಕೊಡುಗೆಯಾಗಿ ನೀಡಿದ್ದಾರೆ.

ಹೋಪ್ ಮಿನಿಸ್ಟರ್ ಸಂಸ್ಥೆಯ ಅಧ್ಯಕ್ಷ ರಾಬರ್ಟ್ ಡಿ. ರೋಜಾ ಪ್ರತಿವರ್ಷ ಉಚಿತ ಪುಸ್ತಕ ಹಾಗೂ ಲೇಖನಿ ಸಾಮಗ್ರಿಗಳನ್ನು ವಿತರಿಸುತ್ತಿದ್ದಾರೆ.

ಮಹಿಳಾ ಸಂಘಗಳಿಂದ ತಟ್ಟೆ, ಲೋಟ ಹಾಗೂ ಡೆಸ್ಕ್‌ಗಳ ವ್ಯವಸ್ಥೆಯಾಗಿದೆ.

**ದಶಕಗಳ ಸೇವೆ ಸಲ್ಲಿಸಿದ ಶಿಕ್ಷಕರು:** ಶಾಲೆಯ ಈ ಸಾಧನೆಯ ಹಿಂದೆ ಇಲ್ಲಿನ ಶಿಕ್ಷಕರ ನಿರಂತರ ಪರಿಶ್ರಮವಿದೆ. ಶಿಕ್ಷಕ ಎಸ್.ಎಂ. ಶ್ಯಾಮಮೂರ್ತಿ ಕಳೆದ 20 ವರ್ಷಗಳಿಂದ ಹಾಗೂ ಶಿಕ್ಷಕ ಆನಂದ್ ಅವರು 18 ವರ್ಷಗಳಿಂದ ಒಂದೇ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಮಕ್ಕಳ ಭವಿಷ್ಯ ರೂಪಿಸುತ್ತಿದ್ದಾರೆ. ಇವರ ಜೊತೆಗೆ ಅಡುಗೆ ಸಿಬ್ಬಂದಿ ಹಾಗೂ ಎಸ್‌ಡಿಎಂಸಿ ಸಮಿತಿ ಹಗಲಿರುಳು ಶ್ರಮಿಸಿದೆ.

ಈ ಸಂಭ್ರಮದ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಮತ್ತು ಶಿಕ್ಷಕ ವೃಂದದವರು ಶಿಕ್ಷಣ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಮತ್ತು ಸಹಕರಿಸಿದ ಸಮಸ್ತ ಗ್ರಾಮಸ್ಥರಿಗೆ ಹೃದಯಪೂರ್ವಕ ಕೃತಜ್ಞತೆ

# ಇರಾನ್-ಇಸ್ರೇಲ್ ಸಮರದ ಬಿಸಿ: ಗ್ಯಾಸ್‌ಗಾಗಿ ಆಟೋ ಚಾಲಕರ ಹಾಹಾಕಾರ

ಬಂಗಾರಪೇಟೆ

ದೂರದ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಪರಿಣಾಮ ವಿಶ್ವದ ಇಂಧನ ಮಾರುಕಟ್ಟೆಯನ್ನು ತಲ್ಲಣಗೊಳಿಸಿದ್ದು, ಅದರ ನೇರ ಅಲೆ ಈಗ ಬಂಗಾರಪೇಟೆ ಪಟ್ಟಣಕ್ಕೂ ತಲುಪಿದೆ. ಪಟ್ಟಣದಲ್ಲಿ ಎಲ್‌ಪಿಜಿ ಗ್ಯಾಸ್ ತೀವ್ರ ಕೊರತೆ ಉಂಟಾಗಿದ್ದು, ಆಟೋ ಚಾಲಕರು ಮತ್ತು ಗೃಹಿಣಿಯರು ಸಿಲಿಂಡರ್‌ಗಾಗಿ ಬೀದಿಯಲ್ಲಿ ನಿಲ್ಲುವಂತಾಗಿದೆ.

**ಬಂಕ್‌ಗಳ ಮುಂದೆ ಹಗ್ಗ, ಆಟೋಗಳ ಪರದಾಟ:**

ಇಲ್ಲಿನ ಎರಡು ಪ್ರಮುಖ ಗ್ಯಾಸ್ ಬಂಕ್‌ಗಳಲ್ಲಿ ದಾಸ್ತಾನು ಸಂಪೂರ್ಣ ಖಾಲಿಯಾಗಿದೆ. ಗ್ಯಾಸ್ ಇಲ್ಲದ ಕಾರಣ ಮಾಲೀಕರು ಬಂಕ್ ಒಳಗೆ ವಾಹನಗಳು ಬರದಂತೆ ಹಗ್ಗ ಕಟ್ಟಿದ್ದಾರೆ. ಎರಡು ದಿನಗಳ




ಹಿಂದೆ ಪ್ರತಿ ಕೆಜಿಗೆ 55 ರೂ. ಇದ್ದ ಗ್ಯಾಸ್ ದರ ಈಗ ಏಕಾಏಕಿ 70 ರೂ.ಗೆ ಏರಿಕೆಯಾಗಿದೆ. ಪ್ರತಿದಿನ ಆಟೋಗಳಿಗಾಗಿ ಕನಿಷ್ಠ ಒಂದು ಟನ್ ಗ್ಯಾಸ್ ಅಗತ್ಯವಿದ್ದು, ಸರಬರಾಜು ಇಲ್ಲದೆ ಚಾಲಕರು ಬರಿಗೈಲಿ ವಾಪಸ್ ಹೋಗುತ್ತಿದ್ದಾರೆ.

**ಆಫರ್ ಕಟ್, ದರ ಏರಿಕೆ ಫಿಕ್ಸ್!**

"ಯುದ್ಧದ ಪರಿಸ್ಥಿತಿಯಿಂದಾಗಿ ಮಾರುಕಟ್ಟೆಯಲ್ಲಿ ತಾತ್ಕಾಲಿಕವಾಗಿ ಎಲ್‌ಪಿಜಿ ಕೊರತೆ ಉಂಟಾಗಿದೆ. ದರಗಳನ್ನು ಹೆಚ್ಚಿಸಲಾಗಿದ್ದು, ವಿಶೇಷ ಆಫರ್‌ಗಳನ್ನು ಸ್ಥಗಿತಗೊಳಿಸಲಾಗಿದೆ" ಎಂದು 'ಗೋ ಗ್ಯಾಸ್' ಬಂಕ್ ಮಾಲೀಕರು ಪ್ರಕಟಣೆ ಹೊರಡಿಸಿದ್ದಾರೆ. ಪರಿಸ್ಥಿತಿ ತಿಳಿಯಾದ ನಂತರವೇ ದರ ಇಳಿಕೆಯಾಗುವ ಸಾಧ್ಯತೆ ಇದೆ.

**ಮನೆ ಬಳಕೆಯ ಗ್ಯಾಸ್‌ಗೂ ತಟ್ಟಿದ ಕಂಟಕ:** ಆಟೋಗಳಷ್ಟೇ ಅಲ್ಲದೆ, ಮನೆ ಬಳಕೆಯ ಗ್ಯಾಸ್ ಏಜೆನ್ಸಿಗಳ ಮುಂದೆಯೂ ನಾಗರಿಕರು ಗಂಟೆಗಟ್ಟಲೆ ಕ್ಯೂ ನಿಲ್ಲುತ್ತಿದ್ದಾರೆ. ಭಾರತ್ ಗ್ಯಾಸ್ ಏಜೆನ್ಸಿಯ ಮುಂದೆ ಬುಕ್ ಮಾಡಿದ ಮೂರು ದಿನಗಳ ನಂತರ ವಿತರಣೆ ಮಾಡಲಾಗುತ್ತಿದೆ. ಬೆಳಗ್ಗೆಯಿಂದ ಸಾಲಿನಲ್ಲಿ ನಿಂತರೂ ಸಿಲಿಂಡರ್ ಸಿಗದೆ ಗೃಹಿಣಿಯರು ನಿರಾಶೆಯಿಂದ ಹಿಂತಿರುಗುತ್ತಿದ್ದಾರೆ.

**ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತ:** ಗ್ಯಾಸ್ ಸಮಸ್ಯೆಯಿಂದ ರಸ್ತೆಯಲ್ಲಿ ಆಟೋಗಳ ಸಂಖ್ಯೆ ಕಡಿಮೆಯಾಗಿದ್ದು, ಪ್ರಯಾಣಿಕರು ಪರದಾಡುವಂತಾಗಿದೆ. ಅಧಿಕಾರಿಗಳು ತಕ್ಷಣ ಮಧ್ಯ ಪ್ರವೇಶಿಸಿ ಗ್ಯಾಸ್ ಸರಬರಾಜು ಸುಗಮಗೊಳಿಸದಿದ್ದರೆ ಸಾರಿಗೆ ವ್ಯವಸ್ಥೆ ಸಂಪೂರ್ಣ ಹದಗೆಡುವ ಆತಂಕ ಎದುರಾಗಿದೆ.




"ಗ್ಯಾಸ್‌ನಲ್ಲಿ ಆಟೋ ಓಡಿಸುವಾಗ ಸ್ವಲ್ಪ ಹಣ ಉಳಿತಾಯವಾಗುತ್ತಿತ್ತು. ಈಗ ಗ್ಯಾಸ್ ಸಿಗದೆ ಅನಿವಾರ್ಯವಾಗಿ ಪೆಟ್ರೋಲ್ ಹಾಕಿಸಬೇಕಾಗಿದೆ. ಪೆಟ್ರೋಲ್ ದರ ಗ್ಯಾಸ್‌ಗಿಂತ ತುಂಬಾ ಹೆಚ್ಚು. ಆದರೂ ಜೀವನ ನಿರ್ವಹಣೆಗಾಗಿ ಆಟೋ ಓಡಿಸಲೇಬೇಕಾದ ಅನಿವಾರ್ಯತೆ ಇದೆ."

- ಗಜೇಂದ್ರ, ಆಟೋ ಚಾಲಕ

## ಪತಿಗೇ ಎಳ್ಳುನೀರು ಬಿಟ್ಟ ಪತ್ನಿ!

ತಿಪಟೂರು

ತಾಲ್ಲೂಕಿನ ಚಿಕ್ಕಕೊಟ್ಟಿಗಿಹಳ್ಳಿ ಗ್ರಾಮದ ಬಳಿ ಕಳೆದ ವಾರ ನಡೆದಿದ್ದ ಗುಜರಿ ವ್ಯಾಪಾರಿಯ ಕೊಲೆ ಪ್ರಕರಣವನ್ನು ಸಿನಿಮೀಯ ಶೈಲಿಯಲ್ಲಿ ಭೇದಿಸಿರುವ ಗ್ರಾಮಾಂತರ ಪೊಲೀಸರು, ಮೃತನ ಪತ್ನಿ ಸೇರಿದಂತೆ ನಾಲ್ವರು ಆರೋಪಿಗಳನ್ನು ಕಂಬಿ ಎಣಿಸುವಂತೆ ಮಾಡಿದ್ದಾರೆ.

**ಪ್ರಕರಣದ ಹಿನ್ನೆಲೆ:** ದಿನಾಂಕ 4– 3– 2026 ರಂದು ತಿಪಟೂರಿನ ಗಾಂಧಿನಗರದ ವಾಸಿ, ಗುಜರಿ ವ್ಯಾಪಾರ ಮಾಡುತ್ತಿದ್ದ ಮನ್ಸೂರ್ ಪಾಷ (31) ಎಂಬುವವರನ್ನು ದುಷ್ಕರ್ಮಿಗಳು ಚಿಕ್ಕಕೊಟ್ಟಿಗೆಹಳ್ಳಿ ಬಳಿ ಭೀಕರವಾಗಿ ಹತ್ಯೆ ಮಾಡಿದ್ದರು. ಈ ಬಗ್ಗೆ ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಗಾಂಭೀರ್ಯ ಅರಿತ ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕ ಅಶೋಕ್ ಕೆ.ವಿ. ರವರು ಆರೋಪಿಗಳ ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಿದ್ದರು.

**ಬಂಧಿತ ಆರೋಪಿಗಳು:** ಫರ್ಜಾನ ಮೃತ ಮನ್ಸೂರ್ ಪಾಷನ ಪತ್ನಿ, ಧನರಾಜ್ @ ಧನು ಅಜ್ಜಂಪುರ ತಾಲ್ಲೂಕಿನ ಹುಚ್ಚನಹಟ್ಟಿ ನಿವಾಸಿ, ವೆಂಕಟೇಶ ಅಜ್ಜಂಪುರ ತಾಲ್ಲೂಕಿನ ದಾಸರಹಟ್ಟಿ ನಿವಾಸಿ, ದರ್ಶನ್ ಅಜ್ಜಂಪುರ ತಾಲ್ಲೂಕಿನ ದಾಸರಹಟ್ಟಿ ನಿವಾಸಿ.

ಡಿವೈಎಸ್ಪಿ ಎಂ.ಹೆಚ್. ಉಮೇಶ್ ಮಾರ್ಗದರ್ಶನದಲ್ಲಿ ಮತ್ತು ತಂಡದ ಈ ಕ್ಷಿಪ್ರ ಕಾರ್ಯಾಚರಣೆಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

# ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸಲು ಒತ್ತಾಯಿಸಿ ಪ್ರತಿಭಟನೆ

ಮಾಲೂರು

ನಗರದ ಚಿತ್ರಣವನ್ನೇ ಬದಲಿಸಲಿರುವ 4 ಪಥದ ರಸ್ತೆ ಹಾಗೂ ಮೇಲ್ಸೇತುವೆ (ಫ್ಲೈಓವರ್) ಕಾಮಗಾರಿಗೆ ಅಡ್ಡಗಾಲು ಹಾಕುತ್ತಿರುವ ಹಾಗೂ ಸುಳ್ಳು ಮಾಹಿತಿ ನೀಡುತ್ತಿರುವ ಅಭಿವೃದ್ಧಿ ವಿರೋಧಿಗಳ ವಿರುದ್ಧ ಕಾಂಗ್ರೆಸ್ ಪಕ್ಷ ಬೃಹತ್ ಪ್ರತಿಭಟನೆ ನಡೆಸಿತು. ಸರ್ಕಾರಿ ಖರಾಬು ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ಆಕ್ರಮಿಸಿಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದರು.

**ಬೃಹತ್ ಪ್ರತಿಭಟನಾ ಮೆರವಣಿಗೆ:** ನಗರದ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು, ಮುಖಂಡರು ಕಾಲ್ನಡಿಗೆಯ ಮೂಲಕ ಅಂಬೇಡ್ಕರ್ ಉದ್ಯಾನವನಕ್ಕೆ ತೆರಳಿ ಮಾಲಾರ್ಪಣೆ ಮಾಡಿದರು. ನಂತರ ಮಾರಿಕಾಂಬಾ ದ್ವಾರದ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

**ಸಂಚಾರ ದಟ್ಟಣೆಗೆ ಶಾಶ್ವತ ಪರಿಹಾರ:** ಈ ಸಂದರ್ಭದಲ್ಲಿ ಮಾತನಾಡಿದ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಿಲ್ ನಂಜೇಗೌಡ, "ಮಾಲೂರು–ಹೊಸೂರು ಮುಖ್ಯರಸ್ತೆಯಲ್ಲಿ ಪ್ರತಿದಿನ 25 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿವೆ. ಟ್ರಾಫಿಕ್ ಜಾಮ್‌ನಿಂದ ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ಸಾರ್ವಜನಿಕರು ಹೈರಾಣಾಗಿದ್ದಾರೆ. ಇದನ್ನು ಗಮನಿಸಿದ ಶಾಸಕ ಕೆ.ವೈ. ನಂಜೇಗೌಡ ಅವರು ಎಪಿಎಂಸಿ ಯಾರ್ಡ್‌ನಿಂದ ಕೈಗಾರಿಕಾ ಪ್ರದೇಶದವರೆಗೆ 3.5 ಕಿ.ಮೀ ಉದ್ದದ ಫ್ಲೈ ಓವರ್ ಹಾಗೂ ವೈಟ್ ಟಾಪಿಂಗ್ ರಸ್ತೆ ಮಂಜೂರು ಮಾಡಿಸಿದ್ದಾರೆ. ಆದರೆ, ಬಿಜೆಪಿ ಮತ್ತು ಜೆಡಿಎಸ್‌ನ ಕೆಲವು ಮುಖಂಡರು ರಾಜಕೀಯ ಪ್ರೇರಿತವಾಗಿ ಈ ಅಭಿವೃದ್ಧಿಗೆ



ಅಡ್ಡಿಪಡಿಸುತ್ತಿರುವುದು ನಾಚಿಕೆಗೇಡಿನ ಸಂಗತಿ," ಎಂದು ಕಿಡಿಕಾರಿದರು.

**ಒತ್ತುವರಿ ತೆರವುಗೊಳಿಸಲು ಆಗ್ರಹ:** ಮುಖ್ಯರಸ್ತೆಯ ಇಕ್ಕೆಲಗಳಲ್ಲಿರುವ ಸರ್ಕಾರಿ ಖರಾಬು ಜಮೀನು, ಕಾಲುವೆ ಹಾಗೂ ಪುರಸಭೆಯ ಸ್ವತ್ತುಗಳನ್ನು ನಕಲಿ ದಾಖಲೆಗಳ ಮೂಲಕ ಕೆಲವರು ಅಕ್ರಮವಾಗಿ ಕಬಳಿಸಿದ್ದಾರೆ. ಈ ಒತ್ತುವರಿದಾರರೇ ಈಗ ಕಾಮಗಾರಿಯ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಕೂಡಲೇ ಈ ಅಕ್ರಮ ಜಾಗಗಳನ್ನು ತೆರವುಗೊಳಿಸಿ ಸುಗಮವಾಗಿ ಕಾಮಗಾರಿ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ತಹಸೀಲ್ದಾರ್ ಎಂ.ವಿ. ರೂಪ ಅವರಿಗೆ ಮನವಿ ಸಲ್ಲಿಸಿದರು.

**ಅಭಿವೃದ್ಧಿ ಸ್ಥಗಿತಗೊಳ್ಳಲ್ಲ:** ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗಾಪುರ ಎಂ. ಕೃಷ್ಣಪ್ಪ (ಕಿಟ್ಟಿ) ಮಾತನಾಡಿ, "ಯಾರೇ ವಿರೋಧ ವ್ಯಕ್ತಪಡಿಸಿದರೂ ಶಾಸಕರ ದೂರದೃಷ್ಟಿಯ ಈ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಳ್ಳುವುದಿಲ್ಲ. ನಗರದ ಜನತೆ ಹಾಗೂ ಸಂಘ–ಸಂಸ್ಥೆಗಳು ಅಭಿವೃದ್ಧಿಗೆ ಪೂರ್ಣ ಸಹಕಾರ ನೀಡುತ್ತಿವೆ," ಎಂದರು.

ಈ ಸಂದರ್ಭದಲ್ಲಿ ದಮನಿತರ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಫ್ರೆಂಡ್ಸ್ ಸಂತೋಷ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಸ್. ಜೆ. ರಾಮಮೂರ್ತಿ, ಕೋಮುಲ್ ನಿರ್ದೇಶಕ ಶ್ರೀನಿವಾಸ್ ಸೇರಿದಂತೆ ಮಹಿಳಾ ಘಟಕದ ಪದಾಧಿಕಾರಿಗಳು ಹಾಗೂ ನೂರಾರು ಮುಖಂಡರು ಉಪಸ್ಥಿತರಿದ್ದರು.

14/03/2026
ಭಾರತ ಸಾರಥಿ
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಕುಡಿವ ನೀರಿಗಾಗಿ ಖಾಲಿ ಬಿಂದಿಗೆ ಚಳವಳಿ



ಕುಣಿಗಲ್

ತಾಲ್ಲೂಕಿನ ಹುಲಿಯೂರುದುರ್ಗ ವ್ಯಾಪ್ತಿಯ ಉಜ್ಜನಿ ಗ್ರಾಮದಲ್ಲಿ ಕಳೆದ ಒಂದು ತಿಂಗಳಿನಿಂದ ಕುಡಿಯುವ ನೀರಿನ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಆಕ್ರೋಶಗೊಂಡ ಗ್ರಾಮದ ಮಹಿಳೆಯರು ಖಾಲಿ ಬಿಂದಿಗೆ ಹಿಡಿದು ಗುರುವಾರ ಗ್ರಾಮ ಪಂಚಾಯಿತಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಿದರು.

ಜೆಜೆಎಂ ಕಾಮಗಾರಿ ಹೆಸರಲ್ಲಿ ಅವಾಂತರ: ಕೇಂದ್ರ ಸರ್ಕಾರದ ಜಲ ಜೀವನ ಮಿಷನ್ (ಎಎಒ) ಯೋಜನೆಯಡಿ ಗ್ರಾಮದಲ್ಲಿ ಒಂದು ವರ್ಷದ ಹಿಂದೆಯೇ ಕಾಮಗಾರಿ ಆರಂಭವಾಗಿದ್ದರೂ, ಇಂದಿಗೂ ಪೂರ್ಣಗೊಂಡಿಲ್ಲ. ಹೊಸ ಪೈಪ್ ಲೈನ್ ಅಳವಡಿಸುವ ಭರದಲ್ಲಿ ಈ ಹಿಂದೆ ಗ್ರಾಮ ಪಂಚಾಯಿತಿಯಿಂದ ಮಾಡಲಾಗಿದ್ದ ಹಳೆಯ ಪೈಪ್‌ಲೈನ್ ವ್ಯವಸ್ಥೆಯನ್ನು ಒಡೆದು ಹಾಕಲಾಗಿದೆ. ಇದರಿಂದಾಗಿ ನೀರಿನ ಟ್ಯಾಂಕ್‌ಗಳಿಗೆ ನೀರು ಸರಬರಾಜಾಗದೆ ಗ್ರಾಮದಲ್ಲಿ ನೀರಿನ ಸಮಸ್ಯೆ ಉಲ್ಬಣಿಸಿದೆ. ಈ ಬಗ್ಗೆ ಹಲವು ಬಾರಿ ಪಂಚಾಯಿತಿ ಹಾಗೂ ಕುಡಿಯುವ ನೀರಿನ ಇಲಾಖೆಗೆ ದೂರು ನೀಡಿದರೂ ಅಧಿಕಾರಿಗಳು ಕ್ಯಾರೆ ಅಂದಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕ್ಕಾರಿದರು.

ಕಳಪೆ ಕಾಮಗಾರಿ ಆರೋಪ: ಸ್ಥಳಕ್ಕೆ ಆಗಮಿಸಿದ ಗ್ರಾಮೀಣ ಕುಡಿಯುವ ನೀರಿನ ಇಲಾಖೆಯ ಸಹಾಯಕ ಇಂಜಿನಿಯರ್ ಸಾಬಣ್ಣ ಅವರನ್ನು ಮಹಿಳೆಯರು ತೀವ್ರ ತರಾಟೆಗೆ ತೆಗೆದುಕೊಂಡರು. "ಕೋಟಿಗಟ್ಟಲೆ ಹಣ ಖರ್ಚು ಮಾಡಿ ಕಳಪೆ ಕಾಮಗಾರಿ ಮಾಡಲಾಗಿದೆ. ಹಳೆಯ ಟ್ಯಾಂಕ್‌ಗೆ ಕೇವಲ ಬಣ್ಣ ಬಳಿದು ಹೊಸ ಟ್ಯಾಂಕ್ ಎಂದು ಬಿಂಬಿಸಲಾಗುತ್ತಿದೆ. ನಮಗೆ ನೀರು ಕೊಡುವವರೆಗೆ ಜಾಗ ಬಿಟ್ಟು ಕದಲುವುದಿಲ್ಲ" ಎಂದು ಪಟ್ಟು ಹಿಡಿದರು.

ಹಬ್ಬದ ಹೊತ್ತಲ್ಲೇ ಬರದ ಬರೆ: ಗ್ರಾಮದಲ್ಲಿ ಚೌಡೇಶ್ವರಿ ಹಬ್ಬಕ್ಕೆ ಕೇವಲ ಹದಿನೈದು ದಿನಗಳು ಬಾಕಿ ಇವೆ. ಹಬ್ಬದ ತಯಾರಿ ನಡೆಸಬೇಕಾದ ಸಮಯದಲ್ಲಿ ಮಹಿಳೆಯರು ಕಿಲೋಮೀಟರ್‌ಗಟ್ಟಲೆ ನಡೆದು ತೋಟದ ಮನೆಗಳ ಕೊಳವೆಬಾವಿಗಳಿಂದ ನೀರು ತರುವಂತಾಗಿದೆ. "ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮಗೆ ಈ ದುಸ್ಥಿತಿ ಬಂದಿದೆ" ಎಂದು ಗ್ರಾಮಸ್ಥರು ಅಳಲು ತೋಡಿಕೊಂಡರು.

ಇಒ ಭರವಸೆ: ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ (ಇಒ) ವಸಂತ್ ಕುಮಾರ್, ನೀರಿನ ಸಮಸ್ಯೆ ಇರುವ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದರು. "ಇನ್ನೆರಡು ದಿನಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಿ ನೀರಿನ ಸಮಸ್ಯೆ ಬಗೆಹರಿಸಲಾಗುವುದು ಹಾಗೂ ಜೆಜೆಎಂ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಸಮಾಪ್ತಿಗೊಂಡಿತು.

ಪ್ರತಿಭಟನೆಯಲ್ಲಿ ಸಾವಿತ್ರಮ್ಮ, ಜಯಶೀಲಾ, ಪುಟ್ಟರಂಗಮ್ಮ, ಮಂಜುಳಾ, ಶಾಂತಮ್ಮ, ಪ್ರೇಮ, ಲಕ್ಷ್ಮಮ್ಮ ಸೇರಿದಂತೆ ಗ್ರಾಮದ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

# ಮಜರಾ ಹೊಸಹಳ್ಳಿ ಗ್ರಾ.ಪಂ. ಅಧ್ಯಕ್ಷರ ಆಯ್ಕೆ

ದೊಡ್ಡಬಳ್ಳಾಪುರ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂಭ್ರಮದ ಸಂದರ್ಭದಲ್ಲಿ ತಾಲೂಕಿನ ಮಜರಾಹೊಸಹಳ್ಳಿ ಗ್ರಾ.ಪಂ. ಮಹಿಳಾ ಸಬಲೀಕರಣಕ್ಕೆ ಮಾದರಿಯಾಗಿ ನಿಂತಿದೆ. ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳೇ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಇಡೀ ಪಂಚಾಯಿತಿಯ ಆಡಳಿತ ಈಗ 'ಮಹಿಳಾ ಮಣಿ'ಗಳ ವಶವಾಗಿದೆ.

ಹಿಂದಿನ ಅಧ್ಯಕ್ಷೆ ರುದ್ರಾಣಮ್ಮ ಮಂಜುನಾಥ್ ಹಾಗೂ ಉಪಾಧ್ಯಕ್ಷ ಮಾರಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಗಳಿಗೆ ಚುನಾವಣೆ ಪ್ರಕ್ರಿಯೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಸುಷ್ಮಾ ಹರೀಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಮ್ಮ ಹನುಮಂತಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ, ಚುನಾವಣಾಧಿಕಾರಿಗಳು ಇಬ್ಬರನ್ನೂ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ ಎಂದು ಘೋಷಿಸಿದರು.

ಈ ಪಂಚಾಯಿತಿಯ ವಿಶೇಷವೆಂದರೆ, ನೂತನವಾಗಿ ಆಯ್ಕೆಯಾದ ಅಧ್ಯಕ್ಷೆ ಮತ್ತು ಉಪಾಧ್ಯಕ್ಷರ ಜೊತೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೂಡ ಮಹಿಳೆಯಾಗಿದ್ದಾರೆ. ಮಹಿಳಾ ದಿನಾಚರಣೆಯ ಹೊತ್ತಲ್ಲೇ ಆಡಳಿತದ ಮೂರೂ ಪ್ರಮುಖ ಸ್ಥಾನಗಳಲ್ಲಿ ಮಹಿಳೆಯರೇ ಇರುವುದು ಗ್ರಾಮಸ್ಥರಲ್ಲಿ ಸಮಾಧಾನ ತಂದಿದ್ದು, ಸ್ತ್ರೀ ಶಕ್ತಿಗೆ ಸಿಕ್ಕ ದೊಡ್ಡ ಗೌರವ ಎಂದು ಬಣ್ಣಿಸಲಾಗುತ್ತಿದೆ. ಆಯ್ಕೆಯ ನಂತರ ಮಾತನಾಡಿದ ನೂತನ ಅಧ್ಯಕ್ಷೆ ಸುಷ್ಮಾ ಹರೀಶ್, "ಹಿರಿಯ ಮುಖಂಡ ಬಿ.ಸಿ. ಆನಂದಕುಮಾರ್, ತಿ. ರಂಗರಾಜು ಹಾಗೂ ಬಿ.ಎಚ್. ಕೆಂಪಣ್ಣ ಅವರ ಮಾರ್ಗದರ್ಶನದಲ್ಲಿ ಗ್ರಾಮದ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಿದ್ದೇವೆ. ಈಗಾಗಲೇ ಅಭಿವೃದ್ಧಿ ಪಥದಲ್ಲಿರುವ ಪಂಚಾಯಿತಿಯನ್ನು ಮತ್ತಷ್ಟು ಪ್ರಗತಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ," ಎಂದರು. ಈ ವೇಳೆ ಬಿ.ಸಿ. ಆನಂದ್, ತಿ. ರಂಗರಾಜು, ಬಿ.ಎಚ್. ಕೆಂಪಣ್ಣ, ಮಾಜಿ ಅಧ್ಯಕ್ಷೆ ರುದ್ರಾಣಮ್ಮ ಮಂಜುನಾಥ್, ಹೊಸಹುಡ್ಯ ಆನಂದ್ ಸೇರಿದಂತೆ ಪಂಚಾಯಿತಿಯ ಎಲ್ಲಾ ಸದಸ್ಯರು, ಮುಖಂಡರು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.

# ಭಿಕ್ಷಾಟನೆ ಮಾಫಿಯಾವಿದ್ದು ಕ್ರಮ ಕೈಗೊಳ್ಳಿ: ಗೋವಿಂದರಾಜು

ಬೆಂಗಳೂರು: ಭಿಕ್ಷಾಟನೆ ಮಾಫಿಯಾ ಬೆಂಗಳೂರಿನಲ್ಲಿ ನಡೆಯುತ್ತಿದೆ. ಈ ಮಾಫಿಯಾ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಡಾ.ಕೆ.ಗೋವಿಂದರಾಜು ಸರ್ಕಾರವನ್ನು ಆಗ್ರಹ ಮಾಡಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು, ಕಾಯ್ದೆ ಬಂದು 50 ವರ್ಷ ಆದರೂ ರಾಜ್ಯದಲ್ಲಿ ಭಿಕ್ಷಾಟನೆ ನಿಂತಿಲ್ಲ. ಬೆಂಗಳೂರಿನ ಮಾರ್ಕೆಟ್, ಎಂಜಿ ರೋಡ್ ಸೇರಿ ಹಲವು ಕಡೆ ಭಿಕ್ಷಾಟನೆ ಜಾಸ್ತಿಯಿದೆ. ಭಿಕ್ಷಾಟನೆ ಹಿಂದೆ ದೊಡ್ಡ ಮಾಫಿಯಾ ಇದ್ದು ಏಜೆಂಟ್ ಒಬ್ಬ ಕರೆದುಕೊಂಡು ಬಂದು ಬಿಟ್ಟು ಹೋಗಿ ಭಿಕ್ಷಾಟನೆ ಮಾಡಿಸ್ತಾನೆ. ಚಿಕ್ಕ ಮಕ್ಕಳನ್ನ ಕರೆದುಕೊಂಡು ಭಿಕ್ಷಾಟನೆ ಮಾಡುತ್ತಾರೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಅವರು, ಕಾಯ್ದೆ ಬಂದು 50 ವರ್ಷ ಆದರೂ ರಾಜ್ಯದಲ್ಲಿ ಭಿಕ್ಷಾಟನೆ ನಿಂತಿಲ್ಲ. ಬೆಂಗಳೂರಿನ ಮಾರ್ಕೆಟ್, ಎಂಜಿ ರೋಡ್ ಸೇರಿ ಹಲವು ಕಡೆ ಭಿಕ್ಷಾಟನೆ ಜಾಸ್ತಿಯಿದೆ. ಭಿಕ್ಷಾಟನೆ ಹಿಂದೆ ದೊಡ್ಡ ಮಾಫಿಯಾ ಇದ್ದು ಏಜೆಂಟ್ ಒಬ್ಬ ಕರೆದುಕೊಂಡು ಬಂದು ಬಿಟ್ಟು ಹೋಗಿ ಭಿಕ್ಷಾಟನೆ ಮಾಡಿಸ್ತಾನೆ. ಚಿಕ್ಕ ಮಕ್ಕಳನ್ನ ಕರೆದುಕೊಂಡು ಭಿಕ್ಷಾಟನೆ ಮಾಡುತ್ತಾರೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಸಚಿವ ಮಹದೇವಪ್ಪ ಉತ್ತರ ನೀಡಿ, ಭಿಕ್ಷಾಟನೆಗೆ ಮಾಫಿಯಾ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. 16 ವರ್ಷ ಒಳಗೆ ಯಾರಾದರೂ ಭಿಕ್ಷಾಟನೆ ಮಾಡಿದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾಹಿತಿ ಇದ್ದರೆ ಮಾಹಿತಿ ನೀಡಬಹುದು. ಭಿಕ್ಷಾಟನೆಗೆ ಮಾಫಿಯಾ ಇದ್ದರೆ ಪೊಲೀಸ್ ಇಲಾಖೆಗೆ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉತ್ತರಿಸಿದರು.

# 50 ಸಾವಿರ ಹುದ್ದೆ ಭರ್ತಿಗೆ ಆಕ್ರೋಶ




ಮಧುಗಿರಿ

ರಾಜ್ಯಪಾಲರ ಅಂಗೀಕಾರವಿದ್ದರೂ 50,432 ಸರ್ಕಾರಿ ಹುದ್ದೆಗಳಿಗೆ ಒಳ ಮೀಸಲಾತಿ ಅನ್ವಯಿಸದೆ ಭರ್ತಿ ಮಾಡಲು ಹೊರಟಿರುವ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ದ್ರೋಹ ಎಂದು ಮಾದಿಗ ಒಳ ಮೀಸಲಾತಿ ಹೋರಾಟ ತಾಲ್ಲೂಕು ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ. ಗುರುವಾರ ಪಟ್ಟಣದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದ ಸಮಿತಿಯು ಉಪ ವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ಸಂವಿಧಾನ ವಿರೋಧಿ ಧೋರಣೆ:

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ವಕೀಲ ಬಾಣದ ರಂಗಯ್ಯ, "ಕಳೆದ 35 ವರ್ಷಗಳಿಂದ ಮಾದಿಗ ಸಮುದಾಯ ತನ್ನ ಹಕ್ಕುಗಳಿಗಾಗಿ ಹೋರಾಡುತ್ತಿದೆ. ಎರಡು ತಲೆಮಾರಿನ ಯುವಕರು ಉದ್ಯೋಗ ಮತ್ತು ಆರ್ಥಿಕ ಸಮಾನತೆ ಕಳೆದುಕೊಂಡಿದ್ದಾರೆ. ಒಳ ಮೀಸಲಾತಿ ಜಾರಿಯಾಗದಂತೆ ತಡೆಯುವುದು ಪರೋಕ್ಷವಾಗಿ ಹಿಂದುತ್ವವಾದಿ ರಾಜಕಾರಣಕ್ಕೆ ಶಕ್ತಿ ತುಂಬಿದಂತಾಗುತ್ತದೆ" ಎಂದು ಆರೋಪಿಸಿದರು.

ಸಚಿವರಿಗೆ ನೇರ ಎಚ್ಚರಿಕೆ:

ಮುಖಂಡ ಹೆಚ್.ಎಂ.ಟಿ. ನರಸಿಯಪ್ಪ ಮಾತನಾಡಿ, "ಸಚಿವ ಡಾ. ಜಿ. ಪರಮೇಶ್ವರ್, ಹೆಚ್.ಸಿ. ಮಹದೇವಪ್ಪ ಹಾಗೂ ಪ್ರಿಯಾಂಕ್ ಖರ್ಗೆ ಅವರು ಸಮುದಾಯದ ವಿರೋಧಿಗಳಂತೆ ವರ್ತಿಸುತ್ತಿದ್ದಾರೆ. ನಾಗಮೋಹನ್ ದಾಸ್ ವರದಿಯನ್ನು ಯಥಾವತ್ತಾಗಿ ಜಾರಿಗೆ ತರದಿದ್ದರೆ ರಾಜ್ಯದಲ್ಲಿ ಕಾಂಗ್ರೆಸ್ ನಿರ್ನಾಮವಾಗಲಿದೆ. ಮುಂಬರುವ ಚುನಾವಣೆಯಲ್ಲಿ ಡಾ. ಜಿ. ಪರಮೇಶ್ವರ್ ಅವರಿಗೆ ತಕ್ಕ ಪಾಠ ಕಲಿಸಲಾಗುವುದು" ಎಂದು ಗುಡುಗಿದರು.

ಒಗ್ಗಟ್ಟಿನ ಹೋರಾಟದ ಕರೆ: ಜೀವಿಕ ಸಂಘಟನೆಯ ಮಂಜುನಾಥ್ ಅವರು ಹೋರಾಟದ ತೀವ್ರತೆಯನ್ನು ವಿವರಿಸುತ್ತಾ, "ನಾವು ನಾಯಿಯಂತೆ ಚದುರಬಾರದು, ಹೆಜ್ಜೇನುಗಳಂತೆ ಒಗ್ಗಟ್ಟಾಗಬೇಕು. ಹೆಜ್ಜೇನು ಗೂಡಿಗೆ ಕಲ್ಲೆಸೆದವರು ಯಾರೂ ಉಳಿದಿಲ್ಲ. ಸರ್ಕಾರ ನಮ್ಮ ಮರಣಶಾಸನ ಬರೆಯಲು ಹೊರಟಿದೆ, ನಾವು ಹೋರಾಡಿ ನಮ್ಮ ಹಕ್ಕನ್ನು ಕಸಿದುಕೊಳ್ಳೋಣ" ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಮಾದಿಗ ದಂಡೋರ ರಾಜ್ಯ ಉಪಾಧ್ಯಕ್ಷ ತೊಂಡೋಟಿ ರಾಮಾಂಜಿ, ವಕೀಲ ನರಸಿಂಹಮೂರ್ತಿ, ಮುಖಂಡರಾದ ಸಿದ್ದಗಂಗಪ್ಪ, ಎಂ.ಸಿ. ರಾಮಣ್ಣ ಸೇರಿದಂತೆ ನೂರಾರು ಹೋರಾಟಗಾರರು ಭಾಗವಹಿಸಿದ್ದರು.

# 14ರಂದು 'ಸೋಮನಾಥ ಜ್ಯೋತಿರ್ಲಿಂಗ' ದರ್ಶನ ಭಾಗ್ಯ



ದೊಡ್ಡಬಳ್ಳಾಪುರ

ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಸೋಮೇಶ್ವರ ದೇವಾಲಯದಲ್ಲಿ ಇದೇ 14ರ ಶನಿವಾರದಂದು ಸಾವಿರ ವರ್ಷಗಳ ಇತಿಹಾಸವಿರುವ ಅತ್ಯಂತ ಪವಿತ್ರ 'ಸೋಮನಾಥ ಜ್ಯೋತಿರ್ಲಿಂಗ'ದ ದರ್ಶನಕ್ಕೆ ಭಕ್ತಾದಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹಾರ್ಟ್ ಆಫ್ ಲಿವಿಂಗ್ ಸಂಸ್ಥೆಯ ಪ್ರಮುಖರಾದ ಸುನಿಲ್ ವೆಂಕಟೇಶ್ ತಿಳಿಸಿದರು.

ನಗರದ ಹಾರ್ಟ್ ಆಫ್ ಲಿವಿಂಗ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಜ್ಯೋತಿರ್ಲಿಂಗದ ವಿಶೇಷ ಹಿನ್ನೆಲೆಯನ್ನು ವಿವರಿಸಿದರು.

ಜ್ಯೋತಿರ್ಲಿಂಗದ ಇತಿಹಾಸ: ಹಿಂದೆ ಮೊಘಲರ ದಾಳಿಯಿಂದಾಗಿ ಛಿದ್ರಗೊಂಡಿದ್ದ ಈ ಸೋಮನಾಥ ಜ್ಯೋತಿರ್ಲಿಂಗವು ಸೀತಾ ರಾಮ ಶಾಸ್ತ್ರಿಗಳ ಮೂಲಕ 2025ರಲ್ಲಿ ಹಾರ್ಟ್ ಆಫ್ ಲಿವಿಂಗ್ ಸಂಸ್ಥಾಪಕರಾದ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ ಕೈ ಸೇರಿತ್ತು. ಈ ಪವಿತ್ರ ಲಿಂಗವನ್ನು ದೇಶದಾದ್ಯಂತ ಜನರಿಗೆ ದರ್ಶನ ಮಾಡಿಸಬೇಕೆಂಬ ಗುರೂಜಿಯವರ ಸಂಕಲ್ಪದಂತೆ, ದೊಡ್ಡಬಳ್ಳಾಪುರ ಜನತೆಗಾಗಿ ಮಾರ್ಚ್ 14ರಂದು ಬೆಳಿಗ್ಗೆ 7ರಿಂದ 11 ಗಂಟೆಯವರೆಗೆ ವಿಶೇಷ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು.

100 ದಂಪತಿಗಳಿಂದ ರುದ್ರಾರ್ಚನೆ: ಅಂದು ಬೆಳಿಗ್ಗೆ ಜ್ಯೋತಿರ್ಲಿಂಗಕ್ಕೆ ವಿಶೇಷ ರುದ್ರಾಭಿಷೇಕ ನೆರವೇರಲಿದೆ. ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಲು 100 ದಂಪತಿಗಳಿಗೆ ಅವಕಾಶ ನೀಡಲಾಗಿದ್ದು, ಇದಕ್ಕಾಗಿ ಮುಂಗಡ ಬುಕಿಂಗ್ ವ್ಯವಸ್ಥೆ ಮಾಡಲಾಗಿದೆ. ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದ್ದು, ತಾಲ್ಲೂಕು ಮತ್ತು ಜಿಲ್ಲೆಯ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕು ಎಂದು ಅವರು ಮನವಿ ಮಾಡಿದರು.

# ಅವೈಜ್ಞಾನಿಕ ರಸ್ತೆ ಅಗಲೀಕರಣ ಸವಾರರಿಗೆ ತಪ್ಪದ ಆತಂಕ



ವಿಜಯಪುರ

ಪಟ್ಟಣದ ಕೋಲಾರ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ರಸ್ತೆ ಅಗಲೀಕರಣ ಕಾಮಗಾರಿಯು ಅವೈಜ್ಞಾನಿಕತೆಯಿಂದ ಕೂಡಿದ್ದು, ವಾಹನ ಸವಾರರ ಪ್ರಾಣಕ್ಕೆ ಕಂಟಕವಾಗಿ ಪರಿಣಮಿಸಿದೆ. ರಸ್ತೆಯ ಮಧ್ಯೆ ಬಿಡಲಾಗಿರುವ ತಿರುವುಗಳ ಬಳಿ ಜಲ್ಲಿ ಕುಸಿಯುತ್ತಿರುವುದರಿಂದ ನಿತ್ಯ ಅಪಘಾತಗಳು ಸಂಭವಿಸುತ್ತಿವೆ.

ವೇಗದ ರಸ್ತೆಯಲ್ಲಿ ತಪ್ಪದ ಅಪಾಯ:

ಕೋಲಾರ ಮುಖ್ಯರಸ್ತೆಯು ಸಿಮೆಂಟ್ ಕಾಂಕ್ರೀಟ್ ಆಗಿರುವುದರಿಂದ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತವೆ. ಈ ರಸ್ತೆಯ ಇಕ್ಕೆಲಗಳಲ್ಲಿ ಹಲವಾರು ಶಾಲೆಗಳಿದ್ದು, ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಬಿಡಲು ದ್ವಿಚಕ್ರ ವಾಹನಗಳಲ್ಲಿ ಬರುತ್ತಾರೆ. ರಸ್ತೆಯ ತಿರುವುಗಳಲ್ಲಿ ವಿಭಜಕಕ್ಕೆ ಹಾಕಲಾದ ಜಲ್ಲಿ ರಸ್ತೆಯ ಮೇಲೆ ಹರಡಿಕೊಂಡಿದ್ದು, ವಾಹನಗಳು ಸ್ಕಿಡ್ ಆಗುತ್ತಿವೆ. ಇದರಿಂದ ರಸ್ತೆ ದಾಟುವಾಗ ಪೋಷಕರು ಮತ್ತು ಮಕ್ಕಳು ಪ್ರಾಣಾಪಾಯಕ್ಕೆ ಸಿಲುಕುತ್ತಿದ್ದಾರೆ.

ಅನಾನುಕೂಲವೇ ಹೆಚ್ಚು:

"ರಸ್ತೆ ತಿರುವುಗಳ ನಡುವೆ ಹಾಕಿದ್ದ ಜಲ್ಲಿ ಕುಸಿದು ಬೀಳುತ್ತಿರುವುದರಿಂದ ಕಾರು ಮತ್ತು ದ್ವಿಚಕ್ರ ವಾಹನಗಳು ಸಿಲುಕಿಕೊಳ್ಳುತ್ತಿವೆ. ಈಗಾಗಲೇ ಕೆಲವು ಸವಾರರು ಬಿದ್ದು ಗಾಯಗೊಂಡಿದ್ದಾರೆ. ಇಲ್ಲಿ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದೆ. ಸಂಬಂಧಪಟ್ಟ ಗುತ್ತಿಗೆದಾರರು ತಕ್ಷಣವೇ ಕಾಮಗಾರಿ ಮುಕ್ತಾಯಗೊಳಿಸಿ, ತಿರುವುಗಳನ್ನು ಸರಿಪಡಿಸಬೇಕು" ಎಂದು ಸ್ಥಳೀಯ ನಿವಾಸಿ ಐ.ಎಂ. ಶಫಿ ಆಗ್ರಹಿಸಿದ್ದಾರೆ.

ಇಲ್ಲಿನ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ದೊಡ್ಡ ಅನಾಹುತ ಸಂಭವಿಸುವ ಮೊದಲೇ ಎಚ್ಚೆತ್ತುಕೊಂಡು, ಕುಸಿದಿರುವ ರಸ್ತೆಯನ್ನು ದುರಸ್ತಿಗೊಳಿಸಿ ವಾಹನ ಸವಾರರ ಸುರಕ್ಷತೆಗೆ ಆದ್ಯತೆ ನೀಡಬೇಕಿದೆ.

# ಕಾಂಗ್ರೆಸ್ ಬಲವರ್ಧನೆಗೆ ಸಜ್ಜಾದ ನಾಗರಾಜ್ ತಂಡ



ಬೇತಮಂಗಲ

ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ದೀರ್ಘಕಾಲದಿಂದ ಸಕ್ರಿಯರಾಗಿರುವ ನಾಗರಾಜ್ ಅವರು ಬೇತಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ಏರ್ಟೆಲ್ ಸುರೇಶ್ ಮತ್ತು ಅವರ ಬೆಂಬಲಿಗರು ನಾಗರಾಜ್ ಅವರ ಮನೆಗೆ ಭೇಟಿ ನೀಡಿ, ಶಾಲು ಹೊದಿಸಿ ಹೂಗುಚ್ಛ ನೀಡುವ ಮೂಲಕ ಅಭಿನಂದಿಸಿ ಗೌರವಿಸಿದರು.

ನಿಷ್ಠಾವಂತರಿಗೆ ಯಾವಾಗಲೂ ಮನ್ನಣೆ: ಸನ್ಮಾನದ ನಂತರ ಮಾತನಾಡಿದ ಏರ್ಟೆಲ್ ಸುರೇಶ್, "ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿಯುವ ಕಾರ್ಯಕರ್ತರಿಗೆ ಕಾಂಗ್ರೆಸ್‌ನಲ್ಲಿ ಯಾವಾಗಲೂ ಮನ್ನಣೆ ಇರುತ್ತದೆ. ನಾಗರಾಜ್ ಅವರಂತಹ ಅನುಭವವಿರುವ ನಾಯಕರ ಆಯ್ಕೆಯಿಂದ ಬೇತಮಂಗಲ ಭಾಗದಲ್ಲಿ ಪಕ್ಷ ಮತ್ತಷ್ಟು ಬಲಗೊಳ್ಳಲಿದೆ. ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಎಲ್ಲರನ್ನೂ ಒಗ್ಗೂಡಿಸಿ ಪಕ್ಷದ ಸಿದ್ಧಾಂತಗಳನ್ನು ಮನೆಮನೆಗೆ ತಲುಪಿಸಬೇಕು" ಎಂದು ಹಾರೈಸಿದರು.

ಸೇವೆ ಗುರುತಿಸಿದ ಪಕ್ಷಕ್ಕೆ ಧನ್ಯವಾದ: ಸನ್ಮಾನ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ನಾಗರಾಜ್, "ಕಳೆದ 25 ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದೇನೆ. ನನ್ನ ಸುದೀರ್ಘ ಸೇವೆಯನ್ನು ಗುರುತಿಸಿ ಹೈಕಮಾಂಡ್ ಇಂದು ಈ ಜವಾಬ್ದಾರಿ ನೀಡಿದೆ. ಬ್ಲಾಕ್ ಮಟ್ಟದಲ್ಲಿ ಕಾಂಗ್ರೆಸ್ ಅನ್ನು ತಳಮಟ್ಟದಿಂದ ಕಟ್ಟಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ನನ್ನ ಬೆಂಬಲಕ್ಕೆ ನಿಂತ ಏರ್ಟೆಲ್ ಸುರೇಶ್ ಹಾಗೂ ಸಮಸ್ತ ಕಾರ್ಯಕರ್ತರಿಗೆ ಧನ್ಯವಾದಗಳು" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆಜಿಎಫ್ ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಸಕ್ಲೇನ್, ಮಾಜಿ ಗ್ರಾಪಂ ಸದಸ್ಯ ರಮೇಶ್, ಮುಖಂಡರಾದ ಅನಿಲ್ ಕುಮಾರ್, ಶ್ರೀರಾಮ್, ಮಂಜು ಎನ್, ಕೃಷ್ಣ ರೆಡ್ಡಿ, ಯತೀಶ್ ಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸೇವಾ ರಫ್ತಿನಲ್ಲಿ ಕರ್ನಾಟಕಕ್ಕೆ ದೇಶದಲ್ಲೇ ನಂ.1 ಸ್ಥಾನ: ಗಣೇಶ್ ರಾವ್

ತುಮಕೂರು

"ಕರ್ನಾಟಕದ ರಫ್ತು ವಲಯವು ಅತ್ಯಂತ ಪ್ರಕಾಶಮಾನವಾದ ಭವಿಷ್ಯವನ್ನು ಹೊಂದಿದ್ದು, ಜಾಗತಿಕ ಮಟ್ಟದಲ್ಲಿ ರಾಜ್ಯಕ್ಕೆ ಇನ್ನಷ್ಟು ಸಾಧನೆ ಮಾಡಲು ವಿಪುಲ ಅವಕಾಶಗಳಿವೆ," ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಗಣೇಶ್ ರಾವ್ ಬಿ.ಆರ್. ತಿಳಿಸಿದರು.

ನಗರದ ಬಟವಾಡಿ ಸಮೀಪದ ಅರ್ಬನ್ ರೆಸಾರ್ಟ್‌ನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕಾಸಿಯಾ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಎಂಎಸ್‌ಎಂಇಗಳ ಕಾರ್ಯಕ್ಷಮತೆ ಹೆಚ್ಚಳ ಮತ್ತು ವೇಗವರ್ಧನೆ ಯೋಜನೆಯಡಿ ರಫ್ತು ಕುರಿತ ಒಂದು ದಿನದ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಫ್ತು ಕ್ಷೇತ್ರದಲ್ಲಿ ರಾಜ್ಯದ ಸಾಧನೆ:

ಸೇವಾ ರಫ್ತು: ಕರ್ನಾಟಕವು ದೇಶದಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಕಳೆದ ವರ್ಷ ಸುಮಾರು 160 ಬಿಲಿಯನ್ ಡಾಲರ್ ರಫ್ತು ದಾಖಲಿಸಿದೆ.

ಸರಕು ರಫ್ತು: ದೇಶದಲ್ಲಿ 4ನೇ ಸ್ಥಾನದಲ್ಲಿದ್ದು, 30 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ಹೊರದೇಶಗಳಿಗೆ ಕಳುಹಿಸಿದೆ.

ಎಂ.ಎಸ್.ಎಂ.ಇ ಪಾಲು: ಒಟ್ಟು ರಫ್ತುಗಳಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಪಾಲು ಶೇ. 28ರಷ್ಟಿದೆ.

ಕೇಂದ್ರದಿಂದ 25 ಸಾವಿರ ಕೋಟಿ ಯೋಜನೆ: ಕೇಂದ್ರ ಸರ್ಕಾರವು ರಫ್ತುದಾರರನ್ನು ಉತ್ತೇಜಿಸಲು 25 ಸಾವಿರ ಕೋಟಿ ರೂ. ವೆಚ್ಚದಲ್ಲಿ 7 ಹೊಸ ಯೋಜನೆಗಳನ್ನು ಘೋಷಿಸಿದೆ. ಇವುಗಳಲ್ಲಿ 3 ಯೋಜನೆಗಳು ಹಣಕಾಸಿನ ನೆರವು ನೀಡಿದರೆ, ಉಳಿದ 4 ಯೋಜನೆಗಳು ರಫ್ತು ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ತಾಂತ್ರಿಕ ಸಹಾಯ ನೀಡಲಿವೆ. ಇ-ಕಾಮರ್ಸ್ ಮೂಲಕ ರಫ್ತು ಮಾಡುವ ಬ್ರ್ಯಾಂಡ್‌ಗಳಿಗೆ ಕ್ರೆಡಿಟ್ ಸೌಲಭ್ಯ ಮತ್ತು ಲಾಜಿಸ್ಟಿಕ್ ನೆರವು ನೀಡುವ ಮೂಲಕ ರಫ್ತು ಪ್ರಕ್ರಿಯೆಯನ್ನು ಸರಳಗೊಳಿಸಲಾಗುತ್ತಿದೆ ಎಂದು ಗಣೇಶ್ ರಾವ್ ವಿವರಿಸಿದರು.

ಉದ್ಯಮಿಗಳಿಗೆ ವರದಾನ: ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಪಿ. ಕುರಂದವಾಡ ಮಾತನಾಡಿ, "ತುಮಕೂರು ನಗರದ ಕೈಗಾರಿಕೆಗಳಿಗೆ ಈ ಕಾರ್ಯಕ್ರಮ ಅತ್ಯಂತ ಪ್ರಯೋಜನಕಾರಿ," ಎಂದರು. ವಸಂತನರಸಾಪುರ ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಡಾ. ಸಿ.ವಿ. ಹರೀಶ್ ಮಾತನಾಡಿ, "ಹೊಸದಾಗಿ ಕೈಗಾರಿಕೆ ಸ್ಥಾಪಿಸುವವರಿಗೆ ಮತ್ತು ರಫ್ತು ಮಾಡಲು ಬಯಸುವವರಿಗೆ ಆರ್‌ಎಎಂಪಿ ಯೋಜನೆ ಉತ್ತಮ ಮಾರ್ಗದರ್ಶನ ನೀಡಲಿದೆ," ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಕಾಸಿಯಾ ಉಪಾಧ್ಯಕ್ಷ ನಿಂಗಣ್ಣ ಎಸ್. ಬಿರಾದರ್ ವಹಿಸಿದ್ದರು. ಸಮಾರಂಭದಲ್ಲಿ ತುಮಕೂರು ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಸುಜ್ಞಾನ ಹಿರೇಮಠ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ನಾಗರಾಜ್ ಸೇರಿದಂತೆ ಹಲವಾರು ಗಣ್ಯ ಉದ್ಯಮಿಗಳು ಉಪಸ್ಥಿತರಿದ್ದರು.

# ನೀರಿಲ್ಲವೇ? ಈ ನಂಬರ್‌ಗೆ ಕರೆ ಮಾಡಿ!

ಕೋಲಾರ

ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಬೇಸಿಗೆಯ ತಾಪಮಾನವನ್ನು ಗಮನದಲ್ಲಿಟ್ಟುಕೊಂಡು, ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಜಿಲ್ಲಾ ಪಂಚಾಯತ್ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಸಾರ್ವಜನಿಕರ ದೂರುಗಳನ್ನು ತ್ವರಿತವಾಗಿ ಆಲಿಸಿ ಪರಿಹರಿಸಲು ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಯ ಜೊತೆಗೆ ಈಗ ಎಲ್ಲಾ ತಾಲ್ಲೂಕು ಪಂಚಾಯತಿಗಳಲ್ಲೂ ವಿಶೇಷ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದೆ.

ದೂರು ನೀಡಲು ಸಹಾಯವಾಣಿ ಸಂಖ್ಯೆಗಳು:

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ ಅವರ ನಿರ್ದೇಶನದಂತೆ ಈ ಕೆಳಗಿನ ಸಂಖ್ಯೆಗಳಿಗೆ ಸಾರ್ವ ಜನಿಕರು ಕರೆ ಮಾಡಿ ದೂರು ಸಲ್ಲಿಸಬಹುದಾಗಿದೆ.

24 ಗಂಟೆಯೊಳಗೆ ಪರಿಹಾರ:

ಸಹಾಯವಾಣಿಗೆ ಬಂದ ದೂರುಗಳನ್ನು ಆಯಾ ಗ್ರಾಮ ಪಂಚಾಯತಿ ಪಿಡಿಒ ಹಾಗೂ ಕುಡಿಯುವ ನೀರಿನ ಇಲಾಖೆಯ ಇಂಜಿನಿಯರ್‌ಗಳಿಗೆ ರವಾನಿಸಲಾಗುತ್ತದೆ. ದೂರು ದಾಖಲಾದ 24 ಗಂಟೆಗಳ ಒಳಗಾಗಿ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಒಂದು ವೇಳೆ ಸರ್ಕಾರಿ ಕೊಳವೆಬಾವಿಗಳಲ್ಲಿ ನೀರು ಬತ್ತಿಹೋದರೆ, ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯಲು ಅಥವಾ ಟ್ಯಾಂಕರ್ ಮೂಲಕ ನೀರು ಪೂರೈಸಲು ಸೂಚಿಸಲಾಗಿದೆ.

ನೀರು ಮಿತವಾಗಿ ಬಳಸಿ – ಸಿಇಒ ಮನವಿ:

"ಬೇಸಿಗೆಯ ಸಂದರ್ಭದಲ್ಲಿ ನೀರಿನ ಪ್ರತಿ ಹನಿಯೂ ಅಮೂಲ್ಯ. ಸಾರ್ವಜನಿಕರು ಕುಡಿಯುವ ನೀರನ್ನು ಕೃಷಿ ಅಥವಾ ಇತರೇ ಕಾರ್ಯಗಳಿಗೆ ವ್ಯರ್ಥ ಮಾಡಬಾರದು. ಜಿಲ್ಲಾಡಳಿತವು ನೀರಿನ ಅಭಾವ ನೀಗಿಸಲು ಸರ್ವ ಸನ್ನದ್ಧವಾಗಿದ್ದು, ಸಾರ್ವಜನಿಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಸಮಸ್ಯೆ ಕಂಡ ತಕ್ಷಣ ಸಹಾಯವಾಣಿಯನ್ನು ಸಂಪರ್ಕಿಸಿ," ಎಂದು ಸಿಇಒ ಡಾ. ಪ್ರವೀಣ್ ಪಿ. ಬಾಗೇವಾಡಿ ಮನವಿ ಮಾಡಿದ್ದಾರೆ.

**ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿ:**
**08152-299956**

ಕೋಲಾರ ತಾಲ್ಲೂಕು:
**08152-225652**

ಬಂಗಾರಪೇಟೆ ತಾಲ್ಲೂಕು:
**08153-255280**

ಕೆಜಿಎಫ್ ತಾಲ್ಲೂಕು:
**08153-295101**

ಮಾಲೂರು ತಾಲ್ಲೂಕು:
**08151-232213**

ಮುಳಬಾಗಿಲು ತಾಲ್ಲೂಕು:
**0815-9242045**

ಶ್ರೀನಿವಾಸಪುರ ತಾಲ್ಲೂಕು:
**08157-246932**

# ವಿದ್ಯಾರ್ಥಿಗಳ ಸುಗಮ ಪರೀಕ್ಷೆಗೆ ಮೂಲಸೌಕರ್ಯ ಖಚಿತಪಡಿಸಿ: ಡಿಸಿ

ಚಿಕ್ಕಬಳ್ಳಾಪುರ

ಎಸ್.ಎಸ್.ಎಲ್.ಸಿ ಪರೀಕ್ಷೆಗಳು ನಡೆಯುವ ವೇಳೆ ವಿದ್ಯುತ್ ಪೂರೈಕೆಯಲ್ಲಿ ಒಂದು ನಿಮಿಷವೂ ವ್ಯತ್ಯಯ ಆಗದಂತೆ ನಿರಂತರವಾಗಿ ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ತಿಳಿಸಿದರು.




ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ನ ಸರ್. ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೇಯ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, 10ನೇ ತರಗತಿಯ ಪರೀಕ್ಷೆಗಳು ಇದೆ ತಿಂಗಳ 18 ರಿಂದ ಏಪ್ರಿಲ್ 2 ರವರೆಗೆ ಜಿಲ್ಲೆಯಲ್ಲಿನ 53 ಪರೀಕ್ಷಾ ಕೇಂದ್ರಗಳ್ಲಲಿ ಸಿ.ಸಿ.ಟಿ.ವಿ ನಿಗಾ ವ್ಯವಸ್ಥೆಯ ನಿಗಾದಡಿ ನಡೆಯುತ್ತವೆ,ರಾಜ್ಯ ಮಟ್ಟದ ಅಧಿಕಾರಿಗಳು ವೆಬ್ ಕಾಸ್ಟಿಂಗ್ ಆನ್ ಲೈನ್ ವ್ಯವಸ್ಥೆ ಮುಖಾಂತರವೇ ಮೇಲುಸ್ತುವಾರಿ ಮಾಡುತ್ತಿರುತ್ತಾರೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಬೇಕಿರುವ ಬೆಳಕಿನ ವ್ಯವಸ್ಥೆ, ಆಸನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರು ಹಾಗೂ ಪರೀಕ್ಷಾ ಕತ್ರ್ಯವ್ಯಕ್ಕೆ ನಿಯೋಜನೆಗೊಂಡಿರುವ ಶಿಕ್ಷಕರು ಸಿದ್ದತೆಗಳನ್ನು ಸಮರ್ಪಕವಾಗಿ ಮಾಡಿಕೊಳ್ಳಬೇಕು. ಮುಖ್ಯವಾಗಿ ಪರೀಕ್ಷಾ ಕೇಂದ್ರಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಮಾಡಿಸಬೇಕು ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಬೇಕು. ವಿದ್ಯಾರ್ಥಿಗಳು ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ಸುಗಮವಾಗಿ ಬಂದು ಹೋಗಲು ಬಸ್ ವ್ಯವಸ್ಥೆಯನ್ನು ಸಮರ್ಪಕವಾಗಿ ಕಲ್ಪಿಸಬೇಕು. ಪರೀಕ್ಷಾ ಪರಿಕರಗಳು, ಪ್ರಶ್ನೆ ಪತ್ರಿಕೆ, ಉತ್ತರ ಬರೆಯುವ ಲಿಪಿಕ ವಸ್ತುಗಳನ್ನು ಸರಿಯಾಗಿ ಒದಗಿಸಬೇಕು. ಪ್ರಶ್ನೆ ಪತ್ರಿಕೆಗಳು ಹಾಗೂ ಇತರ ಗೌಪ್ಯ ವಸ್ತುಗಳನ್ನು ಖಜಾನೆಯಲ್ಲಿ ಪೊಲೀಸ್ ಭದ್ರತೆಯೊಂದಿಗೆ ಕಾಯ್ದಿರಿಸಬೇಕು. ನಿಗದಿತ ವೇಳೆಗೆ ಪೊಲೀಸ್ ಬೆಂಗಾವಲಿನೊಂದಿಗೆ ಪಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಕ್ಕೆ ತಲುಪಿಸಬೇಕು. ಪರೀಕ್ಷಾ ಕೇಂದ್ರದ ಸುತ್ತಲೂ ಪರೀಕ್ಷೆ ನಡೆಯುವ ದಿನಾಂಕಗಳಂದು ನಿಷೇಧಾಜ್ಞೆ ಜಾರಿಯಲ್ಲಿದ್ದು, ಪರೀಕ್ಷಾ ಪಾವಿತ್ರತೆಯನ್ನು ಕಾಪಾಡಿಕೊಂಡು ಸುಲಲಿತ ಹಾಗೂ ಸುವ್ಯವಸ್ಥಿತವಾಗಿ ಪರೀಕ್ಷೆಗಳನ್ನು ಆಯೋಜನೆ ಮಾಡುವಂತೆ ಡಿಸಿ ಸೂಚನೆ ನೀಡಿದರು.

ಪರೀಕ್ಷಾ ಪೂರ್ವ ಅವಧಿಯ ಮುಂದಿನ ಒಂದು ವಾರದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆಗಳನ್ನು ಹಾಗೂ ಪುನರ್ ಮನನ ಅಭ್ಯಾಸದ ಸುಲಲಿತ ವಿಧಾನಗಳನ್ನು ತಿಳಿಸಿಕೊಡಬೇಕು ಎಂದು ಸೂಚಿಸಿದರು. ಈ ವೇಳೆ ಜಿ.ಪಂ. ಸಿಇಒ ಡಾ. ವೈ.ನವೀನ್ ಭಟ್, ಉಪವಿಭಾಗಾಧಿಕಾರಿ ಡಿ.ಹೆಚ್. ಅಶ್ವಿನ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಮೇಶ್, ವಿವಿಧ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕರ್ತವ್ಯಕ್ಕೆ ನಿಯೋಜನೆ ಆಗಿರುವ ಮೇಲ್ವಿಚಾರಕರು, ವಿವಿಧ ಶಾಲೆಗಳ ಮುಖ್ಯ ಶಿಕ್ಷಕರು ಹಾಜರಿದ್ದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishweneedam Post, Bangalore-560091. Editor: Gandasi sadanandaswamy